## ಬುಧವಾರ, ೩೦ನೇ ಜುಲೈ, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆಗೆ ಮಾನ್ಯ ಸಭಾಧ್ಯಕ್ಷ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### ಪರಿಚಯಪತ್ರಗಳ ಸಲ್ಲಿಕೆ ಮತ್ತು ದಾಖಲೆ ಪುಸ್ತಕದಲ್ಲಿ ಸಹಿ ಮಾಡುವುದು

ಈ ಕೆಳಗಿನ ಸದಸ್ಯರು ಪರಿಚಯಪತ್ರ ಸಲ್ಲಿಸಿದರು ಮತ್ತು ದಾಖಲೆ ಪುಸ್ತಕದಲ್ಲಿ ಸಹಿ ಮಾಡಿದರು:
ಶ್ರೀ ಮುಕುಂದ ಬಿಹಾರಿ ಮಲ್ಲಿಕ್ (ಪಶ್ಚಿಮ ಬಂಗಾಳ : ಸಾಮಾನ್ಯ).

### ಆಗಸ್ಟ್ ಅಧಿವೇಶನದ ಅವಧಿ

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಆಗಸ್ಟ್ ಅಧಿವೇಶನವು ಯಾವಾಗ ಮುಕ್ತಾಯವಾಗುವ ನಿರೀಕ್ಷೆಯಿದೆ ಎಂದು ನಮಗೆ ತಿಳಿಸಿದರೆ, ನಾವು ಅದಕ್ಕೆ ಅನುಗುಣವಾಗಿ ನಮ್ಮ ಕಾರ್ಯಕ್ರಮಗಳನ್ನು ಹೊಂದಿಸಿಕೊಳ್ಳುವುದು ಸಾಧ್ಯವಾಗುತ್ತದಲ್ಲವೇ?

**ಮಾನ್ಯ ಸಭಾಧ್ಯಕ್ಷರು** : ಸದಸ್ಯರೆಲ್ಲರಿಗೂ ಗೊತ್ತಿರುವಂತೆ, ಆಗಸ್ಟ್ ೧೫ರಂದು ನಾವು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವವರಿದ್ದೇವೆ ಮತ್ತು ಆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಲುವಾಗಿ ಸದಸ್ಯರೆಲ್ಲ ಇಲ್ಲಿ ಹಾಜರಿರುತ್ತಾರೆಂದು ನಿರೀಕ್ಷಿಸಲಾಗಿದೆ. ಅನಂತರ ೧೬ ಶನಿವಾರ ಮತ್ತು ೧೭ ಭಾನುವಾರವಾಗಿದ್ದು, ಸಾಮಾನ್ಯವಾಗಿ ಆ ದಿನಗಳಂದು ನಾವು ಸಭೆ ಸೇರುವುದಿಲ್ಲ. ೧೮ ಮತ್ತು ೧೯ರಂದೂ ಸಹ ಪ್ರಾಯಃ ರಜೆಯಿರಬಹುದು ಮತ್ತು ಆ ದಿನಗಳಂದು ನಾವು ಸಭೆ ಸೇರುವುದು ಸಾಧ್ಯವಿಲ್ಲದಿರಬಹುದು. ಆದ್ದರಿಂದ, ನಾವು ಸಭೆ ಸೇರಬಹುದಾದ ಮುಂದಿನ ದಿನ ೨೦ ಆಗಿದೆ ಮತ್ತು ಸದಸ್ಯರು ತಮ್ಮ ಕೆಲಸವನ್ನು ಮುಗಿಸುವುದಕ್ಕೆ ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತದೆ ಎಂಬುದನ್ನು ಇದು ಅವಲಂಬಿಸಿರುತ್ತದೆ. ಮಾಡಬೇಕಾದ ಕಾರ್ಯವೆಂದರೆ, ಕೇಂದ್ರ ಅಧಿಕಾರಗಳ ಸಮಿತಿ ಮತ್ತು ಸಲಹಾಸಮಿತಿಗಳ ವರದಿಗಳ ಪರಿಶೀಲನೆ ಮತ್ತು ಒಂದು ವೇಳೆ ಈಗ ಏನಾದರೂ ಉಳಿದುಕೊಂಡರೆ – ಹಾಗಾಗಲಾರದೆಂಬ ಭರವಸೆ ನನಗಿದೆ – ಅದನ್ನು ಮುಗಿಸಬೇಕಾಗುತ್ತದೆ. ಇತರ ವಿಷಯಗಳೂ ಸಹ ಇರಬಹುದು; ಆದರೆ, ಈ ಎರಡು, ಪರಿಗಣಿಸಬೇಕಾದ ಮುಖ್ಯ ವಿಷಯಗಳಾಗಿವೆ ಮತ್ತು ಈ ಎರಡು ವಿಷಯಗಳನ್ನು ಮುಗಿಸುವುದಕ್ಕೆ ಏಳು ಅಥವಾ ಎಂಟು ದಿವಸಗಳಿಗಿಂತ ಹೆಚ್ಚಿನ ಸಮಯ ಬೇಕಾಗಲಾರದು ಎಂದು ನಾನು ಭಾವಿಸುತ್ತೇನೆ.

**ಒಬ್ಬರು ಗೌರವಾನ್ವಿತ ಸದಸ್ಯರು** : ಅಲ್ಪಸಂಖ್ಯಾತ ಸಮಿತಿಗಳ ವರದಿಗಳನ್ನು ಕುರಿತು?

**ಮಾನ್ಯ ಸಭಾಧ್ಯಕ್ಷರು** : ಅದು ಸಲಹಾಸಮಿತಿಗಳ ವರದಿಯಲ್ಲಿ ಸೇರ್ಪಡೆಗೊಂಡಿದೆ.

**ಪ್ರೊ. ಎನ್.ಜಿ. ರಂಗ** (ಮದ್ರಾಸ್ : ಸಾಮಾನ್ಯ) : ಪ್ರಾಂತ್ಯಗಳು ಮತ್ತು ಹಸ್ತಾಂತರವಾಗದ ಭಾರತ ಒಕ್ಕೂಟಕ್ಕೆ ಸಂಬಂಧಿಸಿದ ಖಂಡಗಳ ಬಗ್ಗೆ?

**ಮಾನ್ಯ ಸಭಾಧ್ಯಕ್ಷರು** : ಒಂದು ವೇಳೆ ಸಾಧ್ಯವಾದರೆ, ಈ ವರದಿಯ ಪರಿಶೀಲನೆಯ ಕೆಲಸವನ್ನು ಮುಗಿಸಲು ಪ್ರಯತ್ನಿಸೋಣ; ಆದರೆ, ಒಂದು ವೇಳೆ ಇದರಲ್ಲಿ ಏನಾದರೂ ಉಳಿದುಕೊಂಡರೆ ಅನಂತರ ಅದನ್ನು ತೆಗೆದುಕೊಳ್ಳೋಣ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ನಾನು ಸಲಹೆ ಮಾಡಬಯಸುವುದು ಏನೆಂದರೆ, ೧೮ ಮತ್ತು ೧೯ ರಜಾ ದಿನಗಳಾಗಿರುವುದರಿಂದ, ನಾವು ೧೬ ಮತ್ತು ೧೭ರಂದು ಸಭೆ ಸೇರಬಹುದಾಗಿದೆ – ಕೊನೆಯ ದಿನ (೧೮) ಭಾನುವಾರವಾಗಿದ್ದರೂ ಸಹ. ಇದು ಭಾವನೆಗೆ ಸಂಬಂಧಿಸಿದ ತಕರಾರು ಮತ್ತು ಮುಂದಿನ ಎರಡು ದಿನಗಳು ರಜಾ ದಿನಗಳಾಗಿರುವುದರಿಂದ, ನಾವು ಭಾನುವಾರ ಕೂಡ ಸಭೆ ಸೇರಬಹುದು.

ತಿದ್ದುಪಡಿಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ನಾವು ಮನೆಯನ್ನು ತಲಪಿದ ತತ್‌ಕ್ಷಣವೇ ಇದರ ಪ್ರತಿಗಳನ್ನು ನಮಗೆ ತಲಪಿಸಿದರೆ, ಅದನ್ನು ಕುರಿತು ಚರ್ಚೆಮಾಡುವುದಕ್ಕೆ ತಯಾರಾಗಿಯೇ ನಾವು ಬರಬಹುದು ಎಂಬುದು ನನ್ನ ಸಲಹೆಯಾಗಿದೆ.

**ಗೌರವಾನ್ವಿತ ಶ್ರೀ ಬಿ.ಜಿ. ಖೇರ್** (ಬಾಂಬೆ : ಸಾಮಾನ್ಯ) : ಅತ್ಯುತ್ತಮವಾದ ಅವಧಿಯೆಂದರೆ, ೨೦ರಿಂದ ತಿಂಗಳ ಕೊನೆಯತನಕ ಸಭೆ ಸೇರುವುದು.

**ಮಾನ್ಯ ಸಭಾಧ್ಯಕ್ಷರು** : ಅದುವೇ ಉದ್ದೇಶವಾಗಿದೆ.

**ಪಂಡಿತ್ ಶ್ರೀ ಕೃಷ್ಣದತ್ತ ಪಲಿವಾಲ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಬಹುಶಃ ಸ್ವಾತಂತ್ರ್ಯ ದಿನವು ೧೬ರಂದು ಆಚರಿಸಲ್ಪಡಬಹುದು ಮತ್ತು ೧೫ರಂದು ನಾವು ಇಲ್ಲಿ ಸಭೆ ಸೇರಿದ ಅನಂತರ ಸದಸ್ಯರೆಲ್ಲರೂ ತಮ್ಮ ತಮ್ಮ ಪ್ರದೇಶಗಳಲ್ಲಿ ಏರ್ಪಡುವ ಆಚರಣೆಗಳಲ್ಲಿ ಪಾಲ್ಗೊಳ್ಳಲು ಅವರವರ ಸ್ಥಳಗಳಿಗೆ ತೆರಳಬಹುದು. ಆದ್ದರಿಂದ ೧೬ರಂದು ಸಭೆ ಸೇರುವುದಕ್ಕೆ ಸಾಧ್ಯವಿಲ್ಲ.]*

**ಮಾನ್ಯ ಸಭಾಧ್ಯಕ್ಷರು** : *[ನೀವು ಏನನ್ನು ಅಪೇಕ್ಷಿಸುತ್ತೀರಿ?]*

**ಪಂಡಿತ್ ಶ್ರೀ ಕೃಷ್ಣದತ್ತ ಪಲಿವಾಲ್** : *[ಮಾನ್ಯರೆ, ಬಹುತೇಕ ಎಲ್ಲ ಸದಸ್ಯರು ತಮ್ಮ ತಮ್ಮ ಸ್ಥಳಗಳಿಗೆ ತೆರಳುವುದರಿಂದ, ೧೬ರಂದು ಯಾವುದೇ ಕಾರ್ಯವೂ ನಡೆಯಬಾರದೆಂದು ನಾನು ಬಯಸುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು** : ಯಾರ್‍ಯಾರು ತಮ್ಮ ತಮ್ಮ ಸ್ಥಳಗಳಿಗೆ ತೆರಳಬೇಕೆಂದಿದ್ದಾರೋ ಅವರು ಹಾಗೆ ಮಾಡಬಹುದು. ನಾವು ೨೦ರಿಂದ ನಮ್ಮ ಕಾರ್ಯವನ್ನು ಪ್ರಾರಂಭಿಸೋಣ.

## ಒಕ್ಕೂಟ ಸಂವಿಧಾನ ಕುರಿತಾದ ವರದಿ

### ಭಾಗ ೪ – ಅಧ್ಯಾಯ ೧ – ಖಂಡ ೭

**ಮಾನ್ಯ ಸಭಾಧ್ಯಕ್ಷರು** : ಉಳಿದು ಹೋಗಿರುವ ಖಂಡಗಳ ಚರ್ಚೆಯನ್ನು ನಾವು ಈಗ ಕೈಗೆತ್ತಿಕೊಳ್ಳೋಣ. ಖಂಡ ೭, ಈ ರೀತಿಯಲ್ಲಿ ಉಳಿದು ಹೋಗಿರುವ ಒಂದು ಖಂಡ ಚರ್ಚೆಯಾಗಿದೆ. ಈ ಖಂಡ ೭ಕ್ಕೆ ಕರಡಿನಲ್ಲಿ, ಅಂಗೀಕೃತ ಬದಲಾವಣೆಯಿದೆ ಎಂದು ನಾನು ತಿಳಿದಿದ್ದೇನೆ. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರೇ, ಅದು ಸಿದ್ಧವಾಗಿದೆಯೇ?

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಖಂಡ ೭(೨) (ಬಿ)ಗೆ ಸಂಬಂಧಿಸಿದ ತಿದ್ದುಪಡಿ ಕುರಿತು ನಾನು ಸೂಚನೆ ನೀಡಿದ್ದೇನೆ; ಆದರೆ, ಇದರ ಬಗ್ಗೆ ಇನ್ನೂ ಕೆಲವು ತೊಂದರೆಗಳು ಉಳಿದುಕೊಂಡಿವೆ. ನಾಳೆ ಬೆಳಗಿನ ಹೊತ್ತಿಗೆ, ಸದನದ ಎರಡೂ ಭಾಗಗಳಿಗೆ ಸಮ್ಮತವಾಗುವ ರೀತಿಯಲ್ಲಿ ತಿದ್ದುಪಡಿಯನ್ನು ನಕಲು ಮಾಡುವ ಸ್ಥಿತಿಯಲ್ಲಿ ನಾನು ಇರುತ್ತೇನೆಂದು ಭಾವಿಸಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ಹಾಗಿದ್ದರೆ ನಾನು ಅದನ್ನು ದಾಟಿಕೊಂಡು (ಬಿಟ್ಟುಬಿಟ್ಟು) ಭಾಗ ೫ ಅನ್ನು ತೆಗೆದುಕೊಳ್ಳುತ್ತೇನೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಇಲ್ಲಿ ಮತ್ತೂ ಒಂದು ಖಂಡವಿದೆ; ನಾವದನ್ನು ಚುರುಕಾಗಿ ತೆಗೆದುಕೊಂಡಿದ್ದೇವೆ, ಅದು ಖಂಡ ೧೪. ಅದನ್ನು ಕುರಿತಾಗಿಯೂ ಸಹ ಸಮ್ಮತ ಪ್ರಸ್ತಾವವನ್ನು ನಾಳೆ ಮುಂಜಾನೆಯ ಹೊತ್ತಿಗೆ ಸದನದ ಮುಂದೆ ಇಡುವ ಸ್ಥಿತಿಯಲ್ಲಿ ನಾನಿರಬಹುದು ಎಂದು ಭಾವಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಪರಿಸ್ಥಿತಿ ಹಾಗಿದ್ದರೆ, ನಾನು ಭಾಗ ೫ಅನ್ನು ಪರಿಶೀಲನೆಗೆ ತೆಗೆದುಕೊಳ್ಳುತ್ತೇನೆ – ಒಕ್ಕೂಟ ಮತ್ತು ಘಟಕಗಳ ನಡುವೆ ಶಾಸನಾತ್ಮಕ ಅಧಿಕಾರಗಳ ಹಂಚಿಕೆ. ಇದಕ್ಕೆ ಸಂಬಂಧಪಟ್ಟಂತೆ, ನಾನು ಅರ್ಥಮಾಡಿಕೊಂಡ ರೀತಿಯಲ್ಲಿ, ಇಲ್ಲಿ ಯಾವುದೇ ನಿರ್ದಿಷ್ಟ ತಿದ್ದುಪಡಿಗಳಿಲ್ಲದಿದ್ದರೂ ಸಹ, ರಾಜ್ಯಗಳ ಮಂತ್ರಿಗಳ ಪರವಾಗಿ ಮಾಡಲಾದ ಸಲಹೆ ಏನೆಂದರೆ, ಕೇಂದ್ರ ಅಧಿಕಾರಗಳ ಸಮಿತಿಯ ವರದಿಯನ್ನು ಕುರಿತು ನಾವು ಚರ್ಚೆ ಮಾಡುವ ತನಕ ಅದನ್ನು ತಡೆಹಿಡಿಯಬೇಕು. ಯೋಚನೆ ಇದೇ ಅಲ್ಲವೇ?

**ಶ್ರೀ ಬಿ. ಎಲ್. ಮಿಟ್ಟರ್** (ಬರೋಡಾ ರಾಜ್ಯ) : ಹಾಗೆಯೇ, ನಾನು ಇದಕ್ಕೆ ಒಂದು ತಿದ್ದುಪಡಿಯನ್ನು ಹೊಂದಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ಆ ತಿದ್ದುಪಡಿಯನ್ನು ಈಗ ಮಂಡಿಸುವ ಆವಶ್ಯಕತೆ ಇದೆಯೇ? ನನಗನ್ನಿಸುತ್ತದೆ, ಭಾಗ ೫ರ ಪರಿಗಣನೆಯನ್ನು ತಡೆಹಿಡಿಯಬಹುದು.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಇದನ್ನು ಮುಂದೂಡುವುದರ ಬಗ್ಗೆ ನಮಗೇನೂ ಅಭ್ಯಂತರವಿಲ್ಲ.

**ಮಾನ್ಯ ಸಭಾಧ್ಯಕ್ಷರು** : ನಾವು ಕೇಂದ್ರ ಅಧಿಕಾರಗಳ ಸಮಿತಿಯ ವರದಿಯನ್ನು ಚರ್ಚಿಸುವವರೆಗೆ, ಭಾಗ ೫ರ ಪರಿಗಣನೆಯನ್ನು ಮುಂದೂಡುವುದು ಈ ಸದನದ ಆಶಯ ಎಂದು ನಾನು ತೆಗೆದುಕೊಳ್ಳುತ್ತೇನೆ.

ಸದನವು ಈಗ ಭಾಗ ೬ನ್ನು ಪರಿಶೀಲನೆಗೆ ತೆಗೆದುಕೊಳ್ಳಲಿದೆ.

## ಭಾಗ ೬ – ಖಂಡ ೧

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಯು.ಪಿ. : ಸಾಮಾನ್ಯ) : ಮಾನ್ಯರೆ, ಮಂಡಿಸುವುದಕ್ಕೆ ನಾನು ಅನುಮತಿ ಕೋರುತ್ತೇನೆ.

"೧. ಪ್ರತ್ಯೇಕವಾಗಿ ಒಕ್ಕೂಟದ ವಿಷಯಕ್ಕಾಗಿ ಶಾಸನಮಾಡುವಾಗ ಒಕ್ಕೂಟದ ಸಂಸತ್ತು ಅದನ್ನು ಘಟಕ ಸರ್ಕಾರಕ್ಕೆ, ಅದು ಪ್ರಾಂತ್ಯವಿರಬಹುದು, ಭಾರತೀಯ ರಾಜ್ಯವಿರಬಹುದು ಅಥವಾ ಇತರ ಪ್ರದೇಶವಿರಬಹುದು ಅಥವಾ ಸರ್ಕಾರದ ಯಾವುದೇ ಅಧಿಕಾರಿಯಿರಬಹುದು, ಆ ವಿಷಯಕ್ಕೆ ಸಂಬಂಧಿಸಿದ ಯಾವುದೇ ಕಾರ್ಯವನ್ನು ಒಕ್ಕೂಟದ ಸರ್ಕಾರದ ಪರವಾಗಿ ಅವರಿಗೆ ಒಪ್ಪಿಸಬಹುದು."

ಇದು ತುಂಬ ಸರಳವಾದ ಪ್ರಾಂತ್ಯವಾಗಿದ್ದು ಇದನ್ನು ಪ್ರಶಂಸಿಸುವುದಕ್ಕೆ ನನಗೆ ಯಾವುದೇ ಶಬ್ದಗಳ ಆವಶ್ಯಕತೆಯಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಈ ಖಂಡಕ್ಕೆ ರಾಯ್ ಸಾಹೇಬ್ ರಘುರಾಜ್ ಸಿಂಗ್ ಅವರು ಒಂದು ತಿದ್ದುಪಡಿಯನ್ನು ಹೊಂದಿದ್ದಾರೆ. ಆ ಸದಸ್ಯರು ಈಗ ಹಾಜರಿಲ್ಲದಿರುವುದರಿಂದ ಅವರ ಒಂದು ತಿದ್ದುಪಡಿಯನ್ನು ಮಂಡಿಸಲಾಗುತ್ತಿಲ್ಲ.

(ಶ್ರೀ ವಿ. ಐ. ಮುನಿಸ್ವಾಮಿ ಪಿಳ್ಳೈ ಅವರು ತಮ್ಮ ತಿದ್ದುಪಡಿ ಸಂಖ್ಯೆ ೩೬ನ್ನು ಮಂಡಿಸಲಿಲ್ಲ.)

**ಶ್ರೀ ನಜಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಂಡಿಸಲು ನಾನು ಪ್ರಾರ್ಥಿಸುತ್ತೇನೆ:

"ಖಂಡ ೨ರ ಉಪಖಂಡ (೧)ರಲ್ಲಿ 'ಆ ಘಟಕಕ್ಕೆ ಯಾವುದು 'ಅನ್ವಯಿಸುತ್ತದೆಯೋ ಅದು' ಎನ್ನುವ ಶಬ್ದದ ಬದಲು 'ಎಷ್ಟರ ಮಟ್ಟಿಗೆ ಅದು ಘಟಕಕ್ಕೆ ಅನ್ವಯವಾಗಬಹುದೋ ಅಷ್ಟು' ಎಂಬ ಶಬ್ದವನ್ನು ಬದಲಿಸಬೇಕು."

ನನ್ನದು ಇನ್ನೊಂದು ತಿದ್ದುಪಡಿಯಿದೆ. ಅದು ಖಂಡ ೨ಕ್ಕಾಗಿ.

**ಮಾನ್ಯ ಸಭಾಧ್ಯಕ್ಷರು** : ಗೌರವಾನ್ವಿತ ಪಂಡಿತ್ ನೆಹರು ಅವರು ಮಂಡಿಸಿದ್ದು ಖಂಡ ೧ನ್ನು ಮಾತ್ರ. ಆದ್ದರಿಂದ, ಖಂಡ ೧ಕ್ಕೆ ಸಂಬಂಧಿಸಿದ ತಿದ್ದುಪಡಿಗಳನ್ನು ಮಾತ್ರ ಈಗ ಪ್ರಸ್ತಾವಿಸಬಹುದಾಗಿದೆ.

**ಶ್ರೀ ನಜಿರುದ್ದೀನ್ ಅಹ್ಮದ್** : ನನ್ನದು ಕೇವಲ ಕರಡು ರಚನೆಯ ರೀತಿಯ ತಿದ್ದುಪಡಿಯಾಗಿದೆ.

**ರಾಯ್ ಬಹಾದೂರ್ ಲಾಲಾ ರಾಜ್ ಕನ್ವರ್** (ಪೂರ್ವ ರಾಜ್ಯಗಳು) : ರಾಯ್ ಸಾಹೇಬ್ ರಘುರಾಜ್ ಸಿಂಗ್ ಅವರು ಈಗಷ್ಟೇ ಆಗಮಿಸಿದ್ದಾರೆ; ಆದರೆ, ನಾನು ತಿದ್ದುಪಡಿ ಮಂಡಿಸಲು ತಯಾರಿ ನಡೆಸಿದ್ದೇನೆ. ಖಂಡ ೧ಕ್ಕೆ ಬದಲಿಯಾಗಿ ಕೆಳಕಂಡದ್ದನ್ನು ಸೇರಿಸಬೇಕು ಎಂದು ನಾನು ಕೋರುತ್ತೇನೆ :

"೧. ಒಕ್ಕೂಟದ ಸರ್ಕಾರವು, ಪ್ರಾಂತೀಯ ಸರ್ಕಾರ ಅಥವಾ ಒಕ್ಕೂಟ ರಾಜ್ಯದ ಆಡಳಿತಗಾರರ ಸಹಮತಿಯೊಂದಿಗೆ, ಒಕ್ಕೂಟದ ಕಾರ್ಯಕಾರಿ ಅಧಿಕಾರವು ಮುಂದುವರಿಸುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಕಾರ್ಯವನ್ನು, ಷರತ್ತುಬದ್ಧವಾಗಿ ಇಲ್ಲವೇ ಷರತ್ತುರಹಿತವಾಗಿ ಆ ಸರ್ಕಾರಕ್ಕೆ ಅಥವಾ ಆಡಳಿತಗಾರರಿಗೆ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ವಹಿಸಬಹುದು.

'ಒಕ್ಕೂಟ ರಾಜ್ಯಕ್ಕೆ ವಿಸ್ತರಿಸುವ ಒಕ್ಕೂಟ ಶಾಸನಸಭೆಯ ಕಾನೂನು ಅಧಿಕಾರವನ್ನು ಹಂಚಬಹುದು ಮತ್ತು ರಾಜ್ಯ ಅಥವಾ ಅಧಿಕಾರಿಗಳ ಮೇಲೆ ಕರ್ತವ್ಯವನ್ನು ಹೇರಬಹುದು ಮತ್ತು ಆಡಳಿತಗಾರರು ಈ ಉದ್ದೇಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳನ್ನು ನೇಮಕಮಾಡಬಹುದು."

**ಶ್ರೀ ತಾಜಮಲ್ ಹುಸೇನ್** (ಬಿಹಾರ್ : ಮುಸ್ಲಿಮ್) : ಒಂದು ಕ್ರಿಯಾಲೋಪ ಮಾನ್ಯ ಸಭಾಧ್ಯಕ್ಷರೆ, ಸದನದಲ್ಲಿ ಒಬ್ಬರು ತಿದ್ದುಪಡಿ ಕುರಿತು ಸೂಚನೆ ನೀಡಿರುವಾಗ, ಇನ್ನೊಬ್ಬ ಸದಸ್ಯರು ಆ ತಿದ್ದುಪಡಿಯನ್ನು ಮಂಡಿಸಬಹುದೇ?

**ಮಾನ್ಯ ಸಭಾಧ್ಯಕ್ಷರು** : ಇಬ್ಬರೂ ಸದಸ್ಯರು ತಿದ್ದುಪಡಿಗೆ ಸಹಿ ಮಾಡಿದ್ದಾರೆ. ಆದ್ದರಿಂದ, ಅವರು ತಿದ್ದುಪಡಿ ಮಂಡಿಸುವುದು ಸಂಪೂರ್ಣವಾಗಿ ಕ್ರಮಬದ್ಧವಾಗಿದೆ.

**ರಾಯ್ ಬಹಾದೂರ್ ಲಾಲಾ ರಾಜ್ ಕನ್ವರ್** : ಮಾನ್ಯರೆ, ಈಗಷ್ಟೇ ನನ್ನಿಂದ ಮಂಡಿಸಲ್ಪಟ್ಟ ತಿದ್ದುಪಡಿಯ ಶಬ್ದರಚನೆಯು ಭಾರತ ಸರ್ಕಾರ ಅಧಿನಿಯಮ, ೧೯೩೫ರ ಪ್ರಕರಣ ೧೨೪, ಉಪಪ್ರಕರಣ (೧) ಮತ್ತು (೩)ರ ಶಬ್ದ ರಚನೆಯನ್ನು ಆಧರಿಸಿದೆ. ಇದು ಏನನ್ನು ನಿರೀಕ್ಷಿಸುತ್ತದೆಂದರೆ, ಯಾವಾಗಲಾದರೂ ಒಕ್ಕೂಟದ ಕಾರ್ಯನಿರ್ವಾಹಕ ಅಧಿಕಾರಕ್ಕೆ ಸಂಬಂಧಿಸಿದ ವಿಷಯಗಳ ಯಾವುದೇ ಚಟುವಟಿಕೆಗಳು ವಿಸ್ತರಿಸುತ್ತವೆಯೋ ಆವಾಗ, ಅವನ್ನು ಪ್ರಾಂತೀಯ ಸರ್ಕಾರಗಳು ಅಥವಾ ರಾಜ್ಯದ ಆಡಳಿತಗಾರರು ಅಥವಾ ಅವರ ಅಧಿಕಾರಿಗಳಿಂದ ಅನುಷ್ಠಾನ ಯೋಗ್ಯಗೊಳಿಸುವುದು. ಇದು ಅವರ ಸಾಮರಸ್ಯದೊಂದಿಗೆ ನಡೆಯಬೇಕೇ ಹೊರತು ಸ್ವತಂತ್ರವಾಗಲ್ಲ; ವಿಶೇಷವೆಂದರೆ, ರಾಜ್ಯ ಅಧಿಕಾರಿಗಳು ಆಡಳಿತಗಾರರಿಂದ ನಿರ್ದೇಶಿಸಲ್ಪಡಬೇಕೇ ವಿನಾ ಒಕ್ಕೂಟದಿಂದಲ್ಲ. ಮಾನ್ಯರೆ, ಈ ತಿದ್ದುಪಡಿ ಆವಶ್ಯಕವಾಗಿರುವುದು ಏಕೆಂದರೆ, ಪ್ರಾಂತೀಯ ಅಥವಾ ರಾಜ್ಯ ವಿಭಾಗಗಳ ಚಟುವಟಿಕೆಗಳ ನಿಯೋಗವು ಅವರೊಂದಿಗೆ ಸಾಮರಸ್ಯ ಹೊಂದಿರಬೇಕು, ಅದರಲ್ಲೂ ಮುಖ್ಯವಾಗಿ ಭಾರತೀಯ ರಾಜ್ಯಗಳ ವಿಷಯದಲ್ಲಿ; ಈ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕಾದ ಅಧಿಕಾರಿಗಳು ಆಡಳಿತಗಾರರಿಂದ ಆಯ್ಕೆಯಾಗಬೇಕು. ಆದ್ದರಿಂದ ನಾನು, ಈ ತಿದ್ದುಪಡಿಯನ್ನು ಪರಿಗಣಿಸುವಂತೆ ಮತ್ತು ಸ್ವೀಕರಿಸುವಂತೆ ಸದನವನ್ನು ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಬೇರೆ ಯಾರಾದರೂ ಈ ಖಂಡ ಅಥವಾ ತಿದ್ದುಪಡಿಯನ್ನು ಕುರಿತು ಮಾತನಾಡಲು ಬಯಸುತ್ತೀರಾ? ಅವೆರಡೂ ಈಗ ಚರ್ಚೆಯ ಅಡಿಯಲ್ಲಿವೆ.

**ರಾಯ್ ಸಾಹೇಬ್ ರಘುರಾಜ್ ಸಿಂಗ್** (ಪೂರ್ವದ ರಾಜ್ಯಗಳು"ಪಂಗಡ ೨) : ಮಾನ್ಯ ಸಭಾಧ್ಯಕ್ಷರೆ, ಒಕ್ಕೂಟದ ಅಧಿಕಾರದ ನಿಯೋಗವು ಈಗಾಗಲೇ ಈ ಹಿಂದಿನ ಖಂಡದಲ್ಲಿ ಅಂದರೆ ಖಂಡ ೯ರಲ್ಲಿ ಒಪ್ಪಿಗೆಯಾಗಿದೆ. ಒಕ್ಕೂಟದ ವಿಚಕ್ಷಣೆಯ ಮೇರೆಗೆ ಅಂತಹ ನಿಯೋಗವನ್ನು ಹಿಂದಕ್ಕೆ ಪಡೆಯಬಹುದು ಎಂಬುದೂ ಸಹ ಒಪ್ಪಿಗೆಯಾಗಿದೆ. ಈಗಷ್ಟೇ ಮಂಡಿಸಲ್ಪಟ್ಟ ತಿದ್ದುಪಡಿಯು ಕೇವಲ ಏನನ್ನು ಹೇಳುತ್ತದೆಂದರೆ, ಯಾವಾಗ ಒಕ್ಕೂಟದ ಸರ್ಕಾರವು ರಾಜ್ಯಗಳಿಗಾಗಿ ನಿಯೋಗವನ್ನು ರಚಿಸುತ್ತದೆಯೋ, ಆ ಸಂದರ್ಭದಲ್ಲಿ ಅದು ಆಯಾ ರಾಜ್ಯವನ್ನು ಸಂಪರ್ಕಿಸಬೇಕು ಅಥವಾ ಅದರ ಸಹಮತ ಹೊಂದಿರಬೇಕು ಮತ್ತು ನಿಯೋಜಿತ ಅಧಿಕಾರಗಳು ರಾಜ್ಯ ಸರ್ಕಾರ ಅಥವಾ ಆಡಳಿತಗಾರರಿಂದ ಅಂಗೀಕಾರಗೊಂಡ ಸಂಸ್ಥೆಗಳ ಮೂಲಕ ಅನುಷ್ಠಾನಕ್ಕೆ ಬರಬೇಕು.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಈ ತಿದ್ದುಪಡಿಯು ಭಾರತ ಸರ್ಕಾರ ಅಧಿನಿಯಮ ೧೯೩೫ರ ಪ್ರಕರಣ ೧೨೪ ಏನನ್ನು ಹೊಂದಿದೆಯೋ ಅದನ್ನು ಬಹುಮಟ್ಟಿಗೆ ಪುನರಾವರ್ತಿಸುತ್ತದೆ. ಈಗಷ್ಟೇ ಮಂಡಿಸಲಾಗಿರುವ ಖಂಡ ೧ ಪ್ರಕರಣ ೧೨೪ರ ವಸ್ತುಸಾರವನ್ನು ನೀಡುವ ಉದ್ದೇಶವನ್ನು ಹೊಂದಿದೆ. ಆದಾಗ್ಯೂ, ಈ ತಿದ್ದುಪಡಿಯ ಮಂಡನೆಕಾರರು ಮತ್ತು ಬೆಂಬಲಿಸಿದವರಿಂದ ಸೂಚಿಸಲ್ಪಟ್ಟ ಎರಡು ಅಂಶಗಳು ಒಂದಿಷ್ಟು ವಿಚಾರಣೆಗೆ ಯೋಗ್ಯವಾಗಿವೆ. ಮೊದಲ ಅಂಶವೇನೆಂದರೆ, ನಾನು ಇದನ್ನು ಅರ್ಥಮಾಡಿಕೊಂಡಂತೆ, ಪ್ರಾಂತ್ಯಗಳು ಮತ್ತು ರಾಜ್ಯಗಳ ಮೇಲಿನ ಒಕ್ಕೂಟದ ವಿಷಯಗಳಿಗೆ ಸಂಬಂಧಪಟ್ಟಂತೆ, ಆಡಳಿತ ಕಾರ್ಯಗಳ ಹಸ್ತಾಂತರವು, ಆಯಾ ಪ್ರಾಂತ್ಯ ಅಥವಾ ರಾಜ್ಯ ಸರ್ಕಾರಗಳ ಸಹಮತದೊಂದಿಗೆ ನಡೆಯಬೇಕು. ಎರಡನೆಯ ಅಂಶವೇನೆಂದರೆ, ಒಕ್ಕೂಟದ ಶಾಸನಸಭೆಯಿಂದ ಹಸ್ತಾಂತರಿಸಲ್ಪಟ್ಟ ಅಧಿಕಾರಗಳನ್ನು ಅನುಷ್ಠಾನಗೊಳಿಸುವ ಭಾರತೀಯ ರಾಜ್ಯಗಳ ಅಧಿಕಾರಿಗಳ ಹುದ್ದೆಗಳಿಗೆ ನೇಮಕಾತಿಯು ಆಯಾ ರಾಜ್ಯಗಳ ಆಡಳಿತಗಾರರಿಂದ ಅಥವಾ ಅವರ ಸಹಮತದೊಂದಿಗೆ ಆಗಬೇಕು. ನಾನು ಹೇಳುವುದೇನೆಂದರೆ, ಯಾವಾಗ ಇಂತಹ ಕಾರ್ಯಗಳನ್ನು ಪ್ರಾಂತ್ಯಗಳು ಅಥವಾ ರಾಜ್ಯ ಸರ್ಕಾರಗಳಿಗೆ ಅಥವಾ ಆ ಸರ್ಕಾರಗಳಿಗೆ ಹಸ್ತಾಂತರಿಸುವ ಪ್ರಸ್ತಾವವಿರುತ್ತದೆಯೋ ಆವಾಗ, ಕೇಂದ್ರ ಮತ್ತು ಸಂಬಂಧಿತ ರಾಜ್ಯಗಳ ನಡುವೆ ಪೂರ್ವ ಪರ್ಯಾಲೋಚನೆಯು ಖಂಡಿತವಾಗಿ ಇರಬೇಕಾಗುತ್ತದೆ. ಅಷ್ಟಕ್ಕೂ ನಾವು ಗಮನಿಸಬೇಕಾದ ಅಂಶವೇನೆಂದರೆ, ಹಸ್ತಾಂತರಿಸಲು ಉದ್ದೇಶಿಸಿರುವ ಕಾರ್ಯಗಳು, ಒಕ್ಕೂಟದ ವಿಷಯಗಳ ಆಡಳಿತಕ್ಕೆ ಸಂಬಂಧಿಸಿದ ಕೆಲಸಗಳಾಗಿವೆ. ಒಕ್ಕೂಟದ ವಿಷಯಗಳ ಆಡಳಿತಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕರನ್ನು ಒದಗಿಸುವ ಅಧಿಕಾರವು ಅಂತಿಮವಾಗಿ ಕೇಂದ್ರದ್ದೇ ಆಗಿರುತ್ತದೆ. ನಾವು ಪರ್ಯಾಲೋಚನೆಗೆ ಅವಕಾಶ ಕಲ್ಪಿಸಬಹುದು; ಆದರೆ, ನನಗನ್ನಿಸುವುದೇನೆಂದರೆ, ಮಾನ್ಯರೆ, ಒಂದು ವೇಳೆ ನಾವು, ಒಕ್ಕೂಟದ ವಿಷಯಗಳಿಗೆ ಸಂಬಂಧಪಟ್ಟಂತೆ ಕಾರ್ಯಗಳನ್ನು ಹಸ್ತಾಂತರಿಸುವಾಗ ವಿಭಾಗೀಯ ಸರ್ಕಾರ ಅಥವಾ ವಿಭಾಗೀಯ ಸರ್ಕಾರದ ಮುಖ್ಯಸ್ಥರೊಂದಿಗೆ ಪರ್ಯಾಲೋಚಿಸಲೇಬೇಕು ಎಂಬ ನಿಬಂಧನೆಯನ್ನು ವಿಧಿಸಿದರೆ, ಅದು ಕಾರ್ಯನಿರ್ವಾಹಕ ಅಧಿಕಾರದ ಅನುಷ್ಠಾನಕ್ಕೆ ಸಂಬಂಧಿಸಿದ ನಿಯಮಗಳ ಉಲ್ಲಂಘನೆಯಾಗುತ್ತದೆ. ಈ ತಿದ್ದುಪಡಿಯು ಬಯಸುವ ವಸ್ತುಸಾರವನ್ನು ಮುಂದಿನ ಒಕ್ಕೂಟ ಸರ್ಕಾರವು ಖಂಡಿತವಾಗಿಯೂ ಪರಿಗಣಿಸುತ್ತದೆ. ಕಾರ್ಯನಿರ್ವಾಹಕ ಕ್ರಮ ಅಥವಾ ಒಕ್ಕೂಟದ ಕಾನೂನುಗಳ ಅಡಿಯಲ್ಲಿ ಇಂತಹ ಹಸ್ತಾಂತರವನ್ನು ಮಾಡುವುದಕ್ಕೆ ಮುನ್ನ ಕೇಂದ್ರ ಮತ್ತು ರಾಜ್ಯಗಳ ನಡುವೆ ಗಂಭೀರವಾದ ಪರ್ಯಾಲೋಚನೆಯು ನಡೆಯುತ್ತದೆ. ಆದ್ದರಿಂದ, ಮಾನ್ಯರೆ, ಈ ನಾನು ತಿದ್ದುಪಡಿಯನ್ನು ಸ್ವೀಕರಿಸುವಂತೆ ಶಿಫಾರಸು ಮಾಡುವ ಸ್ಥಿತಿಯಲ್ಲಿ ಇಲ್ಲ.

**ರಾಯ್ ಬಹಾದೂರ್ ಲಾಲಾ ರಾಜ್ ಕನ್ವರ್** : ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ನೀಡಿದ ಆಶ್ವಾಸನೆಗಳನ್ನು ಗಮನದಲ್ಲಿಟ್ಟುಕೊಂಡು, ನಾನು ಈ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನು ಈಗ ಖಂಡವನ್ನು ಮತಕ್ಕೆ ಹಾಕುತ್ತೇನೆ. ತಿದ್ದುಪಡಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಇದನ್ನು ಮಂಡಿಸಿದವರು, ಹಿಂದಕ್ಕೆ ಪಡೆಯಲು ಬಯಸುತ್ತಾರೆ. ಸದನವು ಅವರಿಗೆ ಈ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲು ಅನುಮತಿ ನೀಡಿದೆ ಎಂದು ನಾನು ಪರಿಗಣಿಸುತ್ತೇನೆ. ನಾನು ಈಗ ಮೂಲ ಖಂಡವನ್ನು ಮತಕ್ಕೆ ಹಾಕುತ್ತೇನೆ.

ಭಾಗ ೬ – ಖಂಡ ೧ ಅಂಗೀಕಾರವಾಯಿತು.

**ಖಂಡ ೨**

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಖಂಡ ೨ ಈ ರೀತಿಯಾಗಿದೆ:

"(೧) ತನ್ನ ಕಾರ್ಯಕಾರಿ ಶಕ್ತಿ ಮತ್ತು ಅಧಿಕಾರವನ್ನು ಎಲ್ಲಿ ಆವಶ್ಯಕವೋ ಅಲ್ಲಿ ಮತ್ತು ಎಲ್ಲಿ ಅನ್ವಯಿಸುತ್ತದೆಯೋ ಅಲ್ಲಿ, ಆ ಘಟಕಕ್ಕೆ ಅನ್ವಯವಾಗುವ ಒಕ್ಕೂಟದ ಸಂಸತ್ತಿನ ಪ್ರತಿಯೊಂದು ಕಾನೂನು, ಘಟಕದೊಳಗಿನ ವ್ಯಾಪ್ತಿಯಲ್ಲಿ ಉದ್ದೇಶದ ಈಡೇರಿಕೆಗೆ ಪರಿಣಾಮವಾಗುವ ರೀತಿಯಲ್ಲಿ ಜಾರಿಗೊಳಿಸುವುದು ಮತ್ತು ಒಕ್ಕೂಟದ ಸರ್ಕಾರದ ಅಧಿಕಾರವು ಇನ್ನೊಂದು ಬದಿಯಲ್ಲಿನ ಘಟಕ ಸರ್ಕಾರಕ್ಕೆ ನಿರ್ದೇಶನ ನೀಡುವವರೆಗೆ ವಿಸ್ತರಿಸುತ್ತದೆ.

(೨) ಒಕ್ಕೂಟದ ಸರ್ಕಾರದ ಅಧಿಕಾರವು ಘಟಕ ಸರ್ಕಾರಕ್ಕೆ ನಿರ್ದೇಶನ ನೀಡುವ ಪದ್ಧತಿ ಎಷ್ಟರ ಮಟ್ಟಿಗೆ ಮುಂದುವರಿಯುತ್ತದೆಂದರೆ, ಒಕ್ಕೂಟದ ವಿಷಯದ ಆಡಳಿತದ ಮೇಲೆ ಪ್ರಭಾವ ಬೀರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅನಂತರದ ಕಾರ್ಯಕಾರಿ ಶಕ್ತಿ ಮತ್ತು ಅಧಿಕಾರವು ಪ್ರಯೋಗವಾಗಬೇಕು."

ಈ ಎರಡು ಉಪಖಂಡಗಳು ಭಾರತ ಸರ್ಕಾರ ಅಧಿನಿಯಮ ೧೯೩೫ರ ಉಪಬಂಧ (ನಿಯಮ) ಗಳ ವಸ್ತುಸಾರದಲ್ಲಿ ನಿಜಕ್ಕೂ ಪುನರಾವರ್ತನೆಯಾಗುತ್ತವೆ. ಇವು ಕೇಂದ್ರ ಮತ್ತು ಘಟಕಗಳ ನಡುವಣ ಅಧಿಕಾರಗಳ ಸಂಘರ್ಷವನ್ನು ತಡೆಯುವ ಉದ್ದೇಶವನ್ನು ಹೊಂದಿವೆ. ಘಟಕ ಸರ್ಕಾರಗಳು ತಮ್ಮ ಕಾರ್ಯನಿರ್ವಾಹಕ ಅಧಿಕಾರಗಳನ್ನು, ಅಂದರೆ, ಘಟಕ ವಿಷಯಗಳಿಗೆ ಸಂಬಂಧಿಸಿದ ಕಾರ್ಯನಿರ್ವಾಹಕ ಅಧಿಕಾರಗಳನ್ನು ಮಾತ್ರ ಅನುಷ್ಠಾನಗೊಳಿಸುವಂತೆ, ಒಕ್ಕೂಟದ ವಿಷಯಗಳಲ್ಲಿನ ಕಾರ್ಯನಿರ್ವಾಹಕ ಅಧಿಕಾರಗಳಲ್ಲಿ ತಲೆ ತೂರಿಸದಂತೆ ನೋಡಿಕೊಳ್ಳುವ ಉದ್ದೇಶವನ್ನೂ ಸಹ ಇವು ಹೊಂದಿವೆ. ಮಾನ್ಯರೆ, ಇದಕ್ಕಿಂತ ಹೆಚ್ಚಿನ ವಿವರಣೆ ಬೇಕಾಗುತ್ತದೆ ಎಂದು ನಾನು ಭಾವಿಸುವುದಿಲ್ಲ. ಮಾನ್ಯರೇ, ನಾನು ಮಂಡಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ನಾನು ಮಂಡಿಸುತ್ತೇನೆ :

"ಖಂಡ ೨ರ ಉಪಖಂಡ (೧)ರಲ್ಲಿ 'ಆ ಘಟಕಕ್ಕೆ ಯಾವುದು ಅನ್ವಯಿಸುತ್ತದೆಯೋ ಅದು' ಎನ್ನುವ ಶಬ್ದದ ಬದಲು 'ಎಷ್ಟರ ಮಟ್ಟಿಗೆ ಅದು ಘಟಕಕ್ಕೆ ಅನ್ವಯವಾಗಬಹುದೋ ಅಷ್ಟು' ಎಂಬ ಶಬ್ದವನ್ನು ಬದಲಿಸಬೇಕು."

ಮಾನ್ಯರೇ, ನಾನು ತಿದ್ದುಪಡಿ ಸಂಖ್ಯೆ ೩೬೫ನ್ನೂ ಕೂಡ ಮಂಡಿಸಬಹುದೇ?

**ಮಾನ್ಯ ಸಭಾಧ್ಯಕ್ಷರು :** ಸರಿ.

**ಶ್ರೀ ನಜಿರುದ್ದೀನ್ ಅಹ್ಮದ್ :** ನನ್ನ ಇನ್ನೊಂದು ತಿದ್ದುಪಡಿ ಏನೆಂದರೆ :

"ಖಂಡ ೨ರ ಉಪಖಂಡ (೨)ರಲ್ಲಿ, 'ಘಟಕ ಸರ್ಕಾರ' ಎಂಬ ಶಬ್ದದ ಬದಲು 'ಘಟಕ ಸರ್ಕಾರಗಳು' ಎಂದು ಬದಲಿಸಬೇಕು."

ಮಾನ್ಯರೆ, ಇವೆರಡೂ ಕರಡು ತಿದ್ದುಪಡಿಗಳು ಮತ್ತು ಕರಡು ರಚನಾಸಮಿತಿಗೆ ಸಲಹೆಯ ರೂಪದಲ್ಲಿ ಇವನ್ನು ತೆಗೆದುಕೊಳ್ಳಬಹುದು ಎಂದು ನಾನು ಅರಿಕೆಮಾಡಿಕೊಳ್ಳುತ್ತೇನೆ.

(ಶ್ರೀಯುತರಾದ ಠಾಕುರ್ ದಾಸ್ ಭಾರ್ಗವ, ಕೆ. ಸಂತಾನಮ್ ಮತ್ತು ಪಿ.ಎಸ್. ದೇಶ್‌ಮುಖ್ ಅವರುಗಳು ತಿದ್ದುಪಡಿ ಸಂಖ್ಯೆಗಳಾದ ೩೬೪, ೩೬೬ ಮತ್ತು ೩೬೭ನ್ನು ಮಂಡಿಸಲಿಲ್ಲ.)

**ರಾಯ್ ಸಾಹೇಬ್ ರಘುರಾಜ್ ಸಿಂಗ್ :** ಖಂಡ ೨ರ ಅನಂತರ ಈ ಕೆಳಗಿನ ಹೊಸ ಖಂಡವನ್ನು ಸೇರಿಸಬೇಕು ಎಂದು ನಾನು ಮಂಡಿಸುತ್ತೇನೆ:

"೩. ಎಲ್ಲಿ ಖಂಡ(೧)ರ ಕಾರಣದಿಂದಾಗಿ ಅಧಿಕಾರ ಮತ್ತು ಕರ್ತವ್ಯಗಳು ಪ್ರಾಂತ್ಯ ಅಥವಾ ಒಕ್ಕೂಟದ ರಾಜ್ಯ ಅಥವಾ ಅದರ ಅಧಿಕಾರಿಗಳು ಅಥವಾ ಅಧಿಕಾರಗಳ ಮೇಲೆ ವಹಿಸಲಾಗಿದೆ ಅಥವಾ ನೀಡಲಾಗಿದೆಯೋ, ಅಲ್ಲಿ ಒಕ್ಕೂಟವು ಪ್ರಾಂತ್ಯ ಅಥವಾ ರಾಜ್ಯಕ್ಕೆ ಒಪ್ಪಿಕೊಂಡ ಅಥವಾ ಒಪ್ಪಂದವನ್ನು ಉಲ್ಲಂಘಿಸಿದ್ದಕ್ಕಾಗಿ ಸರ್ವೋಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ನೇಮಕ ಮಾಡಿದ ಮಧ್ಯಸ್ಥರು ನಿಗದಿಪಡಿಸಿದ ಮೊತ್ತವನ್ನು, ಆ ಅಧಿಕಾರ ಅಥವಾ ಕರ್ತವ್ಯವನ್ನು ಜಾರಿಗೊಳಿಸುವ ಸಂಬಂಧ ಪ್ರಾಂತ್ಯ ಅಥವಾ ರಾಜ್ಯವು ಆಡಳಿತ ಕಾರಣಗಳಿಗಾಗಿ– ಹೆಚ್ಚುವರಿಯಾಗಿ ಮಾಡಿದ ಖರ್ಚಿಗಾಗಿ ನೀಡಬೇಕು."

ಈ ತಿದ್ದುಪಡಿಯ ವಿಷಯವು ಸ್ಪಷ್ಟವಾಗಿದೆ; ಅಂದರೆ, ಯಾವಾಗಲಾದರೂ ಯಾವುದೇ ಕರ್ತವ್ಯಗಳು ರಾಜ್ಯ ಅಥವಾ ಪ್ರಾಂತ್ಯ ಅಥವಾ ಒಕ್ಕೂಟ ರಾಜ್ಯಗಳ ಮೇಲೆ ಹೇರಲ್ಪಡುತ್ತದೆಯೋ ಅಂತಹ ಸಂದರ್ಭಗಳಲ್ಲಿ ಅವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ತಗುಲುವ ವೆಚ್ಚವನ್ನು ಸಂಬಂಧಪಟ್ಟ ರಾಜ್ಯ ಅಥವಾ ಪ್ರಾಂತ್ಯಗಳಿಗೆ ನೀಡಬೇಕು.

**ಮಾನ್ಯ ಸಭಾಧ್ಯಕ್ಷರು :** ಈ ಖಂಡಕ್ಕೆ ಬೇರೆ ಯಾವುದೇ ತಿದ್ದುಪಡಿಗಳಿಲ್ಲ. ಆದ್ದರಿಂದ ಖಂಡ ಮತ್ತು ತಿದ್ದುಪಡಿಗಳು ಈಗ ಚರ್ಚೆಗೆ ಮುಕ್ತವಾಗಿವೆ. ಯಾರು ಈ ಕುರಿತು ಮಾತನಾಡಲು ಬಯಸುತ್ತಾರೋ ಮಾತನಾಡಬಹುದು.

**ಶ್ರೀ ರಾಮ್ ಸಹಾಯ್** (ಗ್ವಾಲಿಯರ್ ರಾಜ್ಯ) : *[ಮಾನ್ಯ ಸಭಾಧ್ಯಕ್ಷರೆ, ರಾಜ್ ಸಾಹೇಬ್ ಅವರಿಂದ ಮಂಡಿಸಲ್ಪಟ್ಟ ತಿದ್ದುಪಡಿಯನ್ನು ಬೆಂಬಲಿಸುವಂತೆ ನಾನು ವಿನಂತಿಸುತ್ತೇನೆ. ನನ್ನ ಮಂಡನೆಯೇನೆಂದರೆ, ಈ ತಿದ್ದುಪಡಿಯು ಸೂಕ್ತವಾದುದು ಮತ್ತು ಆವಶ್ಯಕವಾದುದು. ಭಾರತ ಸರ್ಕಾರ ಅಧಿನಿಯಮ ೧೯೩೫ರ ಪ್ರಕರಣ ೧೨೪, ಉಪಪ್ರಕರಣ (೧), 'ಒಕ್ಕೂಟ ಅಧಿಕಾರವು ಪ್ರಾಂತೀಯ ಸರ್ಕಾರ ಮತ್ತು ಒಕ್ಕೂಟ ರಾಜ್ಯದ ಆಡಳಿತಗಾರರ ಸಹಮತದೊಂದಿಗೆ ಪ್ರಾಂತ್ಯಗಳು ಮತ್ತು ರಾಜ್ಯಗಳ ಮೇಲೆ ಅಧಿಕಾರವನ್ನು ವಹಿಸುತ್ತದೆ' ಎಂಬುದಕ್ಕೆ ಅವಕಾಶ ಕಲ್ಪಿಸುತ್ತದೆ. ಆದರೆ ಈ ಶಬ್ದಗಳನ್ನು ಈ ಖಂಡದಿಂದ ತೆಗೆದುಹಾಕಲಾಗಿದೆ. ಕೇಂದ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಅವುಗಳ ಸಹಮತದ ಹೊರತಾಗಿ ಇಂತಹ ಅಧಿಕಾರಗಳ ಮೂಲಕ ಒಕ್ಕೂಟದಲ್ಲಿ ಸೂಕ್ತ ಅಧಿಕಾರದ ಹೂಡಿಕೆ ಅಗತ್ಯ. ಆದರೆ, ಭಾರತ ಸರ್ಕಾರ ಅಧಿನಿಯಮ ಪ್ರಕರಣ ೧೨೪ರ ಉಪಪ್ರಕರಣ (೪)ನ್ನು ತೆಗೆದುಹಾಕುವುದು ಯಾವುದೇ ಕಾರಣಕ್ಕೂ ಸೂಕ್ತವಲ್ಲ. ರಾಯ್ ಸಾಹೇಬ್ ಅವರು ಈ ಉಪಪ್ರಕರಣವನ್ನು ಆಧರಿಸಿಯೇ ತಮ್ಮ ತಿದ್ದುಪಡಿಗೆ ಒತ್ತು ನೀಡಿದ್ದಾರೆ. ಆದ್ದರಿಂದ ನಾನು, ಈ ತಿದ್ದುಪಡಿಯನ್ನು ಸದನವು ಸ್ವೀಕರಿಸುವುದು ಸೂಕ್ತ ಎಂದು ಪರಿಗಣಿಸುತ್ತೇನೆ. ಇದನ್ನು ಒಪ್ಪಿಕೊಳ್ಳುವ ಮೂಲಕ, ಕೇಂದ್ರದ ಪರವಾಗಿ ಹೊರಿಸಲಾದ ಖರ್ಚನ್ನು ಸರಿದೂಗಿಸುವಲ್ಲಿ ಪ್ರಾಂತ್ಯ ಸರ್ಕಾರ ಅಥವಾ ರಾಜ್ಯಗಳು ಸಮರ್ಥವಾಗುತ್ತವೆ. ಪ್ರಾಂತೀಯ ಸರ್ಕಾರ ಅಥವಾ ರಾಜ್ಯಗಳ ಆರ್ಥಿಕ ಸ್ಥಿತಿಯನ್ನು ಕ್ರೋಢೀಕರಿಸುವ ನಿಟ್ಟಿನಲ್ಲಿ ಈ ರೀತಿಯ ಖರ್ಚಿಗಾಗಿ ಅವುಗಳಿಗೆ ಪಾವತಿ ಮಾಡಬೇಕು. ಈ ಕಾರಣದಿಂದಾಗಿ ನಾನು ಈ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.]*

**ರಾಯ್ ಬಹಾದೂರ್ ಲಾಲಾ ರಾಜ್ ಕನ್ವರ್ :** ತಿದ್ದುಪಡಿಯನ್ನು ಬೆಂಬಲಿಸುವ ಹಕ್ಕು ನನಗಿದ್ದು, ಇದಕ್ಕೆ ವಿಸ್ತೃತ ಚರ್ಚೆಯ ಅಗತ್ಯವಿಲ್ಲ ಮತ್ತು ಇದು ಸ್ವವಿವರಣೆಯನ್ನು ಹೊಂದಿದೆ. ಇದರ ಮುಖ್ಯ ಉದ್ದೇಶವೆಂದರೆ, ಒಕ್ಕೂಟದ ವಿಷಯಗಳ ಆಡಳಿತವು ಘಟಕಗಳ ಮೇಲೆ ಹೇರಲ್ಪಟ್ಟಾಗ ತಗುಲುವ ಆಡಳಿತಾತ್ಮಕ ವೆಚ್ಚವನ್ನು ಒಕ್ಕೂಟವು ತನ್ನ ಘಟಕಕ್ಕೆ ಸಂದಾಯ ಮಾಡುವುದಕ್ಕೆ ಕಾನೂನಾತ್ಮಕ ಉಪಬಂಧವನ್ನು ಕಲ್ಪಿಸುವುದು. ಈ ಉಪಬಂಧವು ಅತ್ಯಂತ ಆವಶ್ಯಕವಾಗಿರುವುದರಿಂದ ಮತ್ತು ಇದು ಭಾರತ ಸರ್ಕಾರ ಅಧಿನಿಯಮದ

ಪ್ರಕರಣ ೧೨೪, ಉಪಪ್ರಕರಣ (೪)ರಲ್ಲಿ ಸ್ಥಾನ ಪಡೆದಿರುವುದರಿಂದ, ಇದು ಆವಶ್ಯಕವಾದ ಉಪಬಂಧ ಮತ್ತು ನಮ್ಮ ಸಂವಿಧಾನದಲ್ಲಿ ಇದನ್ನು ಅಳವಡಿಸಬಹುದು ಎಂದು ಸಲಹೆ ಮಾಡಲಾಗಿದೆ. ಪ್ರಸ್ತುತ, ಸಂವಿಧಾನ ಸಮಿತಿಯ ಶಿಫಾರಸುಗಳು ಇಂತಹ ಪ್ರಕರಣಗಳಲ್ಲಿ ಆಡಳಿತ ವೆಚ್ಚವನ್ನು ಸಂದಾಯ ಮಾಡುವುದಕ್ಕೆ ಸಂಬಂಧಪಟ್ಟಂತೆ ಏನನ್ನೂ ಸೂಚಿಸಿಲ್ಲ. ಇದು ಆವಶ್ಯಕವಾದ ಉಪಬಂಧವಾಗಿ ಕಂಡುಬರುವುದರಿಂದ, ಇದನ್ನು ಸದನದ ಅಂಗೀಕಾರಕ್ಕಾಗಿ ಶಿಫಾರಸು ಮಾಡಲಾಗಿದೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೇ, ಶ್ರೀ ನಜಿರುದ್ದೀನ್ ಅಹ್ಮದ್ ಅವರು ಮಂಡಿಸಿದ ಎರಡು ತಿದ್ದುಪಡಿಗಳ ಪೈಕಿ ಮೊದಲನೆಯದು 'ಆ ಘಟಕಕ್ಕೆ ಯಾವುದು ಅನ್ವಯಿಸುತ್ತದೆ'ಗೆ ಬದಲು 'ಇದು ಘಟಕಕ್ಕೆ ಅನ್ವಯಿಸಬಹುದು ಎಂಬ ಹಾಗೆ' ಎಂಬುದನ್ನು ಸೇರಿಸಬಯಸುತ್ತದೆ. ಇದು ಈ ನಿರ್ದಿಷ್ಟ ಉಪ–ಖಂಡದ ಕರಡು ಸುಧಾರಣೆಗಾಗಿನ ಸಲಹೆಯಂತೆ ಮೇಲ್ನೋಟಕ್ಕೆ ಕಂಡುಬರುತ್ತದೆ ಮತ್ತು ಇದು ಸುಧಾರಣೆಯೇ ಅಥವಾ ಅಲ್ಲವೇ ಎಂಬುದನ್ನು ಹೇಳುವುದು ಕಷ್ಟ. ನನಗನ್ನಿಸಿದ ಪ್ರಕಾರ, ಈ ತಿದ್ದುಪಡಿಯು ಏನನ್ನು ನಿರೀಕ್ಷಿಸುತ್ತದೆಯೋ ಆ ಆವಶ್ಯಕ ಉದ್ದೇಶವನ್ನು ಈ ಉಪಖಂಡದ ಪ್ರಸ್ತುತ ಕರಡು ಪೂರೈಸುತ್ತದೆ. ಆದ್ದರಿಂದ ನಾನು ಆ ತಿದ್ದುಪಡಿಯನ್ನು ಅಂಗೀಕರಿಸುವುದಿಲ್ಲ.

ಅವರ ಎರಡನೇ ತಿದ್ದುಪಡಿಯು 'ಘಟಕ ಸರ್ಕಾರ'ದ ಬದಲು 'ಘಟಕ ಸರ್ಕಾರಗಳು' ಎಂದು ಬದಲಿಸಬೇಕು ಎನ್ನುತ್ತದೆ ಮತ್ತು ನಾನು ಇದನ್ನು ಸ್ವೀಕರಿಸುತ್ತೇನೆ. ಇನ್ನು ಈ ಖಂಡವನ್ನು ಕುರಿತು ಇರುವ ಇತರ ಒಂದೇ ತಿದ್ದುಪಡಿಯೆಂದರೆ, ಸಂಖ್ಯೆ ೩೬೮. ಇದನ್ನು ಭಾರತ ಸರ್ಕಾರ ಅಧಿನಿಯಮದ ಪ್ರಕರಣ ೧೨೪, ಉಪಪ್ರಕರಣ (೪)ರಿಂದ ತೆಗೆದುಕೊಳ್ಳಲಾಗಿದೆ. ಸಂವಿಧಾನದ ಹೊರ ರೇಖೆಯನ್ನು ರಚಿಸುವಾಗ ಎಲ್ಲ ಆನುಷಂಗಿಕ ಅಧಿಕಾರಗಳು ಮತ್ತು ಉಪಬಂಧಗಳನ್ನು ಕರಡಿನಲ್ಲಿ ಸೇರಿಸುವುದು ಆವಶ್ಯಕ ಎಂದು ಈ ಸಭೆಯ ಚರ್ಚೆಯಲ್ಲಿ ಪರಿಗಣಿಸಲಾಗಿರಲಿಲ್ಲ. ಪ್ರಕರಣ ೧೨೪ರ ಈ ನಿರ್ದಿಷ್ಟ ಉಪಪ್ರಕರಣವನ್ನು ಸೇರಿಸದಿಲ್ಲದಿರುವಿಕೆಯು ಅಂತಿಮ ಕರಡು ಸಿದ್ಧವಾಗುವಾಗ ಉದ್ದೇಶಪೂರ್ವಕವಾಗಿ, ಯಾವುದೇ ಅಪೇಕ್ಷೆಯಿಂದ ಮಾಡಿದ್ದಲ್ಲ; ಆದರೆ, ಈ ನಿರ್ದಿಷ್ಟ ಖಂಡವು ಪ್ರಸ್ತುತ ಖಂಡಕ್ಕೆ ಹೆಚ್ಚುವರಿಯಾಗಿ ಮಂಡಿಸಲ್ಪಟ್ಟಿದೆ. ನಾನು ಇದನ್ನು ಸ್ವೀಕರಿಸುತ್ತೇನೆ ಮತ್ತು ಭವಿಷ್ಯದ ಸಂವಿಧಾನದ ಮೂಲಪಾಠದತ್ತ ಗಮನ ಹರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ನಾನು ಮೊದಲು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಮೊದಲನೆಯ ತಿದ್ದುಪಡಿಯು ಶ್ರೀ ನಜಿರುದ್ದೀನ್ ಅಹ್ಮದ್ ಅವರದು :

"ಖಂಡ ೨ರ ಉಪಖಂಡ (೧)ರಲ್ಲಿ 'ಆ ಘಟಕಕ್ಕೆ ಯಾವುದು ಅನ್ವಯಿಸುತ್ತದೆಯೋ ಅದು' ಎನ್ನುವ ಶಬ್ದದ ಬದಲು 'ಎಷ್ಟರ ಮಟ್ಟಿಗೆ ಅದು ಘಟಕಕ್ಕೆ ಅನ್ವಯವಾಗಬಹುದೋ ಅಷ್ಟು' ಎಂಬ ಶಬ್ದವನ್ನು ಬದಲಿಸಬೇಕು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಮುಂದಿನ ತಿದ್ದುಪಡಿ ಏನೆಂದರೆ :

"ಖಂಡ ೨ರ ಉಪಖಂಡ (೧)ರಲ್ಲಿ, 'ಘಟಕ ಸರ್ಕಾರ' ಎಂಬ ಶಬ್ದದ ಬದಲು 'ಘಟಕ ಸರ್ಕಾರಗಳು' ಎಂದು ಬದಲಿಸಬೇಕು."

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಕೊನೆಯ ತಿದ್ದುಪಡಿ ಏನೆಂದರೆ, ಈ ಕೆಳಗಿನ ಹೊಸ ಖಂಡ ೩ನ್ನು ಖಂಡ ೨ರ ಅನಂತರ ಸೇರ್ಪಡೆ ಮಾಡಬೇಕು.

"೩. ಎಲ್ಲಿ ಖಂಡ(೧)ರ ಕಾರಣದಿಂದಾಗಿ ಅಧಿಕಾರ ಮತ್ತು ಕರ್ತವ್ಯಗಳು ಪ್ರಾಂತ್ಯ ಅಥವಾ ಒಕ್ಕೂಟದ ರಾಜ್ಯ ಅಥವಾ ಅದರ ಅಧಿಕಾರಿಗಳು ಅಥವಾ ಅಧಿಕಾರಗಳ ಮೇಲೆ ವಹಿಸಲಾಗಿದೆ ಅಥವಾ ನೀಡಲಾಗಿದೆಯೋ, ಅಲ್ಲಿ ಒಕ್ಕೂಟವು ಪ್ರಾಂತ್ಯ ಅಥವಾ ರಾಜ್ಯಕ್ಕೆ ಒಪ್ಪಿಕೊಂಡ ಅಥವಾ ಒಪ್ಪಂದವನ್ನು ಉಲ್ಲಂಘಿಸಿದ್ದಕ್ಕಾಗಿ ಸರ್ವೋಚ್ಚ

ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ನೇಮಕಮಾಡಿದ ಮಧ್ಯಸ್ಥರು ನಿಗದಿಪಡಿಸಿದ ಮೊತ್ತವನ್ನು, ಆ ಅಧಿಕಾರ ಅಥವಾ ಕರ್ತವ್ಯವನ್ನು ಜಾರಿಗೊಳಿಸುವ ಸಂಬಂಧ ಪ್ರಾಂತ್ಯ ಅಥವಾ ರಾಜ್ಯವು ಆಡಳಿತ ಕಾರಣಗಳಿಗಾಗಿ-ಹೆಚ್ಚುವರಿಯಾಗಿ ಮಾಡಿದ ಖರ್ಚಿಗಾಗಿ ನೀಡಬೇಕು."

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಖಂಡವು, ಈಗಷ್ಟೇ ಮುಕ್ತಾಯಗೊಂಡಿದ್ದು, ಈಗ ಸದನದ ಮುಂದೆ ಇಡುತ್ತೇನೆ.

ತಿದ್ದುಪಡಿಗೊಂಡ ರೂಪದಲ್ಲಿ ಖಂಡ ೨ನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಇನ್ನೊಂದು ಖಂಡವನ್ನು ಸೇರಿಸಬೇಕೆಂದು ಹೇಳುವ ಇನ್ನೊಂದು ತಿದ್ದುಪಡಿಯಿದೆ. ಈ ಬಗ್ಗೆ ನಾಲ್ಕು ಸದಸ್ಯರು ಸೂಚನೆ ನೀಡಿದ್ದಾರೆ.

**ಶ್ರೀ ಎಚ್. ಆರ್. ಗುರುವಾ ರೆಡ್ಡಿ** (ಮೈಸೂರು ರಾಜ್ಯ) : ನಾನು ಈ ತಿದ್ದುಪಡಿಯನ್ನು ಮಂಡಿಸಲು ಪ್ರಾರ್ಥಿಸುತ್ತೇನೆ.

"ಖಂಡ ೨ರ ಅನಂತರ ಈ ಕೆಳಗಿನ ಹೊಸ ಖಂಡವು ಸೇರ್ಪಡೆಯಾಗಬೇಕು:

'೩. ಗವರ್ನರ್ ಅವರ ಪ್ರಾಂತ್ಯ ಅಥವಾ ಮುಖ್ಯ ಆಯುಕ್ತರ ಪ್ರಾಂತ್ಯ ಅಥವಾ ಇತರ ಯಾವುದೇ ಸಮ್ಮತಿಸುವ ಭಾರತೀಯ ರಾಜ್ಯ ಅಥವಾ ಶಾಸನಸಭೆಯ ಪರವಾಗಿ ಆ ಪ್ರಾಂತ್ಯ, ಮುಖ್ಯ ಆಯುಕ್ತರ ಪ್ರಾಂತ್ಯ ಅಥವಾ ಇತರ ಸಮ್ಮತಿಸುವ ರಾಜ್ಯದಲ್ಲಿ ಹಂಚಿಕೆಯಾದ ಕಾರ್ಯನಿರ್ವಾಹಕ ಅಥವಾ ನ್ಯಾಯಾಂಗ ಕಾರ್ಯಗಳಿಗೆ ಸಂಬಂಧಪಟ್ಟಂತೆ ಒಪ್ಪಂದದ ಮೂಲಕ ಒಕ್ಕೂಟದ ಸರ್ಕಾರದ ಈ ಮುಂಚಿನ ಮಂಜೂರಾತಿಯ ಜೊತೆಗೆ ಪ್ರಾಂತ್ಯಗಳು ಅಥವಾ ಮುಖ್ಯ ಆಯುಕ್ತರ ಪ್ರಾಂತ್ಯಗಳಿಗೆ ಸಂಬಂಧಪಟ್ಟಂತೆ ಕಲ್ಪಿಸಲಾದ ಒಪ್ಪಂದವು ಪ್ರಾಂತೀಯ ಅಥವಾ ಏಕಾಭಿಪ್ರಾಯವುಳ್ಳ ಪಟ್ಟಿಯಲ್ಲಿ ಅಡಕವಾಗಿದೆ ಮತ್ತು ಇನ್ನೊಂದು ಸಮ್ಮತಿಸುವ ರಾಜ್ಯಕ್ಕೆ ಸಂಬಂಧಿಸಿದಂತೆ ಈ ವಿಷಯವು ಒಕ್ಕೂಟದ ಪಟ್ಟಿಯಲ್ಲಿ ಅಡಕವಾಗಿಲ್ಲ ಎಂಬುದು ಸಮ್ಮತಿಸುವ ರಾಜ್ಯಕ್ಕೆ ಅರ್ಹವಾಗಬೇಕು.

'ಒಂದು ವೇಳೆ ಇಂತಹ ಒಪ್ಪಂದವು ಅಂತಿಮಗೊಂಡರೆ, ಇದರಲ್ಲಿ ಸೂಚಿಸಲಾದ ಶಾಸನಾತ್ಮಕ, ಕಾರ್ಯನಿರ್ವಾಹಕ ಮತ್ತು ನ್ಯಾಯಾಂಗಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ರಾಜ್ಯದ ಸೂಕ್ತ ಅಧಿಕಾರಗಳ ಮೂಲಕ ಜಾರಿಗೊಳಿಸುವ ಕಟ್ಟಳೆಗೆ ರಾಜ್ಯವು ಒಳಪಡುತ್ತದೆ.' "

ಮಾನ್ಯರೆ, ಇದು ಪ್ರಾಂತೀಯ ಸಂವಿಧಾನಸಮಿತಿಯ ವರದಿಯ ಖಂಡ ೮ರ ಪ್ರತಿರೂಪವಾಗಿದೆ. ಈ ಮಹಾಮಾನ್ಯ ಸದನವು ಪ್ರಾಂತೀಯ ಸಂವಿಧಾನದ ಖಂಡ ೮ರ ಭಾಗ ೧ರ ಮೇಲಿನ ತಾತ್ಕಾಲಿಕ ಸಮಿತಿಯ ವರದಿಯನ್ನು ಸ್ವೀಕರಿಸುವುದು ಉಚಿತವೆಂದೆಣಿಸಿತ್ತು. ಅದು, ಯಾವುದೇ ಪ್ರಾಂತೀಯ ಘಟಕವು ತನ್ನ ಅಧೀನದಲ್ಲಿರುವ ಯಾವುದೇ ರಾಜ್ಯ ಘಟಕದ ಭಾಗವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಮತ್ತು ಅದರ ಆಡಳಿತ ನಡೆಸುವುದಕ್ಕೆ ಅವಕಾಶ ಕಲ್ಪಿಸುತ್ತದೆ. ಅದೇ ರೀತಿಯಲ್ಲಿ, ಯಾವುದೇ ರಾಜ್ಯ ಘಟಕವು ಇತರ ಪ್ರಾಂತ್ಯಗಳ ಭಾಗವನ್ನು ತನ್ನ ವಶಕ್ಕೆ ಪಡೆದುಕೊಳ್ಳುವುದಕ್ಕೆ ಮತ್ತು ಅದರ ಆಡಳಿತ ನಡೆಸುವುದಕ್ಕೆ ಅವಕಾಶ ಕಲ್ಪಿಸುವ ಖಂಡವನ್ನು ಇಲ್ಲಿ ಮಂಡಿಸಲಾಗಿದೆ.

ಮಾನ್ಯರೆ, ಆಡಳಿತದ ಉದ್ದೇಶಕ್ಕಾಗಿ ಪ್ರಾಂತ್ಯಗಳು ರಾಜ್ಯದ ಅಥವಾ ರಾಜ್ಯ ಘಟಕದ ಭಾಗದ ಅಧಿಕಾರವನ್ನು ಒಮ್ಮೆ ತೆಗೆದುಕೊಳ್ಳುವುದು ಸಮಂಜಸ ಹಾಗೂ ನ್ಯಾಯಯುತ ಎಂದಾದರೆ, ದಕ್ಷ ಮತ್ತು ಸಮರ್ಥ ರಾಜ್ಯಗಳು ಇತರ ಪ್ರಾಂತ್ಯಗಳ ಭಾಗವನ್ನು ಇದೇ ಆಡಳಿತಾತ್ಮಕ ಉದ್ದೇಶಗಳಿಗಾಗಿ ವಶಕ್ಕೆ ಪಡೆದುಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರಬೇಕು. ಇದು ಯಾವುದೇ ದೃಷ್ಟಿಯಿಂದಲೂ ಉಚಿತವಲ್ಲ ಎಂಬುದರಲ್ಲಿ ಅನುಮಾನವಿಲ್ಲ ಮತ್ತು ನ್ಯಾಯಯುತವಾದ ಖಂಡವು ಪರಿಚಯಿಸಲ್ಪಡಬೇಕಿದೆ.

ಮಾನ್ಯರೆ, ಇಲ್ಲಿ ಕೆಲವು ಮಿತಿ ಅಥವಾ ನಿರ್ಬಂಧಗಳಿವೆ. ಎಲ್ಲಕ್ಕಿಂತ ಮೊದಲು, ಇದು ಸಂಪೂರ್ಣ ಬಲಿಷ್ಠವಾಗಿರುವ ಒಕ್ಕೂಟ ಸರ್ಕಾರದ ಪೂರ್ವ ಮಂಜೂರಾತಿ ಪಡೆದಿರಬೇಕು. ಎಲ್ಲಕ್ಕಿಂತ ಮೊದಲು,

ಒಕ್ಕೂಟ ಸರ್ಕಾರದ ಮುಂದೆ ಬಾರದೇ ಮತ್ತು ಅದರ ಸಹಮತ ಪಡೆಯದೇ, ಆಸಕ್ತಿಯನ್ನು ಹೊಂದಿರುವ ಯಾವುದೇ ಎರಡು ಕಕ್ಷಿಗಾರರು ಇಂತಹ ಯಾವುದೇ ಒಪ್ಪಂದ ಮಾಡಿಕೊಳ್ಳುವ ಯಾವುದೇ ಆತಂಕ ಇಲ್ಲಿರುವುದಿಲ್ಲ. ಮುಂದೆ, ಇನ್ನೊಂದು ನಿರ್ಬಂಧವನ್ನು ವಿಧಿಸಲಾಗಿದೆ; ಹೆಸರಿಸುವುದಾದರೆ, ಎಲ್ಲಕ್ಕಿಂತ ಮುಖ್ಯವಾಗಿ, ಈ ಕ್ರಮವನ್ನು ತೆಗೆದುಕೊಳ್ಳುವಾಗ ಯೋಗ್ಯವಾದ ಒಪ್ಪಂದ ಮಾಡಿಕೊಳ್ಳಬೇಕು. ಆದ್ದರಿಂದ, ಈ ತಿದ್ದುಪಡಿಯ ಈ ಎರಡು ಭಾಗಗಳು ಕಾರ್ಯರೂಪಕ್ಕೆ ಬರುವವರೆಗೆ, ವಿಷಯ ಏನೇ ಇದ್ದರೂ, ರಾಜ್ಯದಿಂದ ಇಂತಹ ಆಡಳಿತಾತ್ಮಕ ಹಿಡಿತ ಸಾಧಿಸುವುದು ಸಾಧ್ಯವಿಲ್ಲ.

ಮಾನ್ಯರೆ, ಆದ್ದರಿಂದ, ಪ್ರಾಂತೀಯ ಸಂವಿಧಾನದಲ್ಲಿ ಮಾಡಲಾದ ತಿದ್ದುಪಡಿಯ ಪ್ರಕಾರ, ಈ ಸದನವು ಖಂಡ ೮ನ್ನು ಅಂಗೀಕರಿಸಿರುವುದು ನ್ಯಾಯಯುತ ಮತ್ತು ಸಮಂಜಸವಾಗಿದ್ದು, ಈ ಸ್ವಾತಂತ್ರ್ಯವನ್ನು ರಾಜ್ಯಗಳಿಗೂ ಸಹ ನೀಡಬೇಕು. ಇದು ಇದಕ್ಕಿಂತ ಹೆಚ್ಚಿಗೆ ಯಾವುದಕ್ಕೂ ಅವಕಾಶ ಕಲ್ಪಿಸುವುದಿಲ್ಲ.

**ಶ್ರೀ ಕೆ.ಎಮ್. ಮುನ್ಷಿ** (ಬಾಂಬೆ : ಸಾಮಾನ್ಯ) : ಮಾನ್ಯರೆ, ಈ ಪ್ರಸ್ತಾವಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಇದರ ಪರಿಗಣನೆಯನ್ನು ಮುಂದೂಡಬೇಕು ಎಂದು ನಾನು ವಾದಿಸುತ್ತೇನೆ. ಇದಕ್ಕೆ ಕಾರಣ ಬಹಳ ಸರಳವಾಗಿದೆ. ಪ್ರಾಂತೀಯ ಸಂವಿಧಾನವನ್ನು ಪರಿಗಣಿಸುವುದಾದರೆ, ಸದನವು ಏನನ್ನು ನಿರ್ಧರಿಸಿದೆಯೆಂದರೆ, ರಾಜ್ಯಗಳನ್ನು ಕುರಿತು ಪ್ರಾಂತ್ಯಗಳು ಹೊಂದಿರುವ ಅಧಿಕಾರಕ್ಕೆ ಸಮಾನವಾದ ಅಧಿಕಾರವನ್ನು ರಾಜ್ಯಗಳಿಗೂ ಸಹ ನೀಡಬೇಕು. ಆದರೆ, ಇದೇ ವೇಳೆಯಲ್ಲಿ, ಒಕ್ಕೂಟ ಅಧಿಕಾರವನ್ನು ಚರ್ಚಿಸುವವರೆಗೆ ಮತ್ತು ಪರಿಗಣಿಸುವವರೆಗೆ ಮತ್ತು ರಾಜ್ಯಗಳ ವ್ಯಾಪ್ತಿಗೆ ಬರುವ ವಿಷಯಗಳ ಸ್ವಭಾವ ಹಾಗೂ ವ್ಯಾಪ್ತಿಯನ್ನು ತೀರ್ಮಾನಿಸುವ ಹಂತವನ್ನು ತಲಪುವವರೆಗೆ ಅದು ಈ ಪ್ರಸ್ತಾಪವನ್ನು ಪರಿಗಣಿಸುವುದಕ್ಕೆ ಅಪಕ್ವವಾಗಿರುತ್ತದೆ. ಈ ಖಂಡವು ತನ್ನಷ್ಟಕ್ಕೆ ತಾನು ನಿಲ್ಲುತ್ತದೆ. ಇದು ತಿದ್ದುಪಡಿಯ ಸ್ವರೂಪದಲ್ಲಿ ಇಲ್ಲ; ಆದರೆ ಸ್ವತಂತ್ರ ಪ್ರಸ್ತಾವವಾಗಿದೆ. ಈ ಹಂತದಲ್ಲಿ ಇದರ ಅರ್ಹತೆಯನ್ನು ಕುರಿತ ಯಾವುದೇ ಚರ್ಚೆಯು, ತುಂಬ ಅಪೇಕ್ಷಿತವಾಗಲಾರದು ಎಂದು ನಾನು ಹೇಳುತ್ತೇನೆ. ಆದ್ದರಿಂದ, ನಾನು ಮಂಡಿಸುವುದೇನೆಂದರೆ, ಮಾನ್ಯರೆ, ಕೇಂದ್ರ ಅಧಿಕಾರಗಳ ಸಮಿತಿಯ ವರದಿಯು ಈ ಸದನದಲ್ಲಿ ಚರ್ಚಿಸಲ್ಪಡುವವರೆಗೆ ಇದರ ಪರಿಶೀಲನೆಯನ್ನು ಮುಂದೂಡಬೇಕು.

ಶ್ರೀ ಗೋಪಿಕೃಷ್ಣ ವಿಜಯವರ್ಗೀಯ ಅವರು ಮಾತನಾಡಲು ಎದ್ದು ನಿಂತರು.

**ಮಾನ್ಯ ಸಭಾಧ್ಯಕ್ಷರು** : ನೀವು ಮುಖ್ಯ ತಿದ್ದುಪಡಿಯ ಮೇಲೆ ಮಾತನಾಡಲು ಬಯಸುತ್ತೀರೋ ಅಥವಾ ಶ್ರೀ ಮುನ್ಷಿಯವರ ಸಲಹೆಯ ಮೇಲೆಯೋ?

**ಶ್ರೀ ಗೋಪಿಕೃಷ್ಣ ವಿಜಯವರ್ಗೀಯ** (ಗ್ವಾಲಿಯರ್ ರಾಜ್ಯ) : ಶ್ರೀ ಮುನ್ಷಿಯವರ ಸಲಹೆಯ ಮೇಲೆ.

ಮಾನ್ಯರೆ, ನಾನು ಒಂದು ರಾಜ್ಯದಿಂದ ಬಂದಿದ್ದೇನೆ. ನಾನು ಉದ್ದೇಶಿತ ತಿದ್ದುಪಡಿಯ ಕಡು ವಿರೋಧಿಯಾಗಿದ್ದೇನೆ. (ಕೇಳಿ, ಕೇಳಿ). ಎಲ್ಲಿಯವರೆಗೆ ರಾಜ್ಯ ಮತ್ತು ಪ್ರಾಂತ್ಯಗಳ ನಡುವೆ ರಾಜಕೀಯ ಪರಿಸ್ಥಿತಿಯಲ್ಲಿ ಅಸಾಮಾನ್ಯತೆ ಇರುತ್ತದೆಯೋ ಅಲ್ಲಿಯವರೆಗೆ ರಾಜ್ಯಗಳಿಗೆ ಇನ್ನೂ ಹೆಚ್ಚಿನ ಅಥವಾ ಈಗ ಉದ್ದೇಶಿಸಲಾಗಿರುವ ಇಂತಹ ಯಾವುದೇ ಅಧಿಕಾರವನ್ನು ನೀಡಬಾರದು. ಆದರೆ, ಇದು ವಿವಾದಾತ್ಮಕ ವಿಷಯವಾಗಿರುವುದರಿಂದ, ಶ್ರೀ ಮುನ್ಷಿಯವರು ಇದನ್ನು ಮುಂದೂಡಲು ನಿರೀಕ್ಷಿಸಿರುವಂತೆ, ನಾನು ಇದರ ಮುಂದೂಡುವಿಕೆಯನ್ನು ಎದುರು ನೋಡುತ್ತೇನೆ.

**ಶ್ರೀ ಎಚ್.ಆರ್. ಗುರುವಾ ರೆಡ್ಡಿ** : ಇದರ ಮುಂದೂಡುವಿಕೆಗೆ ನನ್ನ ಅಭ್ಯಂತರವಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಈ ಖಂಡದ ಚರ್ಚೆಯನ್ನು ಕೇಂದ್ರ ಅಧಿಕಾರಗಳ ಸಮಿತಿಯ ವರದಿಯನ್ನು ನಾವು ಚರ್ಚಿಸುವವರೆಗೆ ಮುಂದೂಡಬೇಕು ಎಂಬುದು ಸಲಹೆಯಾಗಿದೆ. ಇದನ್ನು ಮುಂದೂಡಬೇಕು ಎಂಬುದು ಸದನದ ಬಯಕೆಯೇ?

**ಅನೇಕ ಗೌರವಾನ್ವಿತ ಸದಸ್ಯರುಗಳು :** ಹೌದು.

**ಮಾನ್ಯ ಸಭಾಧ್ಯಕ್ಷರು :** ಇದನ್ನು ಮುಂದೂಡಲಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರೇ, ಪೂರಕ ಪಟ್ಟಿಯಲ್ಲಿ ಇನ್ನೊಂದು ಖಂಡವು ಸೇರಬೇಕು ಎಂದು ನೀವು ಒಂದು ಪ್ರಸ್ತಾವದ ಸೂಚನೆಯನ್ನು ಕೊಟ್ಟಿದ್ದೀರಿ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ನಾನು ಇದನ್ನು ಮಂಡಿಸುತ್ತಿಲ್ಲ. ಶ್ರೀಮತಿ ದುರ್ಗಾಬಾಯಿಯವರೂ ಸಹ ಮಂಡಿಸುತ್ತಿಲ್ಲ. ನಾನು ಪೂರಕ ಪಟ್ಟಿ ಸಂಖ್ಯೆ ೪ರಲ್ಲಿ ನನ್ನ ತಿದ್ದುಪಡಿ ಸಂಖ್ಯೆ ೫ನ್ನು ಮಂಡಿಸುವುದಿಲ್ಲ.

## ಭಾಗ ೭

**ಮಾನ್ಯ ಸಭಾಧ್ಯಕ್ಷರು :** ಈಗ ನಾವು ಭಾಗ ೭ನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ನಾವು ಪರಿಗಣಿಸುತ್ತಿರುವುದು ಸಂವಿಧಾನದ ಬಹಳ ಮುಖ್ಯವಾದ ಭಾಗವಾಗಿದೆ. ಮೊದಲ ಎರಡು ಖಂಡಗಳು ಮಹತ್ತ್ವಕ್ಕೆ ದೂರವಾದ ಪರಿಣಾಮವನ್ನು ಹುಟ್ಟುಹಾಕಿವೆ ಮತ್ತು ಒಂದು ವೇಳೆ ನೀವು ಸಮ್ಮತಿಸಿದರೆ, ಮಾನ್ಯರೆ, ಸದನ ಒಪ್ಪಿದರೆ, ಖಂಡ ೧ ಹಾಗೂ ಖಂಡ ೨ರ ಮಂಡನೆಯನ್ನು ಮುಂದಿನ ಅಧಿವೇಶನಕ್ಕೆ ಮುಂದೂಡಲು ಅನುಮತಿ ಕೇಳುತ್ತೇನೆ. ಹಾಗೆ ಮಾಡುವುದರಿಂದ, ನಾನು ಇಷ್ಟನ್ನು ಮಾತ್ರ ಹೇಳಲು ಬಯಸುತ್ತೇನೆ; ಈ ಖಂಡಕ್ಕೆ, ಅದರಲ್ಲೂ ಮುಖ್ಯವಾಗಿ ಸಂಬಂಧಿಸಿದ ಎಲ್ಲ ಟೀಕೆಗಳಿಗೆ ಉತ್ತರಿಸುವ ಸ್ಥಿತಿಯಲ್ಲಿ ನಾವು ಇರಬೇಕೆಂದರೆ, ನಾವು ಇನ್ನಷ್ಟು ಸಿದ್ಧತೆ ಮಾಡಿಕೊಳ್ಳುವುದು ಅಗತ್ಯವಾಗಿದೆ. ಈ ಖಂಡಗಳ ರಚನೆಕಾರರ ಯೋಚನೆಯಲ್ಲಿ ಇರುವುದೇನೆಂದರೆ, ಹಣಕಾಸು ವಿಚಾರದಲ್ಲಿ ವಿವರವಾದ ಶೋಧನೆಯನ್ನು ಮಾಡಿ ಸಂವಿಧಾನದ ಕರಡಿನಲ್ಲಿ ಸೇರಿಸಬಹುದಾದ ಪ್ರಸ್ತಾವಗಳನ್ನು ಸಲ್ಲಿಸುವಂತಹ ತಜ್ಞರ ಸಮಿತಿಯನ್ನು ರಚಿಸಬೇಕು ಎಂಬುದು. ನಾನು ಆಶಿಸುತ್ತೇನೆ, ಮಾನ್ಯರೇ, ಈ ರೀತಿಯ ಸಮಿತಿಯನ್ನು ರಚಿಸುವಂತೆ ಅವರು ನಿಮ್ಮನ್ನು ಕೇಳುವುದಕ್ಕೆ ಸಾಧ್ಯವಾಗುತ್ತದೆ; ಆ ಮೂಲಕ ಮುಂದಿನ ಅಧಿವೇಶನಕ್ಕೆ ಮೊದಲು ಅಥವಾ ನಾವು ಅಧಿವೇಶನವನ್ನು ಆರಂಭಿಸುತ್ತಿದ್ದಂತೆಯೇ ಆ ಸಮಿತಿಯ ವರದಿಯು ನಮಗೆ ಲಭ್ಯವಾಗುತ್ತದೆ. ಮಾನ್ಯರೆ, ಒಂದು ವೇಳೆ ನೀವು ಸಮ್ಮತಿಸಿದರೆ, ಖಂಡ ೧ ಹಾಗೂ ೨ನ್ನು ಮಂಡಿಸದಿರುವಂತೆ ಕೋರುತ್ತೇನೆ.

## ಖಂಡ ೩

**ಮಾನ್ಯ ಸಭಾಧ್ಯಕ್ಷರು :** ನೀವು ಖಂಡ ೩ನ್ನು ಮುಂದುವರಿಸಬಹುದು.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಖಂಡ ೩, ನಾನು ಮಂಡಿಸುತ್ತಿದ್ದೇನೆ:

> "ಒಕ್ಕೂಟದ ಸಂಸತ್ತಿನ ಪ್ರಕಾರ ಕಾನೂನು ಮಾಡಬಹುದಾದ ಉದ್ದೇಶ ಅಲ್ಲದಿದ್ದರೂ ಕೂಡ ಒಕ್ಕೂಟದ ಸರ್ಕಾರವು ಒಕ್ಕೂಟದ ನಿಧಿಯಿಂದ ಯಾವುದೇ ಉದ್ದೇಶಗಳಿಗಾಗಿ ಸಹಾಯಧನ ಅಥವಾ ಅನುದಾನವನ್ನು ಬಿಡುಗಡೆ ಮಾಡುವ ಅಧಿಕಾರವನ್ನು ಹೊಂದಿರುತ್ತದೆ."

ಪ್ರಾಂತೀಯ ಉದ್ಯೋಗಗಳ ವಲಯದ ಒಳಗಿನ, ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಒಕ್ಕೂಟದ ಉದ್ಯೋಗ ವಲಯದ ಆಚೆಗಿನ ಉದ್ಯಮ ಕ್ಷೇತ್ರಗಳಿಗೆ ಒಕ್ಕೂಟ ಸರ್ಕಾರವು ಸಹಾಯಧನ ನೀಡುವುದಕ್ಕೆ ಅವಕಾಶ ಕಲ್ಪಿಸುವ ಉದ್ದೇಶವನ್ನು ಇದು ಹೊಂದಿದೆ. ಒಕ್ಕೂಟದ ಆಡಳಿತದ ಖರ್ಚುವೆಚ್ಚವನ್ನು, ಸಾಮಾನ್ಯವಾಗಿ ಇದರ ವ್ಯಾಪ್ತಿಗೆ ಬಾರದ ಖರ್ಚುವೆಚ್ಚವನ್ನು ಸರಿದೂಗಿಸುವುದಕ್ಕಾಗಿ ಪ್ರಾಥಮಿಕವಾಗಿ ವಸೂಲು ಮಾಡಲಾದ ಕಂದಾಯವನ್ನು ಒಕ್ಕೂಟದ ಸರ್ಕಾರಗಳು ಬಳಸಿಕೊಳ್ಳಲು ಸಮರ್ಥವಾಗಿಸುವ ನಿಟ್ಟಿನಲ್ಲಿ ಇಂತಹ ಅಧಿಕಾರವು

ಆವಶ್ಯಕವಾಗಿದೆ. ಹೀಗೆ ಮಾಡುವುದಕ್ಕೆ ಇರುವ ಸ್ವಾತಂತ್ರ್ಯವು "ಇನ್ನೊಂದು ರೀತಿಯಲ್ಲಿಯೂ ಸಹ ಸಹಾಯಕವಾಗಿದೆ. ವಿವಿಧ ದಿಶೆಗಳಲ್ಲಿ ಘಟಕಗಳು ಕೈಗೆತ್ತಿಕೊಳ್ಳಬೇಕಿರುವ ಅನೇಕ ಪ್ರಗತಿಪರ ಕಾರ್ಯಗಳಿವೆ ಮತ್ತು ಈ ಚಟುವಟಿಕೆಗಳನ್ನು ನಡೆಸಲು, ಇದಕ್ಕೆ ತಗುಲುವ ಖರ್ಚನ್ನು ಭರಿಸುವುದಕ್ಕೆ ಬೇಕಾಗುವಷ್ಟು, ಸಾಕಾಗುವಷ್ಟು ಹಣಕಾಸನ್ನು ಘಟಕಗಳು ಹೊಂದಿಲ್ಲದೇ ಇರಬಹುದು. ಇವು (ಘಟಕಗಳು) ಸಂಪೂರ್ಣವಾಗಿ ಪ್ರಾಂತೀಯ ವಲಯದಲ್ಲಿ ಬರುವುದರಿಂದ, ಇಂತಹ ಅಭಿವೃದ್ಧಿ ಕಾರ್ಯಗಳಿಗೆ ಒಕ್ಕೂಟದ ಸರ್ಕಾರಗಳು ಸಹಾಯಧನವನ್ನು ಮಂಜೂರುಮಾಡುವುದು ಆವಶ್ಯಕವೆಂದು ನಾನು ಭಾವಿಸುತ್ತೇನೆ. ಸಂಪೂರ್ಣ ದೇಶದ ಅಭಿವೃದ್ಧಿಯ ಹಿತದೃಷ್ಟಿಯಿಂದ, ಈ ಅಧಿಕಾರವು ಒಕ್ಕೂಟದ ಸರ್ಕಾರದ ಬಳಿ ಇರುವುದು ತುಂಬ ಆವಶ್ಯಕವಾಗಿದ್ದು, ಅದರ ಪಾಲಿಗೆ ಇದೊಂದು ಬಲಯುತವಾದ ಅಸ್ತ್ರವಾಗಲಿದೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಓಮಿಯೋ ಕುಮಾರ್ ದಾಸ್ ಅವರು ತಿದ್ದುಪಡಿಯ ಸೂಚನೆಯನ್ನು ನೀಡಿದ್ದಾರೆ.

**ಶ್ರೀಯುತ ಓಮಿಯೋ ಕುಮಾರ್ ದಾಸ್** (ಅಸ್ಸಾಮ್ : ಸಾಮಾನ್ಯ) : ಮಾನ್ಯರೆ, ನನ್ನ ಹೆಸರಿನಲ್ಲಿರುವ ತಿದ್ದುಪಡಿಯನ್ನು ನಾನು ಮಂಡಿಸಲು ಹೋಗುತ್ತಿಲ್ಲ. ಈಗಷ್ಟೇ ಚರ್ಚೆಯು ಅನಂತರದ ದಿನಾಂಕಕ್ಕೆ ಮುಂದೂಡಲ್ಪಟ್ಟಿರುವ ಖಂಡ ೨ರ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದೇನೆ ಮತ್ತು ತಜ್ಞರ ಸಮಿತಿಯು ಸಂಪೂರ್ಣ ಸಮಸ್ಯೆಯನ್ನು ಕುರಿತು ತನಿಖೆ ನಡೆಸಲಿದೆ ಎಂಬ ಭರವಸೆ ನಮಗೆ ದೊರಕಿದೆ. ನಮ್ಮ ಪ್ರಾಂತ್ಯಗಳು ಆ ಸಮಿತಿಯಿಂದ ಖಂಡಿತವಾಗಿಯೂ ಉತ್ತಮ ಲಾಭ ಪಡೆಯಲಿವೆ ಎಂದು ನಾನು ಆಶಿಸುತ್ತೇನೆ ಮತ್ತು ನಂಬಿದ್ದೇನೆ. ಆದರೆ, ಒಂದು ವೇಳೆ ನೀವು ನನಗೆ ಅನುಮತಿ ನೀಡಿದರೆ, ಎಲ್ಲ ತಿದ್ದುಪಡಿಗಳು ಮಂಡನೆಯಾದ ಅನಂತರ ಖಂಡ ೩ನ್ನು ಕುರಿತು ಕೆಲವು ಸಾಮಾನ್ಯ ಅಭಿಪ್ರಾಯವನ್ನು ವ್ಯಕ್ತಪಡಿಸಲು ಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಸರಿ. ನಾವು ಮೊದಲು ಖಂಡ ೩ ಮತ್ತು ತಿದ್ದುಪಡಿಗಳನ್ನು ತೆಗೆದುಕೊಳ್ಳೋಣ. ಒಂದು ವೇಳೆ ನೀವು ಚರ್ಚೆಯಲ್ಲಿ ಭಾಗವಹಿಸಲು ಬಯಸುವಿರಾದರೆ, ಅನಂತರ ಹಾಗೆ ಮಾಡಬಹುದು.

(ಶ್ರೀಯುತರಾದ ಎಚ್. ವಿ. ಪಾಟಸ್ಕರ್, ಟಿ.ಎ. ರಾಮಲಿಂಗಮ್ ಚೆಟ್ಟಿಯಾರ್, ಎಚ್.ಜೆ. ಖಾಂಡೇಕರ್ ಮತ್ತು ರೆವರೆಂಡ್ ಜೆ. ಆರ್. ಎಮ್. ನಿಕೊಲಸ್ ರಾಯ್ ಅವರು ಮುಖ್ಯ ಪಟ್ಟಿಯಲ್ಲಿನ ತಿದ್ದುಪಡಿ ಸಂಖ್ಯೆಗಳಾದ ೩೭೫, ೩೭೬, ೩೭೭ನ್ನು ಮತ್ತು ಪೂರಕ ಪಟ್ಟಿ ೧ರಲ್ಲಿನ ತಿದ್ದುಪಡಿ ಸಂಖ್ಯೆ ೨೩ನ್ನು ಮಂಡಿಸಲಿಲ್ಲ.)

ನಾನು ಗಮನಿಸಿದ ಪ್ರಕಾರ ಖಂಡ ೩ಕ್ಕೆ ಬೇರೆ ಯಾವುದೇ ತಿದ್ದುಪಡಿಗಳಿಲ್ಲ. ಈ ಖಂಡವು ಚರ್ಚೆಗೆ ಮುಕ್ತವಾಗಿದೆ.

**ಶ್ರೀ ಬಿ. ದಾಸ್** (ಒರಿಸ್ಸಾ ಸಾಮಾನ್ಯ) : ಮಾನ್ಯರೆ, ಇದು ನಮ್ಮ ಮುಂದೆ ಇಡಲಾಗಿರುವ ಕೇಂದ್ರ ಸಂವಿಧಾನದ ಅತ್ಯಂತ ಪ್ರಮುಖ ಅಧ್ಯಾಯವೆಂದು ಹೇಳಿರುವ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ಮಾತನ್ನು ಒಪ್ಪುತ್ತೇನೆ. ಮಾನ್ಯರೆ, ಮೂಲಭೂತ ಹಕ್ಕುಗಳಲ್ಲಿ ನಾವು, ಎಲ್ಲರಿಗೂ ಸಾಮಾಜಿಕ ಭದ್ರತೆಯನ್ನು ಇದುವರೆಗೂ ನಿಶ್ಚಿತಗೊಳಿಸಿಲ್ಲ. ಸಾಮಾಜಿಕ ಭದ್ರತೆ ಎಂದರೆ, ಎಲ್ಲರಿಗೂ ಸಾಮಾಜಿಕ ನ್ಯಾಯ ಮತ್ತು ಎಲ್ಲರಿಗೂ ನಿರ್ದಿಷ್ಟ ಕನಿಷ್ಠ ಜೀವನ ಮಟ್ಟವನ್ನು ಒದಗಿಸುವುದು. ಇಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ಸಾರ್ವಜನಿಕ ಸುರಕ್ಷತೆ ನೀಡಿದರೆ ಸಾಲದು, ಎಲ್ಲರಿಗೂ ಕನಿಷ್ಠ ಶಿಕ್ಷಣದ ಭರವಸೆಯನ್ನೂ ಸಹ ನೀಡಬೇಕಾಗುತ್ತದೆ. ದುರ್ದೈವವಶಾತ್, ನಾವು ಬ್ರಿಟಿಷ್ ಚಕ್ರಾಧಿಪತ್ಯದ ವಿದೇಶೀ ಆಡಳಿತವನ್ನು ಹೊಂದಿದ್ದೆವು. ಅವರ ಹಣಕಾಸು ಮತ್ತು ಆರ್ಥಿಕ ನೀತಿಯು, ಭಾರತದಲ್ಲಿ ಮಾತ್ರವಲ್ಲ, ಏಷ್ಯಾದ ಎಲ್ಲೆಡೆ, ಬ್ರಿಟಿಷ್ ಸಾಮ್ರಾಜ್ಯಶಾಹಿ ಹಾಗೂ ಬ್ರಿಟಿಷ್ ಚಕ್ರಾಧಿಪತ್ಯವನ್ನು ನಡೆಸಿಕೊಂಡು ಹೋಗುವುದಷ್ಟೇ ಆಗಿತ್ತು. ಇದು ಪ್ರಾಂತ್ಯಗಳಿಗೆ ಏನನ್ನೂ ನೀಡಲಿಲ್ಲ. ಒಂದು ವೇಳೆ ಅದು ಒರಿಸ್ಸಾ ಅಥವಾ ಅಸ್ಸಾಮ್‌ನಂತಹ ಬಡ ಪ್ರಾಂತ್ಯಗಳಿಗೆ

ಏನನ್ನಾದರೂ ನೀಡಿದ್ದರೂ ಕೂಡ, ಅದು ಕೇವಲ ಅನ್ನಾಧಾರ ಭತ್ಯೆಗಾಗಿ ಆಗಿತ್ತೇ ಹೊರತು ಹೆಚ್ಚಿನದು ಯಾವುದಕ್ಕೂ ಆಗಿರಲಿಲ್ಲ. ಭಾರತಕ್ಕೆ ಬ್ರಿಟಿಷರ ಕೊಡುವಿಕೆಯ ಅರ್ಥ, ಕೇವಲ ಬ್ರಿಟಿಷ್ ವ್ಯಾಪಾರ ಹಾಗೂ ವ್ಯವಹಾರದ ವಿಸ್ತರಣೆಯಾಗಿತ್ತು ಮತ್ತು ಆ ಸಂದರ್ಭದಲ್ಲಿ ಅಭಿವೃದ್ಧಿ ಹಾಗೂ ಏಳಿಗೆ ಕಂಡುಬಂದಿದ್ದು ಕಲ್ಕತ್ತ, ಬಾಂಬೆ, ಮದ್ರಾಸ್ ಹಾಗೂ ಕರಾಚಿಗಳಂತಹ ಬಂದರು ಪ್ರದೇಶಗಳಲ್ಲಿ ಮತ್ತು ಎಲ್ಲ ಸಂವಹನಗಳೂ ಈ ಬಂದರುಗಳ ನಿಯಂತ್ರಿತವಾಗಿತ್ತು ಮತ್ತು ಆದ್ದರಿಂದ, ಈ ಪ್ರಾಂತ್ಯಗಳು ಉಚ್ಛ್ರಾಯ ಸ್ಥಿತಿ ತಲುಪಿದವು. ಅನಂತರ ಬಂದ ಪ್ರಾಂತ್ಯಗಳು, ಅಂದರೆ, ನನ್ನ ಸ್ವಂತ ಪ್ರಾಂತ್ಯ ಒರಿಸ್ಸಾ ಅಥವಾ ಅಸ್ಸಾಮ್‌ಗಳು ಪರಿಸ್ಥಿತಿಗಳ ಬಲಿಪಶುಗಳಾದವು; ಕಡು ಬಡವರ ಮನೆಯ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬಂದರು; ಅವರು (ಆ ಮಕ್ಕಳು) ತಮ್ಮ ಪಾಲಕರಿಗೆ ಬೇಡದವರಾಗಿದ್ದರು; ಏಕೆಂದರೆ, ಅವರು (ಪಾಲಕರು) ತಮ್ಮ ಮಕ್ಕಳಿಗೆ ಉತ್ತಮ ಭವಿಷ್ಯ ಕಲ್ಪಿಸುವುದಕ್ಕೆ ಅಥವಾ ಮಕ್ಕಳಿಗೆ ಸರಿಯಾಗಿ ಆಹಾರ ಅಥವಾ ಶಿಕ್ಷಣ ನೀಡುವುದಕ್ಕೆ ಅಸಮರ್ಥರಾಗಿದ್ದರು.

ಮಾನ್ಯರೆ, ಕೆಲವು ಅಂಶಗಳಲ್ಲಿ ನಾವು ಭಾರತ ಸರ್ಕಾರ ಅಧಿನಿಯಮ, ೧೯೩೫ನ್ನು ಅನುಸರಿಸುತ್ತಿದ್ದೇವೆ ಎನ್ನುವುದನ್ನು ಈ ಸದನದಲ್ಲಿ ಕೇಳುತ್ತಿರುವುದಕ್ಕೆ ನಾನು ವ್ಯಥಿತನಾಗಿದ್ದೇನೆ. ಯಾರು ಈ ಅಧಿನಿಯಮದ ಶಾಸನವನ್ನು ವಿರೋಧಿಸಿದ್ದಾರೋ ಮತ್ತು ಯಾರು ಬ್ರಿಟಿಷರ ಕಪಿಮುಷ್ಟಿಯಲ್ಲಿ ನಾವು ಹಂತ ಹಂತವಾಗಿ ಹೇಗೆ ಸಿಲುಕಿಕೊಂಡೆವು ಮತ್ತು ಭಾರತ ಸರ್ಕಾರ ಅಧಿನಿಯಮದ ನಿರಂಕುಶ ಬ್ರಿಟಿಷ್ ಸರ್ಕಾರವು ಹೇಗೆ ಶಾಶ್ವತಗೊಂಡಿತು ಎಂಬುದನ್ನು ಅರಿತಿದ್ದಾರೋ ಅವರು, ತಿಂಗಳೊಪ್ಪತ್ತಿನಲ್ಲಿ ಸ್ವತಂತ್ರ ಭಾರತ ಅಥವಾ ಭಾರತ ಸಾಮ್ರಾಜ್ಯ ರಚನೆಗೊಂಡಿರುವ ಈ ಹಂತದಲ್ಲಿ, ಭಾರತದ ಕತ್ತುಹಿಸುಕುವ ಪರಿಸ್ಥಿತಿಯನ್ನು ಶಾಶ್ವತಗೊಳಿಸಿದ ಹಾಗೂ ಒಕ್ಕೂಟದ ಸರ್ಕಾರದ ರಚನೆಯನ್ನು ೧೯೩೫ರಿಂದ ೧೯೪೭ರವರೆಗೆ ಮುಂದೂಡಿದ ಈ ಭಾರತ ಸರ್ಕಾರ ಅಧಿನಿಯಮದ ಗೆರೆಯ (ಆಧಾರದ) ಮೇಲೆ ಭಾರತದ ಸಂವಿಧಾನವನ್ನು ರಚಿಸಲು ಹೊರಟಿರುವುದನ್ನು ಕೇಳಿ ನಾಚಿಕೆ ಹಾಗೂ ಅಪಮಾನದ ಭಾವಕ್ಕೊಳಗಾಗುತ್ತಾರೆ. ಮಾನ್ಯರೆ, ಭಾರತ ಸರ್ಕಾರ ಅಧಿನಿಯಮದಲ್ಲಿ ಕಂಡುಬರುವ ಈ ಕೆಲವು ವಿಭಾಗಗಳು – ವಿಭಾಗ ೧೩೬ರಿಂದ ೧೪೯ – ಹಣಕಾಸು ಮತ್ತು ಎರವಲು ತೆಗೆದುಕೊಳ್ಳುವುದನ್ನು ಕುರಿತು – ಸಹಾಯಧನ ಮತ್ತು ಅನುದಾನವನ್ನು ಕುರಿತು – ಸಹಜವಾಗಿ ಅಸ್ತಿತ್ವಕ್ಕೆ ಬರಲಿರುವ ಪ್ರಾಂತ್ಯಗಳ ಜನರಿಗೆ ಸಾರ್ವಜನಿಕ ಭದ್ರತೆ ಹಾಗೂ ಸಾಮಾಜಿಕ ನ್ಯಾಯವನ್ನು ಒದಗಿಸುವ ಯಾವುದೇ ಉದ್ದೇಶದಿಂದ ಸೇರಿಸಲ್ಪಟ್ಟಿಲ್ಲ. ಈ ವಿಭಾಗಗಳು ೧೯೩೯ರಲ್ಲಿ ಆರಂಭವಾದ ಎರಡನೇ ವಿಶ್ವಯುದ್ಧದಲ್ಲಿ ಯಾವ ರೀತಿಯಲ್ಲಿ ಮಾತು ಹಾಗೂ ಕೃತಿಯಲ್ಲಿ ತುಚ್ಛ ಭಾವನೆಯನ್ನು ಮೂಡಿಸಿತು ಎಂಬುದನ್ನು ನಾವೆಲ್ಲ ನೋಡಿದ್ದೇವೆ. ಒಂದು ನಿರ್ದಿಷ್ಟ ವಿಭಾಗ, ೧೯೩೯ರಲ್ಲಿ ಅಂಗೀಕರಿಸಲಾದ ವಿಭಾಗ ೧೨೬ (ಎ) ಮೂಲಕ, ಎಲ್ಲ ಪ್ರಾಂತ್ಯಗಳು, ಎಲ್ಲ ಸಂಪನ್ಮೂಲಗಳು ಮತ್ತು ಭಾರತದ ಪ್ರಜೆಗಳನ್ನು ಬ್ರಿಟಿಷ್ ಸರ್ಕಾರದ ಸೇವಕರು ಹಾಗೂ ಗುಲಾಮರನ್ನಾಗಿಸಲಾಯಿತು; ಆ ಮೂಲಕ ಈ ಯುದ್ಧದಲ್ಲಿ ಭಾರತದ ಸೈನಿಕರು ಬ್ರಿಟಿಷ್ ಸರ್ಕಾರಕ್ಕೆ ಸಹಾಯ ಮಾಡುವಂತಾಯಿತು ಮತ್ತು ಅದು ಭಾರತದ ಖರ್ಚಿನಲ್ಲಿ ವಿಜಯ ಸಾಧಿಸಿತು. ಏನು ನಡೆಯಿತು ಎಂಬುದು ನಮಗೆ ಗೊತ್ತು. ಸುಮಾರು ೫,೦೦೦ ಕೋಟಿ ಮೌಲ್ಯದ ವಸ್ತುಗಳನ್ನು ಭಾರತದಿಂದ ಬ್ರಿಟನ್ ಹಾಗೂ ಅದರ ಮಿತ್ರ ರಾಷ್ಟ್ರಗಳಿಗೆ ಯುದ್ಧಪೂರ್ವ ನಿರ್ಬಂಧಿತ ಬೆಲೆಯಲ್ಲಿ ಸಾಗಿಸಲಾಯಿತು ಮತ್ತು ಅದೇ ರೀತಿಯಲ್ಲಿ ಭಾರತದ ಆಹಾರವು ಲೂಟಿಗೊಳಗಾಯಿತು ಮತ್ತು ಅದರ ಪರಿಣಾಮವಾಗಿ, ಬಂಗಾಳದಲ್ಲಿ ದುರ್ಭಿಕ್ಷ ಹಾಗೂ ಅರೆಹೊಟ್ಟೆಯಿಂದ ೫೦ರಿಂದ ೭೫ ಲಕ್ಷ ಜನರು ಸಾವನ್ನಪ್ಪಿದರು. ಇದರ ಇನ್ನೊಂದು ಪರಿಣಾಮವೆಂದರೆ, ಹಣದುಬ್ಬರ. ಇದುವೇ ನಮಗೆ ಭಾರತ ಸರ್ಕಾರ ಅಧಿನಿಯಮವು ನೀಡಿದ ಸಾಮಾಜಿಕ ಭದ್ರತೆ ಹಾಗೂ ಸಾಮಾಜಿಕ ನ್ಯಾಯ.

ಮಾನ್ಯರೆ, ಕೇಂದ್ರ ಸಂವಿಧಾನದ ಪ್ರಸ್ತಾವನೆಯಲ್ಲಿ, ಶಾಂತಿ ಕಾಪಾಡುವುದಕ್ಕೆ ಹಾಗೂ ಭಾರತದ

ಪ್ರಜೆಗಳ ಹಿತ ಕಾಪಾಡುವುದಕ್ಕೆ ಮತ್ತು ಅವರ ಅಭ್ಯುದಯಕ್ಕೆ ತೆಗೆದುಕೊಳ್ಳಲ್ಲಾಗುವ ಕ್ರಮಗಳ ಬಗ್ಗೆ ಇದುವರೆಗೂ ತೀರ್ಮಾನಿಸದಿರುವ ಬಗ್ಗೆ ನನಗೆ ತುಂಬ ನೋವಾಗುತ್ತಿದೆ; ಇದು ತೀರ್ಮಾನಗೊಳ್ಳುತ್ತದೆ ಎಂದು ನಾನು ನಂಬಿದ್ದೇನೆ ಮತ್ತು ಆಶಿಸುತ್ತೇನೆ. ಆದರೆ, ನಾನು ಭಾವಿಸುವುದೇನೆಂದರೆ, ರಾಜ್ಯದ ಮೊದಲ ಕಾರ್ಯವು ತನ್ನ ಜನರ ಯೋಗಕ್ಷೇಮ ನೋಡುವುದು–ವಿಚಾರಿಸುವುದು ಆಗಿರಬೇಕೇ ವಿನಾ, ಬ್ರಿಟನ್ನಿನ ಲಾಭಕ್ಕಾಗಿ ಭಾರತವನ್ನು ಉಪಯೋಗಿಸಿಕೊಂಡ ಮತ್ತು ಭಾರತದ ಕಡುಬಡತನ ಹಾಗೂ ಸಾವಿಗೆ ಕಾರಣವಾದ ಬ್ರಿಟಿಷ್ ಸರ್ಕಾರದ ರೀತಿಯಲ್ಲಿ ಆಡಳಿತವನ್ನು ನಡೆಸುವುದಾಗಬಾರದು. ಆದ್ದರಿಂದ, ಮಾನ್ಯರೆ, ಆರ್ಥಿಕ ಶೋಧನಾಸಮಿತಿಯ ನೇಮಕವಾಗಲಿದೆ ಎಂಬ ವಿಷಯವನ್ನು ಸರ್ ಗೋಪಾಲಸ್ವಾಮಿಯವರಿಂದ ಕೇಳಿ ನಾನು ತುಂಬ ಸಂತೋಷಗೊಂಡಿದ್ದೇನೆ. ಆದರೆ, ಇಂತಹ ಸಮಿತಿಯು ಸಮರ್ಥ ವಕೀಲರುಗಳನ್ನಷ್ಟೇ ಅಲ್ಲ, ಹಣಕಾಸು ವ್ಯವಹಾರಸ್ಥರನ್ನು, ಅರ್ಥಶಾಸ್ತ್ರಜ್ಞರು ಮುಂತಾದವರನ್ನೂ ಸಹ ಹೊಂದಿರುತ್ತದೆ; ಭಾರತದ ಪ್ರಸ್ತುತ ಅತಿ ಹೊರೆಯ ಹಾಗೂ ಅತಿ ಜವಾಬ್ದಾರಿಯ ಆರ್ಥಿಕ ಪರಿಸ್ಥಿತಿಯಲ್ಲಿ ಇದರ ಪ್ರಜೆಗಳ ಕನಿಷ್ಠ ಸಾಮಾಜಿಕ ಮಟ್ಟ ಎಷ್ಟಿರಬೇಕು ಎಂಬುದನ್ನು ಉಲ್ಲೇಖಿಸುತ್ತಾರೆ ಎಂದು ನಾನು ಆಶಿಸುತ್ತೇನೆ. ಭಾಗ ೫ರಲ್ಲಿ ನಾವು ಬಲಿಷ್ಠ ಕೇಂದ್ರಕ್ಕೆ ಅವಕಾಶ ಕಲ್ಪಿಸಿದ್ದೇವೆ; ಆದರೆ, ಆಡಳಿತಾತ್ಮಕ ಕಾರ್ಯಗಳು ಹಾಗೂ ಶಾಸನಾತ್ಮಕ ಕಾರ್ಯಗಳೆರಡನ್ನೂ ನಿಭಾಯಿಸುವುದು ಕೇವಲ ಕೇಂದ್ರದ ಕರ್ತವ್ಯವೇ? ಕೇಂದ್ರದ ಅಧಿಕಾರಗಳ ಸಮಿತಿಯು ಆರ್ಥಿಕ ಮತ್ತು ಹಣಕಾಸು ಕ್ಷೇತ್ರಗಳಲ್ಲಿ ಅತಿ ಹೆಚ್ಚಿನ ಜ್ಞಾನವನ್ನು ಹೊಂದಿರುವ ವ್ಯಕ್ತಿಗಳನ್ನು ಹೊಂದಿರುವುದನ್ನು ನಾನು ಬಹಳವಾಗಿ ಮೆಚ್ಚಿಕೊಂಡಿದ್ದೇನೆ. ನನ್ನ ಸ್ನೇಹಿತರಾದ ಪಂಡಿತ್ ಗೋವಿಂದವಲ್ಲಭ ಪಂತ್ ಅವರು ಇದರಲ್ಲಿ ಇದ್ದಾರೆ ಎಂದು ನನಗೆ ಗೊತ್ತು ಮತ್ತು ಅವರು ಉತ್ತಮ ಹಣಕಾಸು ತಜ್ಞರಾಗಿದ್ದಾರೆ; ಆದರೆ, ಇತರರೂ ಸಹ ಇದರಲ್ಲಿ ಇರುವುದು ಒಳ್ಳೆಯದು. ಇದು ನಾವು ಬಯಸುವ ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಭದ್ರತೆ. ಆಡಳಿತವು ಹೇಗೂ ನಡೆಯುತ್ತದೆ. ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿರುವುದಕ್ಕೆ ನನ್ನನ್ನು ಕ್ಷಮಿಸಿ. ಆದರೆ, ನಾನೊಂದು ಅಂತಿಮ ಅಭಿಪ್ರಾಯಕ್ಕೆ ಬಂದಿದ್ದೇನೆ; ಕೇಂದ್ರದ ಸಂವಿಧಾನವು ಭಾರತ ಸರ್ಕಾರ ಕಾಯಿದೆಯಲ್ಲಿನ ಆಡಳಿತಾತ್ಮಕ ಕಾಠಿಣ್ಯವನ್ನು ಹಗುರಗೊಳಿಸಿಲ್ಲ. ಆದಾಗ್ಯೂ, ಅವರು ಅಂತಿಮ ಕೇಂದ್ರ ಸಂವಿಧಾನವನ್ನು ನಮ್ಮ ಮುಂದೆ ತಂದಿದ್ದಾರೆ ಮತ್ತು ನಾವು ಇದನ್ನು ಅಕ್ಟೋಬರ್‌ನಲ್ಲಿ ಪರಿಗಣಿಸಲಿದ್ದೇವೆ. ಆದರೆ, ಈ ಸದನದಲ್ಲಿ ನಮ್ಮ ನಾಯಕರುಗಳು ಹಾಗೂ ಕೇಂದ್ರದ ಅಧಿಕಾರಗಳ ಸಮಿತಿಯ ಸದಸ್ಯರು ಮಾಡಿದ ಭಾಷಣಗಳ ಧೋರಣೆಯನ್ನು ಪ್ರಮಾಣಿಸಿದಾಗ ನಾನು ಕಂಡುಕೊಂಡಿದ್ದೇನೆಂದರೆ, ಅವರು ಅಧಿಕಾರವನ್ನು – ಆಡಳಿತಾತ್ಮಕ ಅಧಿಕಾರ, ಶಾಸನಾತ್ಮಕ ಅಧಿಕಾರ ಮತ್ತು ಇತರೆಯವು – ಬಯಸುತ್ತಾರೆ. ಆದರೆ ಇವೆಲ್ಲ ಕೇವಲ ದೇಶದಲ್ಲಿ ಮಿಲಿಯಗಟ್ಟಲೆ ಜನರ ಶಾಂತಿ ಹಾಗೂ ಸಮಾಧಾನವನ್ನು ಕಾಪಾಡುವ ಮೂಲಕ ಶಾಂತಿ ಹಾಗೂ ಸಂತೋಷಗಳು ನೆಲೆಸುವಂತೆ ಮಾಡುವ ಸಲಕರಣೆಗಳಾಗಿವೆ. ಇದು, ಈ ಜನರು ಅಂದರೆ ನಿಜವಾಗಿಯೂ ಏನು, ಅವರು ನಿಜಕ್ಕೂ ಸಾಮಾಜಿಕ ನ್ಯಾಯ ಸ್ಥಾಪನೆಯನ್ನು ಬಯಸುತ್ತಾರೆಯೇ ಅಥವಾ ಅಧಿಕಾರ ರಾಜಕೀಯ ಪ್ರಭಾವ ಬೀರುವ ನೌಕರಶಾಹಿ ಸರ್ಕಾರವನ್ನು ವಿಸ್ತರಿಸಲು ಬಯಸುತ್ತಾರೆಯೇ ಎಂಬುದನ್ನು ತೋರಿಸುವ ಹಣಕಾಸು ಮತ್ತು ಆರ್ಥಿಕ ಅಧಿಕಾರವಾಗಿದೆ. ಯಾರು ಅಧಿಕಾರದಲ್ಲಿ ಇರುತ್ತಾರೋ ಅವರು, ಸಹೋದರರಿರಬಹುದು ಇಲ್ಲವೇ ಮಲಸಹೋದರರಿರಬಹುದು, ಬ್ರಿಟಿಷರು ಮಾಡಿದ ರೀತಿಯಲ್ಲಿಯೇ ಅಧಿಕಾರವನ್ನು ಚಲಾಯಿಸುವುದಕ್ಕೆ ಬದ್ಧರಾಗಿರುತ್ತಾರೆ. ಇದಕ್ಕೆ ಕಾರಣವೇನೆಂದರೆ, ನಮ್ಮಲ್ಲಿ ಬಹುಮಂದಿ ಬ್ರಿಟಿಷ್ ಸಂಪ್ರದಾಯದಲ್ಲಿಯೇ ಬೆಳೆದವರಾಗಿದ್ದೇವೆ. ಮಾನ್ಯರೆ, ಆ ಸಂಪ್ರದಾಯವನ್ನು ವಿರೋಧಿಸುವುದು ಮತ್ತು ತತ್‌ಕ್ಷಣ ಪ್ರಜಾಸತ್ತಾತ್ಮಕ ತತ್ತ್ವಗಳನ್ನು ದೃಢೀಕರಿಸುವುದು ತುಂಬ ಕಷ್ಟ; ಹಾಗೆ ಮಾಡುವುದರಿಂದಾಗಿ, ಸಮೃದ್ಧವಾಗಿರುವ ನಮ್ಮ ದಶಲಕ್ಷಗಟ್ಟಲೆ ಜನರಿಗೆ ಸಾಮಾಜಿಕ ನ್ಯಾಯ ಒದಗಿಸಬಹುದು ಹಾಗೂ ಸಾಮಾಜಿಕ ಭದ್ರತೆಯನ್ನು ನಾವು ಸ್ಥಾಪಿಸಬಹುದು. ಆದ್ದರಿಂದ ಆಗಸ್ಟ್

ಅಧಿವೇಶನದಲ್ಲಿಯೂ ಸಹ ಚರ್ಚಿತವಾಗಲಿರುವ ಕೇಂದ್ರ ಅಧಿಕಾರಗಳ ಸಮಿತಿಯ ವರದಿಯನ್ನು ನಾನು ಸ್ವಾಗತಿಸುತ್ತೇನೆ. ಅಲ್ಲಿ ನಾನು ಕಂಡುಕೊಂಡಿದ್ದೇನೆಂದರೆ, ಸಮಿತಿಯ ಸದಸ್ಯರು, ಕೇಂದ್ರ ಸಂವಿಧಾನ ಸಮಿತಿಯ ಕರಡಿಗಿಂತಲೂ ಮುಂದಿನ ಹಂತಕ್ಕೆ ಹೋಗಿದ್ದಾರೆ. ಅಲ್ಲಿ ಅವರು ಹೇಳುತ್ತಾರೆ : (೨ನೇ ವರದಿಯ ಕಂಡಿಕೆ ೬.) (ಅಡಚಣೆ).

**ಮಾನ್ಯ ಸಭಾಧ್ಯಕ್ಷರು** : ಗೌರವಾನ್ವಿತ ಸದಸ್ಯರಿಗೆ ಅಡಚಣೆ ಮಾಡಲು ನಾನು ಬಯಸುವುದಿಲ್ಲ; ಆದರೆ, ನಾವು ಈಗ ಖಂಡ ೩ನ್ನು ಚರ್ಚಿಸುತ್ತಿದ್ದೇವೆ ಎಂದು ನಾನು ಅವರಿಗೆ ನೆನಪಿಸಬಹುದೇ? ಅದು ಸಹಾಯಧನಕ್ಕೆ ಸಂಬಂಧಿಸಿದೆ.

**ಶ್ರೀ ಬಿ. ದಾಸ್** : ಮಾನ್ಯರೆ, ನಾನು ತಿಳಿದಿದ್ದೇನೆ. ಅದೇ ಪ್ರಶ್ನೆಯನ್ನು ಕುರಿತು ನಾನು ಮಾತನಾಡುತ್ತಿದ್ದೇನೆ. ಆ ಖಂಡವು ಪ್ರಾಂತ್ಯಗಳಿಗೆ ಅನುಕಂಪದ ಹಣ (ಚಾರಿಟಿ) ನೀಡುವ ಕುರಿತು ಹೇಳುತ್ತದೆ. ನಾನು ಅನುಕಂಪದ ಹಣವನ್ನು ಬಯಸುವುದಿಲ್ಲ. ಈ ಅಂಶದ ಬಗ್ಗೆ ಕೇಂದ್ರ ಅಧಿಕಾರಗಳ ಸಮಿತಿಯು ಕಂಡುಕೊಂಡಿದ್ದನ್ನು ಮಾತ್ರ ನಾನು ಇಲ್ಲಿ ಓದಬಯಸುತ್ತೇನೆ. ಏಕೆಂದರೆ, ಅದು ಅವರ ಮನೋವೃತ್ತಿಯನ್ನು ವಿವರಿಸುತ್ತದೆ.

ಅವರು ಹೇಳುತ್ತಾರೆ :

"ಇದು ಅತ್ಯಂತ ಸ್ಪಷ್ಟ, ಹೇಗಿದ್ದರೂ, ನಮ್ಮಿಂದ ಸೂಚಿಸಲಾದ ತೆರಿಗೆ ಸಂಗ್ರಹ ಕಾರ್ಯವನ್ನು ಒಕ್ಕೂಟವು ತನ್ನ ಬಳಿಯೇ ಇಟ್ಟುಕೊಳ್ಳುವುದರಿಂದ, ಅದು ಕೆಲವು ಪ್ರಕರಣಗಳಲ್ಲಿ ಘಟಕಗಳ ಆರ್ಥಿಕ ಸಮತೋಲನವನ್ನು ಬಲವಂತವಾಗಿ ತೊಂದರೆಗೆ ಒಳಪಡಿಸುತ್ತದೆ ಮತ್ತು ಆದ್ದರಿಂದ, ಈ ತೆರಿಗೆ ಸಂಗ್ರಹದ ಕೆಲವು ಭಾಗವನ್ನು ಅಥವಾ ಹಂಚಿಕೆಯನ್ನು, ಒಕ್ಕೂಟದಿಂದ ಸಮಯಾನುಸಾರ ನಿಗದಿಪಡಿಸುವ ಆಧಾರದ ಮೇಲೆ ಘಟಕಗಳಿಗೆ ನೀಡುವುದಕ್ಕೆ ನಾವು ಅವಕಾಶವನ್ನು ಕಲ್ಪಿಸಬೇಕು."

ಮಾನ್ಯರೆ, ಹಣಕಾಸು ಮಂತ್ರಿ ಇರಬಹುದು ಅಥವಾ ರಾಷ್ಟ್ರಪತಿ ಇರಬಹುದು ಅಥವಾ ಒಕ್ಕೂಟದ ಸರ್ಕಾರವಿರಬಹುದು ಅಥವಾ ಇತರ ಯಾರೇ ಇರಬಹುದು; ಅವರು ನೀಡುವ ಸಹಾಯಧನ ಅಥವಾ ಅನುಕಂಪದ ಹಣ ಅಥವಾ ಅನುದಾನವನ್ನು ನಾನು ಬಯಸುವುದಿಲ್ಲ. ನಾನು ಬಯಸುವುದೇನೆಂದರೆ, ಇದಕ್ಕೆ ಸಂವಿಧಾನ ಕಾಯಿದೆಯಲ್ಲಿ ಕಾನೂನಾತ್ಮಕವಾಗಿ ಅವಕಾಶ ಕಲ್ಪಿಸಬೇಕು. ನನ್ನ ಸ್ನೇಹಿತರಾದ ಸರ್ ಗೋಪಾಲಸ್ವಾಮಿಯವರು, ಅಲ್ಲೊಂದು ತಜ್ಞರ ಸಮಿತಿ ಇರುತ್ತದೆಂದು ನಮಗೆ ತಿಳಿಸಿದ್ದಾರೆ. ನಾನು ಬಯಸುವುದೇನೆಂದರೆ, ಈ ಅನುದಾನವನ್ನು ಕಾನೂನಾತ್ಮಕವಾಗಿ ನೀಡಬೇಕು ಮತ್ತು ಅದು ಹಣಕಾಸು ಮಂತ್ರಿಗಳ ಅಥವಾ ಅವರು ಯಾರೇ ಇರಬಹುದು, ಅವರ ಅನುಕಂಪದ ಅನುದಾನವಾಗಬಾರದು. ಅವರು ಆ ಕ್ಷೇತ್ರದ ತಜ್ಞರಿರಬಹುದು ಅಥವಾ ಬಡಜನರ ಸ್ನೇಹಿತನಿರಬಹುದು, ಯಾರೇ ಇರಬಹುದು, ಪರವಾಗಿಲ್ಲ. ಈ ಅನುದಾನ ಅಥವಾ ಸಹಾಯಧನವನ್ನು ಆಗಾಗ, ಪ್ರತಿ ಮೂರು ವರ್ಷಗಳಿಗೆ ಅಥವಾ ಪ್ರತಿ ಐದು ವರ್ಷಗಳಿಗೆ ಒಮ್ಮೆ ಪರಿಶೀಲಿಸಬೇಕು. ಇದು ನಾನು ಮುಂದಿಡುತ್ತಿರುವ ಸಲಹೆಯಾಗಿದೆ. ನಾನು ಬಯಸುವುದೇನೆಂದರೆ, ಸಮೃದ್ಧ ಮಿಲಿಯಗಟ್ಟಲೆ ಜನರಿಗಾಗಿ ಅವರು ಏನು ಮಾಡಲು ಹೊರಟಿದ್ದಾರೆ ಎಂಬುದನ್ನು ನಿಖರವಾಗಿ ತಿಳಿಸಬೇಕು. ಪ್ರಾಂತ್ಯಗಳು ಬಡ ಜಮೀನ್ದಾರರು ಮತ್ತು ದೊಡ್ಡ ಜಮೀನ್ದಾರರ ರೂಪದಲ್ಲಿ ಬರಲಿವೆ. ಖಂಡ ೩ನ್ನು ಬೆಂಬಲಿಸುವ ಸಂದರ್ಭವು, ಈ ಸದನದ ಮುಂದೆ ನನ್ನ ದೃಷ್ಟಿಕೋನವನ್ನು ನಿರೂಪಿಸುವುದಕ್ಕೆ ನನಗೆ ಅವಕಾಶ ನೀಡಿದೆ ಮತ್ತು ಈ ಕೇಂದ್ರ ಅಧಿಕಾರಗಳ ಸಮಿತಿಯು ಸಮ್ಮತವಾಗುತ್ತದೆ ಎಂದು ಭಾವಿಸುತ್ತೇನೆ. ಸಂವಿಧಾನ ಅಧಿನಿಯಮದಲ್ಲಿನ ವಿಭಾಗಗಳು ಸಾಮಾಜಿಕ ನ್ಯಾಯವನ್ನು ಒದಗಿಸುತ್ತವೆ ಮತ್ತು ಭಾರತದ ಪ್ರತಿಯೊಬ್ಬ ಪ್ರಜೆಗೂ ಕನಿಷ್ಠ ಜೀವನ ಮಟ್ಟವನ್ನು ನಿಶ್ಚಿತಗೊಳಿಸುತ್ತವೆ ಎಂದು ನಾನು ಆಶಿಸುತ್ತೇನೆ.

**ಶ್ರೀಯುತ ಓಮಿಯೋ ಕುಮಾರ ದಾಸ್** : ಮಾನ್ಯ ಸಭಾಧ್ಯಕ್ಷರೆ, ನನ್ನ ತಿದ್ದುಪಡಿಯನ್ನು ಹಿಂದಕ್ಕೆ

ಪಡೆಯುವ ಸಂದರ್ಭದಲ್ಲಿಯೇ ಹೇಳಿದ್ದೇನೆ, ಈ ಖಂಡ ಇನ್ನು ಬೆಂಬಲಿಸುವ ನಿಟ್ಟಿನಲ್ಲಿ ನಾನು ಕೆಲವು ಹೇಳಿಕೆ ನೀಡಬೇಕೆಂದು.

ಮಾನ್ಯರೆ, ಸಹಾಯಧನದ ಪ್ರಶ್ನೆಯು ಎಲ್ಲ ಒಕ್ಕೂಟಗಳಲ್ಲಿಯೂ ಗಾಬರಿಗೊಳಿಸುವಂತಹ ವಿಷಯವಾಗಿದೆ. ಆದರೆ ಈಗಲೂ ಈ ಪ್ರಶ್ನೆಗಳು ಹೊಂದಾಣಿಕೆಯ ರೀತಿಯಲ್ಲಿ ಪರಿಹಾರಗೊಳ್ಳುತ್ತಿವೆ. ಎಲ್ಲ ಒಕ್ಕೂಟಗಳಲ್ಲಿ ಸಂವಿಧಾನ ರಚನೆಕಾರರು ಈ ಸಮಸ್ಯೆಯನ್ನು ಹೊಂದಾಣಿಕೆಯ ಭಾವದಲ್ಲಿ ಅನುಸಂಧಾನ ನಡೆಸಿದ್ದಾರೆ ಮತ್ತು ಎಲ್ಲ ಘಟಕಗಳಿಗೂ ನಿಷ್ಪಕ್ಷಪಾತ ರೀತಿಯಲ್ಲಿ ಪಾಲು ನೀಡುವ ಪ್ರಯತ್ನ ಮಾಡಿದ್ದಾರೆ. ಮಾನ್ಯರೆ, ನಮ್ಮ ಸಂವಿಧಾನವನ್ನು ರಚಿಸುವಂತಹ ಮಹತ್ತ್ವದ ಕಾರ್ಯವನ್ನು ನಮಗೆ ವಹಿಸಲಾಗಿದೆ ಮತ್ತು ಅತ್ಯಂತ ಗಾಬರಿಗೊಳಿಸುವಂತಹ ಸಹಾಯಧನಗಳ ವಿಷಯದಲ್ಲಿ ನಾವು ವ್ಯವಹರಿಸಬೇಕಿದೆ. ಈ ವಿಷಯವು ಅತ್ಯಂತ ಗಾಬರಿಗೊಳಿಸುವಂತಹ ಸ್ಥಾನದಲ್ಲಿರುವುದು ಏಕೆಂದರೆ, ನಾವು ರಾಷ್ಟ್ರೀಯ ಆದಾಯವನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಹೊಂದಿದ್ದೇವೆ ಮತ್ತು ವಿವಿಧ ಪ್ರಾಂತ್ಯಗಳಲ್ಲಿ ವಿವಿಧ ಸಮಸ್ಯೆಗಳನ್ನು ಹೊಂದಿದ್ದೇವೆ; ಜೊತೆಗೆ ಅನೇಕ ಹಿಂದುಳಿದ ಸಮಾಜಗಳು ಹಾಗೂ ಪಂಗಡಗಳನ್ನು, ಪ್ರಾಂತ್ಯಗಳನ್ನು ಮತ್ತು ಇತರ ಅನೇಕ ಜಟಿಲ ಸಮಸ್ಯೆಗಳನ್ನು ಹೊಂದಿದ್ದೇವೆ. ಇಂತಹ ಸ್ಥಿತಿಯಲ್ಲಿಯೂ, ಭವಿಷ್ಯದಲ್ಲಿ ರಚನೆಗೊಳ್ಳಲಿರುವ ತಜ್ಞರ ಸಮಿತಿಯು ಈ ವಿಷಯದಲ್ಲಿ ವ್ಯವಹರಿಸುತ್ತದೆ ಮತ್ತು ಎಲ್ಲ ಘಟಕಗಳಿಗೂ ನಿಷ್ಪಕ್ಷಪಾತ ರೀತಿಯಲ್ಲಿ ಪಾಲು ನೀಡಲಿದೆ ಎಂದು ನಾನು ಭಾವಿಸುತ್ತೇನೆ.

ನಾವು ನಮ್ಮ ಒಕ್ಕೂಟಕ್ಕೆ ಕರಡು ಸಂವಿಧಾನವನ್ನು ರಚಿಸುವಂತಹ ಸಂದರ್ಭದಲ್ಲಿ ಭಾರತ ಸರ್ಕಾರ ಅಧಿನಿಯಮದಲ್ಲಿನ ಸಾಂವಿಧಾನಿಕ ವ್ಯವಸ್ಥೆಯನ್ನು ಗಣನೆಗೆ ತೆಗೆದುಕೊಂಡಿದ್ದೇವೆ ಮತ್ತು ನನ್ನ ಮನಸ್ಸಿನಲ್ಲಿ ಹುದುಗಿರುವ ಅನುಮಾನವೇನೆಂದರೆ, ಭಾರತ ಸರ್ಕಾರ ಅಧಿನಿಯಮದಲ್ಲಿ ಕಲ್ಪಿಸಲಾಗಿರುವ ಆರ್ಥಿಕ ವ್ಯವಸ್ಥೆಯನ್ನೂ ಸಹ ನಾವು ಒಪ್ಪಿಕೊಳ್ಳಬಹುದು. ಮಾನ್ಯರೇ, ಆ ಅಧಿನಿಯಮದ ಅಡಿಯಲ್ಲಿನ ಆರ್ಥಿಕ ಏರ್ಪಾಟಿನ ವ್ಯವಸ್ಥೆಯು ತನ್ನ ಗರ್ಭದಲ್ಲಿ ವಿಭಿನ್ನ ಹೊರನೋಟವನ್ನು ಒಳಗೊಂಡಿತ್ತು ಎಂಬುದನ್ನು ಈ ಸದನಕ್ಕೆ ನಾನು ಹೇಳಬೇಕಾದ ಆವಶ್ಯಕತೆಯಿಲ್ಲ. ಆ ಸಮಯದಲ್ಲಿ, ಪ್ರಾಂತ್ಯಗಳು ಕೊರತೆಗಳನ್ನು ಎದುರಿಸುತ್ತಿದ್ದವು ಮತ್ತು ಆ ಸಮಯದಲ್ಲಿ ರಚಿಸಲಾದ ಸಮಿತಿಯು, ಅಂದರೆ, ಒಟ್ಟೊ ನೇಮೇಯರ್ ಸಮಿತಿಯು ಆದಾಯ–ವೆಚ್ಚಗಳ ಸಮತೋಲನವನ್ನು ನಿಷ್ಕರ್ಷೆ ಮಾಡಬೇಕಿತ್ತು. ಜೊತೆಯಲ್ಲಿ, ಮಾನ್ಯರೆ, ಆದಾಯ–ವೆಚ್ಚಗಳ ಸಮತೋಲನದ ವಿಷಯವನ್ನು ಸಮಿತಿಯು ಆ ಸಂದರ್ಭದ ಸಾರ್ವಜನಿಕ ಹಣಕಾಸಿಗೆ ಸಂಬಂಧಿಸಿದಂತೆ ಯಶಸ್ಸು ಸಾಧಿಸುವ ಉದ್ದೇಶದೊಂದಿಗೆ ಕೈಗೆತ್ತಿಕೊಂಡಿತು. ಈ ಉದ್ದೇಶಗಳು ಇತ್ತೀಚಿನ ಕೆಲವು ವರ್ಷಗಳಲ್ಲಿ ಸಾಕಷ್ಟು ಬದಲಾವಣೆಗೆ ಒಳಗಾಗಿವೆ ಮತ್ತು ಅವು ವಿಭಿನ್ನ ಅಳತೆಗೋಲುಗಳಿಂದ ಭರ್ತಿಮಾಡಲ್ಪಟ್ಟಿವೆ – ಸಂಪೂರ್ಣ ಔದ್ಯೋಗಿಕತೆಯನ್ನು ಕಾಪಾಡಿಕೊಳ್ಳುವ ಅಳತೆಗೋಲು – ಜನರಿಗೆ ಗರಿಷ್ಠ ಪ್ರಮಾಣದಲ್ಲಿ ಲಾಭವಾಗುವಂತಹ ಆರ್ಥಿಕ ವ್ಯವಸ್ಥೆಯನ್ನು ಬಳಕೆಗೆ ತಂದು ಉತ್ತಮ ಆರ್ಥಿಕ ಸ್ಥಿತಿಯನ್ನು ಕಾಪಾಡುವ ರೀತಿಯಲ್ಲಿ ರೂಪಿಸಲಾದ ನೀತಿಯು ಆವಶ್ಯಕವಾಗಿ ಕ್ರಿಯಾತ್ಮಕವಾದುದಾಗಿದೆ. ಮಾನ್ಯರೆ, ಪ್ರಜೆಗಳ ಸರ್ಕಾರ ಮತ್ತು ಪ್ರಜೆಗಳಿಂದಾದ ಸರ್ಕಾರವು ಸ್ಥಾಪಿತವಾಗುತ್ತಿದೆ ಮತ್ತು ಒಂದು ವೇಳೆ ಇದು ಪ್ರಜೆಗಳಿಗೆ ಗರಿಷ್ಠ ಲಾಭವನ್ನು ತಂದುಕೊಡದೇ ಇದ್ದರೆ, ಇದಕ್ಕೆ ಅರ್ಥವೇನು ಮತ್ತು ಈ ಸರ್ಕಾರದಿಂದಾಗುವ ಉಪಯೋಗವಾದರೂ ಏನು?

ಮಾನ್ಯರೆ, ಹಾಗಾಗಲಾರದು; ಪ್ರಾಯಃ ಒಂದು ವೇಳೆ ನಾನಿಲ್ಲಿ ಕೆನಡಿಯನ್ ಅಥವಾ ಆಸ್ಟ್ರೇಲಿಯನ್ ಸಂವಿಧಾನವನ್ನು ಸೂಚಿಸಿದರೆ, ಇದು ಅಪ್ರಾಸಂಗಿಕವಾಗಲಾರದು. ಆ ಸಂವಿಧಾನಗಳ ರಚನೆಕಾರರು ಪ್ರಾಂತೀಯ ಘಟಕಗಳಿಗೆ ಹೆಚ್ಚಿನ ಸಹಾಯಧನವನ್ನು ನೀಡುವ ಮೂಲಕ ಪ್ರಾಂತೀಯ ಆವಶ್ಯಕತೆಗಳನ್ನು ತಲುಪುವಂತಹ ಹೊಸ ಪದ್ಧತಿಯನ್ನು ವಿಕಸಿತಗೊಳಿಸಿದರು. ಮಾನ್ಯರೆ, ನನ್ನ ಪ್ರಾಂತ್ಯ ಅಸ್ಸಾಮ್‌ನಲ್ಲಿ ವಿಶೇಷ ಸಮಸ್ಯೆಗಳಿವೆ.

ಆ ಪ್ರದೇಶವು ಯಾವುದೇ ದೊಡ್ಡ ಕೈಗಾರಿಕೆಗಳಿಲ್ಲದೇ ಕೃಷಿಪ್ರಧಾನವಾಗಿದೆ. ಇದು ಹಿಂದುಳಿದ ಪಂಗಡ ಮತ್ತು ಸಮಾಜದವರಿಂದ ತುಂಬಿದ ಪ್ರದೇಶವಾಗಿದೆ ಮತ್ತು ದೊಡ್ಡ ಪ್ರಮಾಣದಲ್ಲಿನ ಹಿಂದುಳಿದ ಜನರು ಚಹಾ ತೋಟದ ಕಾರ್ಮಿಕರ ರೂಪದಲ್ಲಿ ಈ ಪ್ರದೇಶಕ್ಕೆ ಕೃತಕವಾಗಿ ವರ್ಗಾವಣೆಗೊಂಡಿದ್ದಾರೆ. ಅಲ್ಲದೇ ಅಲ್ಲಿ ಪ್ರಕ್ಷುಬ್ಧ ನದಿಗಳಿದ್ದು ಅವು ನಳನಳಿಸುವ ಆ ಪ್ರದೇಶವನ್ನು ನಾಶಗೊಳಿಸಿವೆ. ಅಲ್ಲಿ ಕರಾಳ ಸಾಂಕ್ರಾಮಿಕ ರೋಗಗಳೂ ಇದ್ದು ಅವು ಸಂತೃಪ್ತ ಕುಟುಂಬಗಳ ನೆಮ್ಮದಿಯನ್ನು ಧ್ವಂಸಮಾಡಿವೆ. ಇವುಗಳನ್ನು ನಿಯಂತ್ರಿಸಬೇಕಾದ ಆವಶ್ಯಕತೆಯಿದೆ. ಇವು ದೊಡ್ಡ ಸಮಸ್ಯೆಗಳು ಮತ್ತು ಉತ್ತಮ ಆರ್ಥಿಕ ವ್ಯವಸ್ಥೆ ಇಲ್ಲದ ಹೊರತು, ಈ ತುರ್ತು ಆವಶ್ಯಕತೆಗಳನ್ನು ಪೂರೈಸುವ ಭರವಸೆ ಹೊಂದುವುದು ಅಸಾಧ್ಯ. ಅನುಮಾನವೇ ಇಲ್ಲ, ನಮ್ಮದು ಹಿಂದುಳಿದ ಪ್ರದೇಶ; ಆದರೆ, ನಾನು ಈ ಸದನದ ಗಮನಕ್ಕೆ ತರಲು ಬಯಸುವುದೇನೆಂದರೆ, ಚಹಾದ ಮೇಲಿನ ರಫ್ತು ತೆರಿಗೆ ಮತ್ತು ಪೆಟ್ರೋಲ್ ಹಾಗೂ ಸೆಣಬಿನ ಮೇಲಿನ ತೆರಿಗೆಯ ಮೂಲಕ ಕೇಂದ್ರದ ಖಜಾನೆಗೆ ಹೆಚ್ಚಿನ ಕೊಡುಗೆ (ಚಂದಾ) ನೀಡುವವರಲ್ಲಿ ನಾವೂ ಸಹ ಒಬ್ಬರಾಗಿದ್ದೇವೆ. ಈ ಎಲ್ಲ ಮಾರ್ಗಗಳ ಮೂಲಕ ನಾವು ಕೇಂದ್ರದ ಖಜಾನೆಗೆ ಏಳು ಕೋಟಿ ರೂಪಾಯಿಗಳಿಗೆ ಕಡಮೆಯಿಲ್ಲದ ಕೊಡುಗೆ ನೀಡುತ್ತೇವೆ; ಆದರೆ, ಈಗಿನ ಹಣಕಾಸು ವ್ಯವಸ್ಥೆಯಲ್ಲಿ ಕೇವಲ ೨೫ ಲಕ್ಷ ರೂಪಾಯಿಗಳಷ್ಟು ಅತಿ ಕಡಿಮೆ ಸಹಾಯಧನವನ್ನು ಪಡೆಯುತ್ತೇವೆ. ಈ ವಿಷಯವನ್ನು ಕುರಿತು ಸಂಶೋಧನೆ ನಡೆಸಲಿರುವ ತಜ್ಞರ ಸಮಿತಿಯು ಇನ್ನು ಮುಂದೆ ಅಸ್ಸಾಮ್‌ಗೆ ನಿಷ್ಪಕ್ಷಪಾತ ರೀತಿಯಲ್ಲಿ ಪಾಲು ನೀಡುತ್ತದೆಂದು ನಾನು ಆಶಿಸುತ್ತೇನೆ.

ಈ ಮಾತುಗಳೊಂದಿಗೆ ನಾನು ಖಂಡ ೩ನ್ನು ಬೆಂಬಲಿಸಲು ಕೋರುತ್ತೇನೆ.

**ಶ್ರೀ ಮೊಹಮ್ಮದ್ ಶರೀಫ್** (ಮೈಸೂರು ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ಅನೇಕ ತೊಂದರೆಗಳಿಗೆ, ಯಾತನೆಗಳಿಗೆ ಒಳಗಾಗಿರುವವರನ್ನು (ನೊಂದವರನ್ನು) ಮೇಲೆತ್ತುವುದಕ್ಕೆ ಬೇಕಾದ ಅವಕಾಶಗಳ ಬಗ್ಗೆ ಯೋಚಿಸಿ, ಈ ವರದಿಯನ್ನು ಹೊರತರುವುದಕ್ಕೆ ಯಾರು ಜವಾಬ್ದಾರರಾಗಿದ್ದಾರೋ ಅವರು ನಮ್ಮ ಅಭಿನಂದನೆಗಳಿಗೆ ಪಾತ್ರರಾಗಿದ್ದಾರೆ. ಈ ನಿರ್ದಿಷ್ಟ ಖಂಡಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಒಕ್ಕೂಟದ ಸಂಸತ್ತಿನ ಪ್ರಕಾರ ಕಾನೂನುಮಾಡಬಹುದಾದ ವಿಷಯದ ಉದ್ದೇಶವೆಂದು ಹೇಳಲಾಗದ ಯಾವುದೇ ಉದ್ದೇಶಗಳಿಗೆ, ಒಕ್ಕೂಟದ ಆದಾಯದಿಂದ ಅನುದಾನ ಅಥವಾ ಸಹಾಯಧನವನ್ನು ನೀಡುವ ಅಧಿಕಾರವನ್ನು ಒಕ್ಕೂಟದ ಸರ್ಕಾರಕ್ಕೆ ಕೊಡುವ ಉದ್ದೇಶವನ್ನು ಹೊಂದಿದೆ. ಮಾನ್ಯರೆ, ನಮ್ಮ ಬಳಿ ಅನೇಕ ಯುದ್ಧಪೂರ್ವ ಯೋಜನೆಗಳು, ಆರ್ಥಿಕ ಹಾಗೂ ವಾಣಿಜ್ಯ ಹಾಗೂ ಜನರ ಶೈಕ್ಷಣಿಕ ಗುಣಮಟ್ಟ ಸುಧಾರಿಸುವ ಉದ್ದೇಶದಿಂದ ವಿನ್ಯಾಸಗೊಳಿಸಿದ ಯೋಜನೆಗಳು ಇವೆ ಎಂಬುದನ್ನು ನಾನು ಹೇಳಬೇಕಾದ ಆವಶ್ಯಕತೆಯಿಲ್ಲ. ಈ ಯೋಜನೆಗಳು ಅಡಿಗಲ್ಲಿನ ಮೇಲಿವೆ; ಆದರೆ, ಇವನ್ನು ಕಾರ್ಯರೂಪಕ್ಕೆ ತರಲು ಹಣ ದೊರಕಬೇಕಾದುದು ತುಂಬ ಆವಶ್ಯಕ. ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಈ ಯೋಜನೆಗಳನ್ನು ತತ್‌ಕ್ಷಣದಿಂದ ಅನ್ವಯವಾಗುವಂತೆ ಜಾರಿಗೊಳಿಸುವುದಕ್ಕೆ ಅವು ಆರ್ಥಿಕ ಸೌಲಭ್ಯ ಹೊಂದಿಲ್ಲ ಮತ್ತು ಬಡತನವನ್ನು ಕುರಿತು ಹೇಳುವುದಾದರೆ, ಇದು ಉತ್ತರದ ಪ್ರಾಂತ್ಯಗಳಲ್ಲಷ್ಟೇ ಅಲ್ಲ, ದಕ್ಷಿಣದಲ್ಲಿಯೂ ಕೂಡ ಮಿತಿಮೀರಿದೆ. ಅನೇಕ ಜನರು ಅರೆಹೊಟ್ಟೆ ಮತ್ತು ಹಸಿವಿನಿಂದ ಅಸುನೀಗುತ್ತಿದ್ದಾರೆ ಮತ್ತು ಜನಸಮುದಾಯದ ಜ್ಞಾನೋದಯ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ತುರ್ತುಗಮನ ಹರಿಸಬೇಕಾದ ಆವಶ್ಯಕತೆಯೂ ಇದೆ.

ರಾಷ್ಟ್ರ ನಿರ್ಮಾಣದ ಈ ವಿಷಯಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಪ್ರಾಂತ್ಯಗಳ ಬಳಿಯಲ್ಲಿ ಹಣ ಇದೆಯೆಂದು ನಾನು ಭಾವಿಸುವುದಿಲ್ಲ. ಅವುಗಳಿಗೆ ಹಣವನ್ನು ಸರಬರಾಜು ಮಾಡುವುದು ಕೇಂದ್ರ ಸರ್ಕಾರದ ಕರ್ತವ್ಯ ಹಾಗೂ ಆ ಹಣದಿಂದ ಪ್ರಾಂತ್ಯಗಳು ಬಡ ಜನರ ಅಗತ್ಯ ಹಾಗೂ ಆವಶ್ಯಕತೆಗಳನ್ನು ಪೂರೈಸಬಹುದಾಗಿದೆ ಮತ್ತು ಆ ಮೂಲಕ ಅವರ ಜ್ಞಾನೋದಯ ಹಾಗೂ ಶಿಕ್ಷಣಕ್ಕೆ ನೆರವಾಗಬಹುದಾಗಿದೆ. ಈ ಎರಡು, ದೇಶವನ್ನು ಪ್ರಗತಿ ಮತ್ತು ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯುವ ಪ್ರಮುಖ ವಿಷಯಗಳಾಗಿವೆ.

ಇವು ತುಂಬ ಆವಶ್ಯಕವಾಗಿವೆ ಮತ್ತು ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು, ಒಕ್ಕೂಟದ ಸರ್ಕಾರದ ಆದಾಯದಲ್ಲಿ ಪ್ರಾಂತ್ಯಗಳಿಗೂ ಆವಶ್ಯಕ ನಿಧಿಯನ್ನು ನೀಡುವ ಕುರಿತಾಗಿ ಯೋಚಿಸಿದ, ನಿರ್ಧರಿಸಿದ ವರದಿಯ ರಚನೆಕಾರರ ಯೋಚನೆ ಸ್ತುತ್ಯರ್ಹವಾಗಿದೆ. ಮಾನ್ಯರೆ, ಈ ಮಾತುಗಳೊಂದಿಗೆ ಇದನ್ನು ಬೆಂಬಲಿಸುವುದಕ್ಕೆ ನಾನು ತುಂಬಾ ಹರ್ಷಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಇದು ತುಂಬ ಮುಗ್ಧ ಹಾಗೂ ಸರಳವಾದ ಖಂಡ ಮತ್ತು ಇದಕ್ಕೆ ಹೆಚ್ಚಿನ ಚರ್ಚೆಯ ಅಗತ್ಯವಿಲ್ಲ ಎಂದು ನಾನು ಭಾವಿಸಿದ್ದಿರಬೇಕಾಗಿತ್ತು. ನಾನು ಸದನವನ್ನು ಪ್ರಶ್ನಿಸುವುದೇನೆಂದರೆ, ಇದಕ್ಕೆ ಯಾವುದೇ ವಿರೋಧ ಇಲ್ಲದೇ ಇರುವುದರಿಂದ ಇನ್ನಷ್ಟು ಚರ್ಚೆ ನಡೆಸಬೇಕೇ?

**ಗೌರವಾನ್ವಿತ ಸದಸ್ಯರು :** ಬೇಡ, ಬೇಡ.

**ಮಾನ್ಯ ಸಭಾಧ್ಯಕ್ಷರು :** ಮುಂದಿಟ್ಟಿರುವ ವಿಷಯ :

"ಒಕ್ಕೂಟ ಸಂಸತ್ತಿನ ಪ್ರಕಾರ ಕಾನೂನು ಮಾಡಬಹುದಾದ ಉದ್ದೇಶ ಅಲ್ಲದಿದ್ದರೂ ಕೂಡ ಒಕ್ಕೂಟದ ಸರ್ಕಾರವು ಒಕ್ಕೂಟದ ನಿಧಿಯಿಂದ ಯಾವುದೇ ಉದ್ದೇಶಗಳಿಗಾಗಿ ಸಹಾಯಧನ ಅಥವಾ ಅನುದಾನವನ್ನು ಬಿಡುಗಡೆ ಮಾಡುವ ಅಧಿಕಾರವನ್ನು ಹೊಂದಿರುತ್ತದೆ."

ಖಂಡ ೩ನ್ನು ಅಂಗೀಕರಿಸಲಾಯಿತು.

## ಖಂಡ ೪

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಖಂಡ ೪ನ್ನು ಮಂಡಿಸಲು ನಾನು ಅನುಮತಿ ಕೋರುತ್ತೇನೆ :

"ಒಕ್ಕೂಟ ಸರ್ಕಾರವು ಒಕ್ಕೂಟದ ಯಾವುದೇ ಉದ್ದೇಶಗಳಿಗಾಗಿ, ಒಕ್ಕೂಟದ ಆದಾಯದ ಭದ್ರತೆಯ ಅಡಿಯಲ್ಲಿ, ಒಕ್ಕೂಟದ ಕಾನೂನು ನಿಗದಿಪಡಿಸಬಹುದಾದ ಯಾವುದೇ ಮಿತಿ ಮತ್ತು ನಿಬಂಧನೆಗಳಿಗೆ ಒಳಪಟ್ಟಂತೆ ಸಾಲವನ್ನು ಪಡೆಯುವ ಅಧಿಕಾರವನ್ನು ಹೊಂದಿರುತ್ತದೆ."

ಪ್ರತಿಯೊಂದು ಸರ್ಕಾರವೂ ಕೂಡ ಒಂದು ವೇಳೆ ತನ್ನ ಹಾಲಿ ಆದಾಯದಿಂದ ಖರ್ಚನ್ನು ಸರಿದೂಗಿಸುವುದು ಸಾಧ್ಯವಾಗದಿದ್ದಾಗ, ಖರ್ಚನ್ನು ಸರಿದೂಗಿಸುವುದಕ್ಕಾಗಿ ಮಾಡಬೇಕಾದುದು ಇದನ್ನೇ; ಇದರ ಪರಿಣಾಮವಾಗಿ, ಅಭಿವೃದ್ಧಿ ಸ್ವರೂಪದ ಖರ್ಚಿನ ನಾಶವಾಗಬಹುದು. ಯಾವುದೇ ಪ್ರಕಾರದ ಸರ್ಕಾರಿ ಹಣಕಾಸಿನಲ್ಲಿ ಎರವಲು ಪಡೆದುಕೊಳ್ಳುವ ಮೂಲಕ ನಿಧಿಯನ್ನು ಹೆಚ್ಚಿಸಿಕೊಳ್ಳುವುದು ಅತ್ಯಂತ ಆವಶ್ಯಕವಾಗಿದೆ. ಈ ಖಂಡವು ಸಂವಿಧಾನದಲ್ಲಿ ಅತ್ಯಂತ ಆವಶ್ಯಕವಾದ ವಿಷಯವಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಯಾವುದೇ ಸದಸ್ಯರಾದರೂ ಸೂಚನೆ ನೀಡಿರುವ ತಿದ್ದುಪಡಿಯಿದೆಯೇ?

**ಶ್ರೀ ಎಮ್. ಎಸ್. ಅನೆ :** (ಡೆಕ್ಕನ್ ರಾಜ್ಯಗಳು) : ನನ್ನ ಸಲಹೆ ಏನೆಂದರೆ, "ಒಕ್ಕೂಟದ ಆದಾಯದ ಭದ್ರತೆಯ ಮೇಲೆ" ಬದಲು "ಒಕ್ಕೂಟದ ಸ್ವತ್ತು ಮತ್ತು ಆದಾಯದ ಭದ್ರತೆಯ ಮೇಲೆ" ಎಂದು ಆಗಲಿ.

**ಮಾನ್ಯ ಸಭಾಧ್ಯಕ್ಷರು :** ಒಕ್ಕೂಟದ ಸ್ವತ್ತು ಮತ್ತು ಆದಾಯದ ಭದ್ರತೆಯನ್ನು ಕುರಿತು ಶ್ರೀ ಅನೆಯವರು ಸಲಹೆ ಮಾಡುತ್ತಿದ್ದಾರೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ನಾವು ಕರಡನ್ನು ಪರಿಗಣಿಸುವಾಗ ಇದನ್ನು ಗಮನಕ್ಕೆ ತೆಗೆದುಕೊಳ್ಳೋಣ. ಇದು ನಿಜವಾಗಿಯೂ ಆವಶ್ಯಕವೆಂದು ನಾನು ಭಾವಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಈ ಖಂಡಕ್ಕೆ ಯಾವುದಾದರೂ ತಿದ್ದುಪಡಿಯಿದೆಯೇ?

**ಶ್ರೀ ಬಿ. ದಾಸ್ :** ನನ್ನ ಬಳಿ ಒಂದಿದೆ. ಪೂರಕ ಪಟ್ಟಿ ೧ರಲ್ಲಿನ ತಿದ್ದುಪಡಿ ಸಂಖ್ಯೆ ೨೪.

**ಮಾನ್ಯ ಸಭಾಧ್ಯಕ್ಷರು** : ಅದು ಹೊಸ ಖಂಡದೊಂದಿಗೆ ಸಂಬಂಧ ಹೊಂದಿದೆ ಎಂದು ನಾನು ತೆಗೆದುಕೊಳ್ಳುತ್ತೇನೆ. ಇದು ಈ ಖಂಡಕ್ಕೆ ಸಂಬಂಧಿಸಿಲ್ಲ.

ಮುಂದಿಟ್ಟಿರುವ ವಿಷಯ :

"ಒಕ್ಕೂಟದ ಯಾವುದೇ ಉದ್ದೇಶಗಳಿಗಾಗಿ ಒಕ್ಕೂಟದ ಆದಾಯದ ಭದ್ರತೆಯ ಅಡಿಯಲ್ಲಿ, ಒಕ್ಕೂಟದ ಕಾನೂನು ನಿಗದಿಪಡಿಸಬಹುದಾದಂತಹ ಯಾವುದೇ ಮಿತಿ ಮತ್ತು ನಿಬಂಧನೆಗಳಿಗೆ ಒಳಪಟ್ಟಂತೆ ಎರವಲು ಪಡೆಯುವ ಅಧಿಕಾರವನ್ನು ಒಕ್ಕೂಟದ ಸರ್ಕಾರವು ಹೊಂದಿರುತ್ತದೆ."

ಖಂಡ ೪ನ್ನು ಅಂಗೀಕರಿಸಲಾಯಿತು.

## ಖಂಡ ೫

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನಾನು ಮಂಡಿಸುತ್ತೇನೆ :

"ತಾನು ಸೂಚಿಸುವ ಯಾವುದೇ ಕಾಲಾವಧಿಗಳು ಮತ್ತು ಅಂತಹ ಯಾವುದೇ ನಿಬಂಧನೆಗಳ ಅಡಿಯಲ್ಲಿ ಒಕ್ಕೂಟದ ಯಾವುದೇ ಘಟಕಗಳಿಗೆ ಎರವಲು (ಸಾಲ) ಅಥವಾ ಸಾಲಕ್ಕೆ ಜಾಮೀನು ನೀಡುವ ಅಧಿಕಾರವನ್ನು ಒಕ್ಕೂಟದ ಸರ್ಕಾರವು ಹೊಂದಿರುತ್ತದೆ."

ಇದೂ ಕೂಡ ಸರಳವಾದ ಮತ್ತು ತುಂಬ ಆವಶ್ಯಕವಾದ ಖಂಡವಾಗಿದೆ. ಘಟಕ ಸರ್ಕಾರಗಳು ಮಾಡಲು ಉದ್ದೇಶಿಸಿದ ಖರ್ಚನ್ನು ಸರಿದೂಗಿಸುವುದಕ್ಕೆ ಸಾಕಷ್ಟು ಹಣ ನೀಡುವುದಕ್ಕೆ ಮತ್ತು ಆ ಸಾಲವನ್ನು ತೀರಿಸುವುದಕ್ಕೆ ಒಕ್ಕೂಟದ ಸರ್ಕಾರವು ತನ್ನನ್ನು ತಾನು ಜವಾಬ್ದಾರವಾಗಿಸಿಕೊಂಡಿದೆ. ಒಂದು ವೇಳೆ ಘಟಕ ಸರ್ಕಾರಗಳಿಗೆ ಸಾಲದ ಆವಶ್ಯಕತೆ ಕಂಡುಬಂದರೆ, ಅದು ಕೇಳುವ ಖರ್ಚಿಗೆ ಒಕ್ಕೂಟದ ಸರ್ಕಾರವು ಒಂದೋ ಸಾಲವನ್ನು ಮಂಜೂರು ಮಾಡುತ್ತದೆ ಇಲ್ಲವೇ ಘಟಕವು ಎತ್ತುವ ಸಾಲಕ್ಕೆ ಜಾಮೀನುದಾರನಾಗುತ್ತದೆ.

ಮಾನ್ಯರೆ, ನಾನು ಮಂಡಿಸುತ್ತೇನೆ.

(ಪಟ್ಟಿ ೨ರಲ್ಲಿನ ೩೭೮ ಮತ್ತು ೩೭೯ನೇ ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ.)

**ಮಾನ್ಯ ಸಭಾಧ್ಯಕ್ಷರು** : ಇದಕ್ಕೆ ಯಾವುದೇ ತಿದ್ದುಪಡಿಗಳಿಲ್ಲ. ಮುಂದಿಟ್ಟಿರುವ ವಿಷಯ :

"ತಾನು ಸೂಚಿಸುವ ಯಾವುದೇ ಕಾಲಾವಧಿಗಳು ಮತ್ತು ಅಂತಹ ಯಾವುದೇ ನಿಬಂಧನೆಗಳ ಅಡಿಯಲ್ಲಿ ಒಕ್ಕೂಟದ ಯಾವುದೇ ಘಟಕಗಳಿಗೆ ಎರವಲು (ಸಾಲ) ಅಥವಾ ಸಾಲಕ್ಕೆ ಜಾಮೀನು ನೀಡುವ ಅಧಿಕಾರವನ್ನು ಒಕ್ಕೂಟದ ಸರ್ಕಾರವು ಹೊಂದಿರುತ್ತದೆ."

ಖಂಡ ೫ನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈ ಭಾಗಕ್ಕೆ ತಿದ್ದುಪಡಿಯ ಸೂಚನೆ ಸೇರ್ಪಡೆಯ ಮೂಲಕ ನನಗೆ ಬಂದಿದೆ.

**ಶ್ರೀ ಬಿ. ದಾಸ್** : ನಾನು ಇದನ್ನು ಮಂಡಿಸುತ್ತಿಲ್ಲ.

**ಶ್ರೀ ಟಿ. ಟಿ. ಕೃಷ್ಣಮಾಚಾರಿ** (ಮದ್ರಾಸ್ : ಸಾಮಾನ್ಯ) : ನಾನು ೭ಎ ಯನ್ನು ಮಂಡಿಸುತ್ತಿಲ್ಲ; ಆದರೆ, ೭ಬಿ ಯನ್ನು ಮಂಡಿಸುತ್ತಿದ್ದೇನೆ ಮತ್ತು ಆದ್ದರಿಂದ ೭ಬಿ ಯನ್ನು ೭ಎ ಎಂದು ಬದಲಿಸಬೇಕೆಂದು ಬಯಸುತ್ತೇನೆ. ಮಾನ್ಯರೇ, ನಾನು ಮಂಡಿಸುತ್ತೇನೆ :

"ಭಾಗ ೭ಎ. ವ್ಯಾಪಾರ ಹಾಗೂ ವಾಣಿಜ್ಯಕ್ಕೆ ಸಂಬಂಧಪಟ್ಟಂತೆ ಸಂವಿಧಾನದ ಉಪಬಂಧಗಳ ಜಾರಿಗೆ ಹಾಗೂ ನಿರ್ವಹಣೆಗೆ ಸೂಚಿಸಲಾಗಿರುವ ರೀತಿಯಲ್ಲಿಯೇ ನಿರ್ಣಯ ತೆಗೆದುಕೊಳ್ಳುವ ಹಾಗೂ ಆಡಳಿತ ನಿರ್ವಹಣೆಯ ಅಧಿಕಾರವನ್ನು ಹೊಂದಿರುವ, ಒಕ್ಕೂಟದ ಕಾನೂನು ನಿರ್ದೇಶಿಸುವ ಮಾದರಿಯಲ್ಲಿ ಮತ್ತು ಸಾಮಾನ್ಯವಾಗಿ ಇಂತಹುದೇ ವಿಷಯಗಳಲ್ಲಿ ರಾಷ್ಟ್ರಪತಿಯವರು ಸಮಯಾನುಸಾರ ಸೂಚಿಸುವ ರೀತಿಯಲ್ಲಿ ನಿರ್ಣಯ ತೆಗೆದುಕೊಳ್ಳುವುದಕ್ಕಾಗಿ ಅಂತರರಾಜ್ಯ ಆಯೋಗದ ರಚನೆಯಾಗಬೇಕು."

ನಾನು ಈ ತಿದ್ದುಪಡಿಯನ್ನು ಮಂಡಿಸುವ ಉದ್ದೇಶವೇನೆಂದರೆ, "ಈ ಸಂವಿಧಾನಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ವ್ಯಾಪಾರ ಹಾಗೂ ವಾಣಿಜ್ಯದ ನಿಯಂತ್ರಣದ ವಿಷಯದಲ್ಲಿ ಇದುವರೆಗೆ ನಾವು ಸಾಗಿಬಂದ ಹಾದಿಯಲ್ಲಿ ದಾಖಲಾದ ಒಂದೇ ಒಂದು ಉಲ್ಲೇಖವೆಂದರೆ, ನಾವು ಈ ಹಿಂದಿನ ಅಧಿವೇಶನದಲ್ಲಿ ಅಂಗೀಕರಿಸಿದ ಮೂಲಭೂತ ಹಕ್ಕುಗಳಲ್ಲಿನ ಖಂಡ ೧೦ ಮಾತ್ರ. ಖಂಡ ೧೦ ಹೇಳುತ್ತದೆ :

"ಕೇಂದ್ರ ವ್ಯಾಪಾರ ಹಾಗೂ ವಾಣಿಜ್ಯ ಕಾನೂನಿನ ನಿಬಂಧನೆಗಳಿಗೆ ಅನುಸಾರವಾಗಿ, ಘಟಕ ಮತ್ತು ಪ್ರಜೆಗಳ ನಡುವಿನ ಪರಸ್ಪರ ವ್ಯವಹಾರವು ಮುಕ್ತವಾಗಿರಬೇಕು."

ಕೇಂದ್ರ ಅಧಿಕಾರಗಳ ಸಮಿತಿಯು ಸಲ್ಲಿಸಿದ ವರದಿಯಲ್ಲಿ ನಾನು ಗಮನಿಸಿದ್ದೇನೆಂದರೆ, ಹೊರದೇಶಗಳೊಂದಿಗಿನ ವ್ಯಾಪಾರ ಹಾಗೂ ವಾಣಿಜ್ಯ ವಿಷಯವನ್ನು, ಒಕ್ಕೂಟದ ಪಟ್ಟಿಯ, ಪಟ್ಟಿ ಸಂಖ್ಯೆ ೧ರ ಸಂಖ್ಯೆ ೧೭ ಒಳಗೊಂಡಿದೆ ಮತ್ತು ಪ್ರಾಂತ್ಯಗಳೊಂದಿಗಿನ ವ್ಯಾಪಾರ ಹಾಗೂ ವಾಣಿಜ್ಯ ವಿಷಯವನ್ನು, ಪ್ರಾಂತೀಯ ಪಟ್ಟಿಯ, ಪಟ್ಟಿ ಸಂಖ್ಯೆ ೨ರ ಸಂಖ್ಯೆ ೨೬ ಒಳಗೊಂಡಿದೆ. ವಾಸ್ತವವಾಗಿ, ಈ ಎರಡು ವಿಷಯಗಳು ಭಾರತ ಸರ್ಕಾರ ಅಧಿನಿಯಮ ೧೯೩೫ರಲ್ಲಿನ ಅದೇ ರೀತಿಯ, ಅಂದರೆ, ಅನುಸೂಚಿ ೭, ಪಟ್ಟಿ ೧ರ ವಿಷಯ ೧೯ ಮತ್ತು ಅದೇ ಅನುಸೂಚಿಯ ಪಟ್ಟಿ ೨ರ ವಿಷಯ ೨೩ನ್ನು ಬಹಳ ನಿಕಟವಾಗಿ ಅನುಕರಿಸುತ್ತದೆ. ಈ ಎರಡು ಸಂಗತಿಗಳಲ್ಲಿನ ಶಬ್ದಪ್ರಯೋಗದಲ್ಲಿ ಸ್ವಲ್ಪ ವ್ಯತ್ಯಾಸಮಾಡಲಾಗಿದೆ; ಆದರೆ, ವಸ್ತು ತಾತ್ಪರ್ಯ (ಅಡಕ) ಬಹುತೇಕ ಒಂದೇ ಆಗಿದೆ. ಹಾಗೆಯೇ, ಇದಕ್ಕೆ ಸಂಬಂಧಿಸಿದಂತೆ ಸಂವಿಧಾನಕ್ಕಾಗಿನ ಹೊಸ ಪ್ರಸ್ತಾವದಲ್ಲಿ ನಾನೊಂದು ಲೋಪವನ್ನು ಕಂಡಿದ್ದೇನೆ. ನಾನು ಕಂಡುಕೊಂಡಿದ್ದೇನೆಂದರೆ, ಭಾರತ ಸರ್ಕಾರ ಅಧಿನಿಯಮದ ಪ್ರಕರಣ ೨೯೭, ಅಂತರಪ್ರಾಂತ್ಯ ವ್ಯಾಪಾರದಲ್ಲಿ ಯಾವುದೇ ಉಪಕರಣದ ಮೇಲೆ ಶಾಸನಾತ್ಮಕವಾಗಿ ನಿರ್ದಿಷ್ಟ ನಿರ್ಬಂಧ ವಿಧಿಸಿ ವಹಿವಾಟು ಸ್ವಾತಂತ್ರ್ಯದ ಮೇಲೆ ನಿಷೇಧ ವಿಧಿಸುತ್ತದೆ; ಇದಕ್ಕೆ ಪ್ರತಿಯಾಗಿ ಈ ಸಂವಿಧಾನವು ಯಾವುದೇ ಖಂಡ ಸ್ವರೂಪವನ್ನು ಹೊಂದಿಲ್ಲ. ಭಾರತ ಸರ್ಕಾರ ೧೯೩೫ರ ಅಧಿನಿಯಮದಲ್ಲಿನ ಈ ನಿರ್ದಿಷ್ಟ ಪ್ರಕರಣ ಕುರಿತು ಈ ಸದನದ ಸದಸ್ಯರು ಸಂಪೂರ್ಣವಾಗಿ ಅರಿತಿದ್ದಾರೆ ಎಂಬುದರಲ್ಲಿ ನನಗೆ ಯಾವುದೇ ಅನುಮಾನವಿಲ್ಲ ಮತ್ತು ಆ ತೊಡರುವಿಕೆಯು ಇದರೊಂದಿಗೇ ಸಾಗುತ್ತದೆ. ಆದ್ದರಿಂದ, ಈ ಸಂವಿಧಾನದಲ್ಲಿ ಇದಕ್ಕೆ ಅನುಗುಣವಾದ ಉಲ್ಲೇಖ ಇಲ್ಲದಿರುವುದರ ಬಗ್ಗೆ ನಾನು ಹೆಚ್ಚು ಕಡಿಮೆ ಆಶ್ಚರ್ಯಗೊಂಡಿದ್ದೇನೆ. ಇಂತಹ ವಿಷಯದಲ್ಲಿ ಜಗತ್ತಿನ ಇತರ ಒಕ್ಕೂಟದ ಸಂವಿಧಾನಗಳು ವ್ಯವಹರಿಸುವ ರೀತಿಯಿಂದ ನಮ್ಮ ಈ ಒಕ್ಕೂಟದ ಸಂವಿಧಾನದ ರಚನೆಕಾರರು ಮಾರ್ಗದರ್ಶನ ಪಡೆದಿರುವುದು ಹೊರನೋಟಕ್ಕೆ ಸ್ಪಷ್ಟ.

ಮಾನ್ಯರೆ, ಅಮೆರಿಕಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅಲ್ಲಿನ ಪರಿಸ್ಥಿತಿ ಹೇಗಿದೆಯೆಂದರೆ, ಸಂವಿಧಾನದ ೮ನೇ ಪ್ರಕರಣದ ಅನುಚ್ಛೇದ ೧ರಲ್ಲಿ, ಹೊರರಾಷ್ಟ್ರಗಳು ಮತ್ತು ಪ್ರಸ್ತುತ ಭಾರೀ ಪ್ರಮಾಣದಲ್ಲಿ ನ್ಯಾಯಾಂಗ ನಿರ್ಧಾರಗಳ ಕೊನೆಯ ಆಧಾರವಾಗಿ ಬದಲಾಗಿರುವ ಅನೇಕ ರಾಜ್ಯ(ರಾಷ್ಟ್ರ)ಗಳ ನಡುವೆ ವಾಣಿಜ್ಯವನ್ನು ನಿರ್ಬಂಧಿಸುವ ಸಂಸತ್ತಿ(ಕಾಂಗ್ರೆಸ್)ನ ಅಧಿಕಾರದ ಬಗ್ಗೆ ಉಲ್ಲೇಖವಿದೆ. ಅದರ ಪರಿಣಾಮವಾಗಿ ವಿವಿಧ ಪ್ರಕಾರದ ವಾಣಿಜ್ಯ ಚಟುವಟಿಕೆಗಳನ್ನು ನಿಯಂತ್ರಿಸಲು ಅಮೆರಿಕದ ಸಾಮ್ರಾಜ್ಯದ ವ್ಯಾಪ್ತಿಯಲ್ಲಿಯೇ ಅಪಾರ ಸಂಖ್ಯೆಯ ಆಡಳಿತಾತ್ಮಕ ಸಂಸ್ಥೆಗಳು ಸ್ಥಾಪನೆಗೊಂಡವು. ಒಂದು ರಾಜ್ಯ ಒಕ್ಕೂಟ, ನಮಗೋಸ್ಕರ ನಾವು ಯೋಚಿಸಿರುವಂತೆ, ಇಂತಹ ಪ್ರಮುಖ ವಿಷಯಗಳನ್ನು ಅಮೆರಿಕದ ಸಂವಿಧಾನದಂತೆ ಅನಿಶ್ಚಿತವಾಗಿ ಬಿಡುತ್ತದೆಂದು ನಾನು ಭಾವಿಸುವುದಿಲ್ಲ; ಇದಕ್ಕೆ ಕಾರಣವೇನೆಂದರೆ, ಅಮೆರಿಕದ ಸಂವಿಧಾನವು ಅಧ್ಯಕ್ಷೀಯ ಮಾದರಿಯದಾಗಿದ್ದು, ಅಲ್ಲಿ ಉಪಕ್ರಮಿಸುವಿಕೆಯು ಏಕವ್ಯಕ್ತಿ, ಅಂದರೆ ಅಧ್ಯಕ್ಷರ ಕೈಯಲ್ಲಿದೆ; ನಮ್ಮದು ಸಂಸತ್ತಿನ ಮಾದರಿಯದಾಗಿದ್ದು ಇಲ್ಲಿ ಉಪಕ್ರಮಿಸುವಿಕೆಯು ಯಾವುದೇ ಒಬ್ಬ ವ್ಯಕ್ತಿಯ ಕೈಯಲ್ಲಿಲ್ಲ. ಈ ವಿಷಯದಲ್ಲಿ ನಾವು ನಿಜವಾಗಿ ನೋಡಬೇಕಾಗಿರುವುದು ಕೆನಡಾ ಮತ್ತು ಆಸ್ಟ್ರೇಲಿಯಾದಂತಹ ಇತರ ಒಕ್ಕೂಟ ಸಂವಿಧಾನಗಳ ಉದಾಹರಣೆಯನ್ನು.

ಕೆನಡಾಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ವ್ಯಾಪಾರ ಮತ್ತು ವಾಣಿಜ್ಯದ ನಿಯಂತ್ರಣದ ಬಗ್ಗೆ, ಆ ದೇಶದ ಸಂವಿಧಾನದ ಸಂಗತಿ ೨ರ ಪ್ರಕರಣ ೯೧ರಲ್ಲಿನ ಅಧಿಕಾರ ಹಂಚಿಕೆಯಲ್ಲಿ ಸ್ಪಷ್ಟವಾಗಿ ಸೂಚಿತವಾಗಿದೆ. ಆದ್ದರಿಂದ ಅದು ನಾವು ಇಂದು ನೀಡಿರುವ ಸ್ಥಾನಕ್ಕೆ ಸಮನಾಂತರವಾದ ಯಾವುದನ್ನೂ ಪ್ರಸ್ತಾವಿಸುವುದಿಲ್ಲ. ಆಸ್ಟ್ರೇಲಿಯಾದ ಸಂವಿಧಾನವು, ವ್ಯಾಪಾರ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ, ನಮ್ಮ ಸಂವಿಧಾನಕ್ಕಾಗಿ ನಾವಿಂದು ಹಾಕಿರುವ ಗೆರೆಗಳನ್ನು ಹೆಚ್ಚು ಕಡಿಮೆ ಹೋಲುತ್ತದೆ. ಆಂತರಿಕ ವ್ಯಾಪಾರ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ ಆಸ್ಟ್ರೇಲಿಯಾದ ಸಂವಿಧಾನದ ಪ್ರಕರಣ ೫೧ರಲ್ಲಿ ಉಲ್ಲೇಖವಿದೆ. ಆದರೆ, ಅಮೆರಿಕದ ಅನುಭವದ ಮೂಲಕ ಕಲಿತುಕೊಂಡಿರುವಂತೆ ಕಾಣುವ ಅದು, ವ್ಯಾಪಾರ ಮತ್ತು ವಾಣಿಜ್ಯದ ನಿಯಂತ್ರಣದ ವಿಷಯಕ್ಕೆ ಸಂಬಂಧಿಸಿದಂತೆ, ಅವರ ಸಂವಿಧಾನಕ್ಕೆ ಇನ್ನೂ ಕೆಲವು ಪ್ರಕರಣಗಳನ್ನು ಸೇರಿಸಲಾಗಿದೆ. ಅವು ಪ್ರಕರಣ ಸಂಖ್ಯೆ ೧೦೧, ೧೦೨, ೧೦೩ ಮತ್ತು ೧೦೪ ಗಳಾಗಿದ್ದು, ನಾನು ಪ್ರಕರಣ ೧೦೧ನ್ನು ಉಲ್ಲೇಖಿಸುತ್ತಿದ್ದೇನೆ. ನನ್ನ ತಿದ್ದುಪಡಿಯು ಈ ಪ್ರಕರಣ ೧೦೧ರ ಅಕ್ಷರಶಃ ನಕಲಾಗಿದೆ. ಇದು, ವ್ಯಾಪಾರ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ ನಿರ್ಣಯ ಹಾಗೂ ಆಡಳಿತದ ಉದ್ದೇಶಕ್ಕಾಗಿ ಅಂತರರಾಜ್ಯ ಆಯೋಗವನ್ನು ನೇಮಿಸುವುದಕ್ಕೆ ಸಂವಿಧಾನದಲ್ಲಿ ಅವಕಾಶ ಕಲ್ಪಿಸುತ್ತದೆ.

ಮಾನ್ಯರೆ, ನನ್ನ ಈ ನಿರ್ದಿಷ್ಟ ತಿದ್ದುಪಡಿಯ ಶಬ್ದ ಪ್ರಯೋಗವು ಸಂಪೂರ್ಣ ಯುಕ್ತವಲ್ಲದಿರಬಹುದು. ವಾಸ್ತವವಾಗಿ, ಆಸ್ಟ್ರೇಲಿಯಾದ ಸಂವಿಧಾನದಲ್ಲಿನ ಈ ಪ್ರಕರಣದ ಶಬ್ದ ಪ್ರಯೋಗಕ್ಕಿಂತ ನಾನು ಸ್ವಲ್ಪ ಮುಂದಕ್ಕೆ ಹೋಗಿದ್ದು, ನಾನು ಈ ಶಬ್ದಗಳನ್ನು ಸೇರಿಸಿದ್ದೇನೆ : "ಮತ್ತು ಸಾಮಾನ್ಯವಾಗಿ ರಾಷ್ಟ್ರಪತಿಯವರಿಂದ ಕಾಲಕಾಲಕ್ಕೆ ನಿರ್ದೇಶಿಸಲ್ಪಡುವ ಸಮಾನ ರೂಪದ ವಿಷಯಗಳನ್ನು ನಿರ್ಣಯಿಸುವಾಗ..." ಹೀಗೆ ಮಾಡುವುದಕ್ಕೆ ನನ್ನ ಕಾರಣವೇನೆಂದರೆ, ಭಾರತ ಸರ್ಕಾರ ಅಧಿನಿಯಮದ ಪ್ರಕರಣ ೧೩೫ರಲ್ಲಿ, ಇಂತಹ ವಿಷಯಗಳನ್ನು ಕೂಲಂಕಷವಾಗಿ ವಿಚಾರ ಮಾಡಬಹುದು ಮತ್ತು ಸಂವಿಧಾನದಲ್ಲಿ ಘರ್ಷಣೆ, ತುಯ್ತ ಹಾಗೂ ಒತ್ತಡ ಇರಬಹುದು; ಘಟಕಗಳ ಪ್ರತಿನಿಧಿಗಳ ನಡುವೆ ಚರ್ಚೆಗೆ ಗ್ರಾಸವಾಗಬಹುದು; ಅಂತಹ ಸಂದರ್ಭದಲ್ಲಿ ಪ್ರಾಂತೀಯ ಸಮಿತಿಗಳನ್ನು ರಚಿಸುವುದಕ್ಕೆ ಗವರ್ನರ್ ಜನರಲ್ ಅವರಿಗೆ ಅವಕಾಶ ಮಾಡಲಾಗಿದೆ. ಇದಕ್ಕೆ ಅನುರೂಪವಾದ ಇಂತಹ ಯಾವುದೇ ಸಂಸ್ಥೆಗೆ ನಾವು ಈಗ ಚರ್ಚಿಸುತ್ತಿರುವ ಸಂವಿಧಾನದಲ್ಲಿ ಅವಕಾಶ ನೀಡಿರುವುದನ್ನು ನಾವು ಕಾಣುವುದಿಲ್ಲ. ಆದ್ದರಿಂದ, ಆಸ್ಟ್ರೇಲಿಯಾದ ಅಧಿನಿಯಮದ ಪ್ರಕರಣ ೧೦೧ ಕ್ಕಿಂತಲೂ ನನ್ನ ತಿದ್ದುಪಡಿಗಿರುವ ಅವಕಾಶವು ಹೆಚ್ಚು ವಿಶಾಲವಾಗಿದೆ ಎಂದು ನಾನು ಭಾವಿಸುತ್ತೇನೆ ಮತ್ತು ಈ ಅಂತರರಾಜ್ಯ ಆಯೋಗಕ್ಕೆ ಇತರ ವಿಷಯಗಳನ್ನೂ ಕೂಡ ಸೂಚಿಸುವುದಕ್ಕೆ ಅವಕಾಶವು ರಾಷ್ಟ್ರಪತಿಯವರಿಗೆ ಮುಕ್ತವಾಗಿರಬೇಕು.

ಮಾನ್ಯರೆ, ಇಂತಹ ಅತಿ ಧೈರ್ಯದ ಸೂಚನೆಗಳು ಯಾರಿಗೇ ಆಗಲಿ, ತುಂಬ ಸಹಾಯವನ್ನೇನೂ ಮಾಡಲಾರವು ಎಂದು ಕೆಲವರು ಹೇಳಬಹುದು. ಅಂತರರಾಜ್ಯ ಆಯೋಗದ ಸ್ಥಾನ ಯಾವುದಾಗಿರಬೇಕು ಎಂಬುದನ್ನು ದಾಖಲಿಸುವ ಜವಾಬ್ದಾರಿಯನ್ನು ನಾನು ಒಕ್ಕೂಟದ ಕಾನೂನಿಗೆ ಬಿಟ್ಟುಬಿಡುತ್ತೇನೆ. ಆಸ್ಟ್ರೇಲಿಯನ್ ಅಧಿನಿಯಮದ ಸಮಾನಾಂತರ ಪ್ರಕರಣ ಸಂಖ್ಯೆ ೧೦೩ನ್ನು ನಾನು ನಕಲು ಮಾಡಿಲ್ಲ ಮತ್ತು ಸದಸ್ಯರು ಇಂತಿಷ್ಟೇ ಸಂಖ್ಯೆಯಲ್ಲಿ ಇರಬೇಕೆಂಬುದಕ್ಕೆ ಅವಕಾಶ ಕಲ್ಪಿಸಲಾಗಿಲ್ಲ; ಅಂದರೆ, ಅವರು ಇಂತಹುದೇ ಯೋಗ್ಯತೆ ಹೊಂದಿರಬೇಕು ಮತ್ತು ಇತ್ಯಾದಿ. ಇವು ಬಹಳ ಸಮಯದ ಅನಂತರ ಅಂದರೆ ಸಂವಿಧಾನವು ಕಾರ್ಯರೂಪದಲ್ಲಿದ್ದಾಗ ಪರಿಗಣಿಸಬೇಕಾದ ವಿಷಯಗಳು ಮತ್ತು ಈ ಉದ್ದೇಶಕ್ಕಾಗಿ ಒಕ್ಕೂಟದ ನಿಯಮವನ್ನು ಕಾನೂನುಗೊಳಿಸಬೇಕಿದೆ. ನಾನು ಬಯಸುವುದೇನೆಂದರೆ, ಈ ಅಂತರರಾಜ್ಯ ಆಯೋಗದ ಅಧಿಕಾರವನ್ನು ವಿಸ್ತರಿಸುವ ಸಲುವಾಗಿ ಅವಕಾಶಗಳನ್ನು ನೀಡಬೇಕು. ವ್ಯಾಪಾರ ಹಾಗೂ ವಾಣಿಜ್ಯಕ್ಕೆ ಸಂಬಂಧಿಸಿದ ಹಾಗೂ ಇತರ ಸಾಂದರ್ಭಿಕ ವಿಷಯಗಳನ್ನು ಮಾತ್ರ ಈ ಆಯೋಗಕ್ಕೆ ಒಪ್ಪಿಸಬೇಕೇ ಅಥವಾ ಘಟಕಗಳು ಸಾಧಿಸಿದ,

ನಡೆಸಿದ ಆರ್ಥಿಕ ಚಟುವಟಿಕೆಗಳಲ್ಲಿನ ಕೆಲವು ಸಹಕಾರ ವಿಷಯಗಳನ್ನು ಮತ್ತು ಅಂತಹ ಘರ್ಷಣೆಗಳನ್ನು ಶಾಂತಗೊಳಿಸುವ ವಿಷಯಗಳನ್ನೂ ಸಹ ಈ ಆಯೋಗಕ್ಕೆ ಒಪ್ಪಿಸಬೇಕೇ ಎಂಬುದನ್ನು ಸಂವಿಧಾನದ ಕರಡು ರಚನೆಕಾರರಿಗೆ ಬಿಡಬಹುದು ಮತ್ತು ಇದಕ್ಕೆ ಸಂಬಂಧಿಸಿದ ಒಕ್ಕೂಟದ ಕಾನೂನನ್ನು ಅನಂತರದಲ್ಲಿ ಜಾರಿಗೊಳಿಸಬಹುದು. ಮಾನ್ಯರೆ, ಮಂಡನೆಕಾರರಿಂದ ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದು ಸಾಧ್ಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ. (ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ : ನೀವು ಮಂಡನೆಕಾರರು). ನಾನು ಹೇಳುತ್ತಿರುವುದು, ಸಂವಿಧಾನ ಸಮಿತಿಗಳ ಪ್ರಸ್ತಾವಗಳ ವರದಿಯ ಮಂಡನೆಕಾರರು. ಅಂತಿಮವಾಗಿ ಕರಡು ಮಸೂದೆಯ ರೂಪದಲ್ಲಿ ನಮ್ಮ ಮುಂದೆ ಬರುವುದಕ್ಕೆ ಮುನ್ನ ನನ್ನ ತಿದ್ದುಪಡಿಯಲ್ಲಿನ ಶಬ್ದಪ್ರಯೋಗಕ್ಕೆ ಸಂಬಂಧಪಟ್ಟಂತೆ ಕರಡಿನ ದಸ್ತಾವೇಜು ಲೇಖಕರು ಯಾವುದೇ ಬದಲಾವಣೆ ಮಾಡುವುದಕ್ಕೆ ನನ್ನ ಒಪ್ಪಿಗೆಯಿದೆ; ನನ್ನ ತಿದ್ದುಪಡಿಯನ್ನು ಸದನದ ಅಂಗೀಕಾರಕ್ಕಾಗಿ ಶಿಫಾರಸು ಮಾಡುತ್ತೇನೆ. ಮಾನ್ಯರೆ, ನಾನು ಮಂಡಿಸುತ್ತೇನೆ.

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನನ್ನ ಸ್ನೇಹಿತ ಶ್ರೀ ಟಿ. ಟಿ. ಕೃಷ್ಣಮಾಚಾರಿ ಅವರು ಮಂಡಿಸಿದ ತಿದ್ದುಪಡಿಯನ್ನು ಬೆಂಬಲಿಸುವಂತೆ ನಾನು ಪ್ರಾರ್ಥಿಸುತ್ತೇನೆ. ಎಲ್ಲ ಒಕ್ಕೂಟದ ಸಂವಿಧಾನಗಳಲ್ಲಿ, ಒಗ್ಗಟ್ಟಿನ ಆವಶ್ಯಕತೆ ಮತ್ತು ಸ್ಥಾನೀಯ ಸ್ವಾಯತ್ತತೆಯ ಆವಶ್ಯಕತೆಯ ನಡುವೆ ಸದಾ ಘರ್ಷಣೆಯಿದೆ. ಇನ್ನು ಕೆಲವು ಅಂಶಗಳಲ್ಲಿ ಮೈತ್ರೀಕರಣವನ್ನು ಒಕ್ಕೂಟದ ಶಾಸನ ಮತ್ತು ಆಡಳಿತದ ಮೂಲಕ ಸಾಧಿಸಬೇಕಿದೆ. ಆದರೆ, ಈ ಪದ್ಧತಿಯು ಅನೇಕ ವಿಷಯಗಳ ಪ್ರಕರಣಗಳಲ್ಲಿ ದೊರಕುವುದಿಲ್ಲ ಮತ್ತು ಆದ್ದರಿಂದ, ನಿರ್ದಿಷ್ಟ ಅಸಂಘೀಯ (ನಾನ್ ಫೆಡರಲ್) ಸಂಸ್ಥೆಗಳು ಸ್ಥಾಪನೆಯಾಗಬೇಕಿದೆ. ಶ್ರೀ ಟಿ.ಟಿ. ಕೃಷ್ಣಮಾಚಾರಿಯವರ ತಿದ್ದುಪಡಿಯ ನೈಜ ವ್ಯಾಪ್ತಿಯು ಸುಮಾರು ಕಿರಿದಾಗಿದೆ. ಸಮಯ ಬಂದಾಗ ಇದನ್ನು ವಿಸ್ತರಿಸುವುದು ಸಾಧ್ಯವಾಗಬಹುದು ಎಂದು ನಾನು ನಿರೀಕ್ಷಿಸುತ್ತೇನೆ. ನಾವು ವಿಸ್ತರಿಸಬೇಕಿರುವುದು ಈ ಆಯೋಗವನ್ನಷ್ಟೇ ಅಲ್ಲ, ಘಟಕಗಳ ನಡುವೆ ಸ್ವಪ್ರೇರಿತ ಸಹಕಾರಗಳಿಗಾಗಿ ಅನೇಕ ಆಯೋಗಗಳನ್ನು ವಿಸ್ತರಿಸಬೇಕಿದೆ. ಉದಾಹರಣೆಗೆ: ನಾವು ಮಾರಾಟ ತೆರಿಗೆಯನ್ನು ತೆಗೆದುಕೊಳ್ಳೋಣ. ಇದು ಪ್ರಾಂತೀಯ ತೆರಿಗೆ. ಮುಂಬರುವ ವರ್ಷಗಳಲ್ಲಿ ಈ ತೆರಿಗೆಯು ಘಟಕಗಳಿಗೆ ಅತ್ಯಂತ ಪ್ರಮುಖವಾದ ಆದಾಯ ಮೂಲವಾಗುತ್ತದೆಂದು ನಾನು ನಿರೀಕ್ಷಿಸುತ್ತೇನೆ. ಆದರೆ, ಘಟಕಗಳು ಸ್ವಪ್ರೇರಣೆಯಿಂದ ಪರಸ್ಪರ ಸಹಕರಿಸುವವರೆಗೆ ಮತ್ತು ಏಕರೂಪ ತೆರಿಗೆ ಪದ್ಧತಿಯನ್ನು ವಿಸ್ತರಿಸದಿದ್ದರೆ, ಭಾರೀ ಪ್ರಮಾಣದಲ್ಲಿ ಉದ್ದಿಮೆಗಳು ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ವರ್ಗಾವಣೆ (ಸ್ಥಾನಪಲ್ಲಟ)ಯಾಗಬಹುದು ಮತ್ತು ಅದು ಘಟಕಗಳ ಸಾಮಾನ್ಯ ಅಭಿವೃದ್ಧಿಗೆ ಮಾರಕವಾಗಬಹುದು. ಇಂತಹ ನಿರ್ದಿಷ್ಟ ಆಕಸ್ಮಿಕ ಪ್ರಸಂಗಗಳಲ್ಲಿ, ಘಟಕಗಳು ಇದರ ಸಂಗ್ರಹ ಹಾಗೂ ಹಂಚುವಿಕೆಯನ್ನು ಒಕ್ಕೂಟಕ್ಕೆ ಬಿಟ್ಟುಕೊಡಬೇಕಾದ ಅನಿವಾರ್ಯತೆಗೆ ತಳ್ಳಲ್ಪಡಬಹುದು. ಉತ್ತಮವಾದುದು ಏನೆಂದರೆ, ಕಾರ್ಯಚಟುವಟಿಕೆಯಲ್ಲಿ ಪ್ರಯೋಗಮಾಡುವುದು. ಘಟಕಗಳು ಪರಸ್ಪರ ಸಹಕರಿಸಬೇಕು, ಇಂತಹ ಸಹಕಾರಕ್ಕೆ ವ್ಯವಸ್ಥೆಯನ್ನು ಹುಟ್ಟುಹಾಕಬೇಕು ಮತ್ತು ಪರಸ್ಪರ ಸಂಪೂರ್ಣ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದಕ್ಕಾಗಿ ಮತ್ತು ಸ್ಥಳೀಯ ಏರುಪೇರಿಗೆ ನಿರ್ದಿಷ್ಟ ಮಾನದಂಡ ಹಾಗೂ ಪದ್ಧತಿಯನ್ನು ಹುಟ್ಟುಹಾಕಬೇಕು. ಇದು ಸ್ವಯಂಪ್ರೇರಿತ ಅಂತರಪ್ರಾಂತ್ಯ ಸಹಕಾರಕ್ಕೆ ಉದಾಹರಣೆಯಾಗಿದೆ; ಹಾಗಾಗಿ ನಾನು ಈ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಇದು ಸಂವಿಧಾನದ ಅಂಗವಾಗಿ ಕಾಯಿದೆ ಪುಸ್ತಕದಲ್ಲಿ ಇರಲಿರುವುದರಿಂದ, ಇದು ಒಂದು ರೀತಿಯಲ್ಲಿ ಘಟಕಗಳು ಇತರ ವಲಯಗಳನ್ನು ಸೇರಿಕೊಳ್ಳುವುದಕ್ಕೆ ಒಂದು ನಿದರ್ಶನವನ್ನು ರೂಪಿಸುತ್ತದೆ. ವಿಶೇಷವಾಗಿ ನೀರಾವರಿ, ಕೃಷಿ ಮುಂತಾದ ವಿಷಯಗಳಲ್ಲಿ, ಇಂತಹ ಆಯೋಗಗಳು ತುಂಬ ಉಪಯುಕ್ತವಾಗಲಿವೆ. ಆದ್ದರಿಂದ ಈ ವಿಷಯವು ವಿಶೇಷ ಸಮಿತಿಗೆ ಹೋಗಬೇಕು ಮತ್ತು ಇದರ ವ್ಯಾಪ್ತಿಯು ಸಂಶೋಧನೆಗೊಳಪಟ್ಟು ಕರಡು ಸಂವಿಧಾನದಲ್ಲಿ ಸೇರ್ಪಡೆಯಾಗಬೇಕೆಂದು ನಾನು ಸಲಹೆ ಮಾಡುತ್ತೇನೆ.

ಈ ಆಯೋಗಗಳು ಹೇಗೆ ರಚನೆಯಾಗಬೇಕು, ಅವು ಶಾಸಕರಿಂದ ಚುನಾಯಿಸಲ್ಪಡಬೇಕೇ ಅಥವಾ ಘಟಕಗಳಿಂದ ನಾಮಕರಣಗೊಳ್ಳಬೇಕೇ, ಈ ಎಲ್ಲ ವಿಷಯಗಳಿಗೆ ಎಚ್ಚರಿಕೆಯಿಂದ ಕೂಡಿದ ಪರಿಶೀಲನೆಯ ಅಗತ್ಯವಿದೆ ಮತ್ತು ಈ ಯೋಜನೆಯು ಪ್ರಾಂತೀಯ ಸರ್ಕಾರಗಳ ನಡುವೆ ಹರಿದಾಡುವುದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಇದಾದ ಅನಂತರವಷ್ಟೇ ಸಂವಿಧಾನದ ಅಂತಿಮ ಕರಡಿನಲ್ಲಿ ಸೇರ್ಪಡೆಯಾಗುವುದಕ್ಕೆ ಸಮಾಲೋಚಿಸಲಾಗುವುದು ಎಂದು ನಾನು ಭಾವಿಸುತ್ತೇನೆ.

**ಶ್ರೀ ಆರ್. ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಇದು ತುಂಬ ಉತ್ತಮ ಸ್ವರೂಪವನ್ನು ಹೊಂದಿರುವುದರಿಂದ ಈ ಪ್ರಸ್ತಾವವನ್ನು ನಾನು ಸ್ವಾಗತಿಸುತ್ತೇನೆ; ಆದರೆ, ಇದರ ಶಬ್ದ ಪ್ರಯೋಗವು ತುಂಬ ಕಿರಿದಾಗಿದೆ ಎಂದು ನಾನು ಭಾವಿಸುತ್ತೇನೆ. ಇಂತಹ ಅಂತರರಾಜ್ಯ ಆಯೋಗವು, ವ್ಯಾಪಾರ ಹಾಗೂ ವಾಣಿಜ್ಯಕ್ಕಷ್ಟೇ ಅಲ್ಲ, ದೇಶದ ಆರ್ಥಿಕ ಸ್ಥಿತಿಗತಿಯನ್ನು ಸಂಶೋಧಿಸುವುದಕ್ಕೂ ಸಹ ಅಗತ್ಯ; ಹಾಗಾಗಿ, ಇದರಲ್ಲಿ 'ಅರ್ಥಶಾಸ್ತ್ರ' ಶಬ್ದವೂ ಸಹ ಸೇರ್ಪಡೆಯಾಗಬೇಕೆಂದು ನಾನು ಸಲಹೆ ಮಾಡುತ್ತೇನೆ. ಹಣದ ಪ್ರಶ್ನೆ ಅಥವಾ ವಿಷಯವು ಭವಿಷ್ಯತ್ತಿನ ಸಂವಿಧಾನದಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಲಿದೆ ಮತ್ತು ಕೆಲವೇ ನಿಮಿಷಗಳ ಹಿಂದೆ ಇನ್ನೊಂದು ಖಂಡಕ್ಕೆ ಸಂಬಂಧಪಟ್ಟಂತೆ ಮಾತನಾಡುವಾಗ ಶ್ರೀ ಬಿ. ದಾಸ್ ಅವರು ಹೇಳಿದಂತೆ, ರಾಷ್ಟ್ರ ನಿರ್ಮಾಣದ ಕಾರ್ಯಕ್ರಮಗಳಲ್ಲಿ ಒಕ್ಕೂಟದ ಸರ್ಕಾರಗಳಿಂದ ಪ್ರಾಂತ್ಯಗಳಿಗೆ ಸಹಾಯಧನದ ರೂಪದಲ್ಲಿ ಉತ್ತಮ ಪ್ರಮಾಣದಲ್ಲಿ ಹಣದ ವ್ಯವಸ್ಥೆಯಾಗಬೇಕು ಮತ್ತು ಸಹಾಯಧನ ನೀಡುವ ಉದ್ದೇಶಕ್ಕೆ ನಾವು ಸಾಕಷ್ಟು ಹಣವನ್ನು ಹೊಂದಿರುವವರೆಗೂ ರಾಷ್ಟ್ರ ನಿರ್ಮಾಣದ ಕಾರ್ಯಕ್ರಮಗಳು ಪೂರ್ಣಗೊಳ್ಳುವುದಿಲ್ಲ. ಆದ್ದರಿಂದ, ಮಾನ್ಯರೆ, ನಮ್ಮ ನೆಚ್ಚಿಕೆಯ ಬಯಕೆಯೇನೆಂದರೆ, ಭಾರತವು ಸ್ವತಂತ್ರವಾಗಿರುವಾಗ, ರಾಷ್ಟ್ರ ನಿರ್ಮಾಣ ಕಾರ್ಯಕ್ರಮಗಳಿಗೆ ಹೊಸ ಉತ್ತೇಜನ ದೊರೆಯಬೇಕು ಮತ್ತು ವ್ಯಾಪಾರ ಹಾಗೂ ವಾಣಿಜ್ಯ ವಿಷಯಗಳಿಗೆ ಉದ್ದೇಶಿಸಿರುವ ಆಯೋಗದ ರೀತಿಯಲ್ಲಿಯೇ, ಆರ್ಥಿಕ ಆಯೋಗವನ್ನೂ ಸಹ ನಾವು ಹೊಂದಿಲ್ಲದಿದ್ದರೆ, ನಾನು ಖಚಿತವಾಗಿ ಹೇಳುತ್ತೇನೆ, ಮಾನ್ಯರೆ, ನಮ್ಮ ರಾಷ್ಟ್ರ ನಿರ್ಮಾಣದ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ನಾವು ಶಕ್ತರಾಗುವುದಿಲ್ಲ. ಇದು ಪ್ರಾಂತ್ಯ ಹಾಗೂ ಒಕ್ಕೂಟ ಎರಡಕ್ಕೂ ಗಣನೀಯ ಪ್ರಮಾಣದಲ್ಲಿ ಮಹತ್ತ್ವದ್ದಾಗಿದೆ. ವಿವಿಧ ಪ್ರಾಂತ್ಯಗಳಿಗೆ ನೀಡಬೇಕಾದ ಹಣದ ಪ್ರಶ್ನೆಯನ್ನು ಎತ್ತಿದ ಸಂದರ್ಭದಲ್ಲಿ, ಒಕ್ಕೂಟ ಸರ್ಕಾರ ಹೇಳುತ್ತದೆ, ತಾನೇ ಸ್ವತಃ ಹಣದ ಅಭಾವಕ್ಕೊಳಗಾಗಿದ್ದೇವೆ ಎಂದು. ಆದ್ದರಿಂದ, ಆರ್ಥಿಕ ಆಯೋಗವನ್ನು ರಚಿಸುವುದಕ್ಕೆ ಅಗತ್ಯವಾದ ಅವಕಾಶವನ್ನು ಸಂವಿಧಾನದಲ್ಲಿಯೇ ಅಳವಡಿಸಬೇಕು. ಅವು ರಾಷ್ಟ್ರ ನಿರ್ಮಾಣ ಯೋಜನೆಗಳಾದ ಸಾರ್ವಜನಿಕ ಆರೋಗ್ಯ, ಸಾಮಾಜಿಕ ಭದ್ರತೆ, ಸಾಮಾಜಿಕ ಸಹಕಾರ ಮುಂತಾದ ವಿಷಯಗಳಲ್ಲಿ ಮಾರ್ಗ ರೂಪಿಸುವುದಕ್ಕೆ ಮತ್ತು ಮುಂಗಡ ಹಣ ನೀಡುವಿಕೆಯ ವಿಧಾನ ಕಂಡುಹಿಡಿಯುವುದಕ್ಕೆ ಅವಕಾಶವನ್ನು ರೂಪಿಸಬೇಕು; ಈ ಎಲ್ಲ ವಿಷಯಗಳಿಗೆ ತುರ್ತು ಗಮನದ ಆವಶ್ಯಕತೆಯಿದೆ. ಒಂದು ವೇಳೆ ನಾವು ಇವುಗಳಿಗೆ ತುರ್ತು ಗಮನ ನೀಡದಿದ್ದರೆ, ನಾನು ನಿಮಗೆ ಖಚಿತವಾಗಿ ಹೇಳುತ್ತೇನೆ, ಮಾನ್ಯರೆ, ನಾವು ಯಾವುದೇ ರೀತಿಯ ಸಂವಿಧಾನವನ್ನು ರಚಿಸಿದರೂ ಕೂಡ ಜನರು ತೃಪ್ತಿಪಡುವುದಿಲ್ಲ. ನಾವು ಸಮಾಜವಾದಿ ಪದ್ಧತಿಗೆ ಬದ್ಧರಾಗಿದ್ದೇವೆ ಎಂಬುದನ್ನು ನಮ್ಮ ವಾಸ್ತವವಾದ ಠರಾವಿನಲ್ಲಿ ನಾವು ಅತ್ಯಂತ ಸ್ಪಷ್ಟಪಡಿಸಿದ್ದೇವೆ. ಮಾನ್ಯರೆ, ಇದು ಸ್ವಾಗತಾರ್ಹ ಸಲಹೆ; ಆದರೆ, ಈ ಖಂಡದ ಶಬ್ದ ಪ್ರಯೋಗದಲ್ಲಿ 'ಅರ್ಥಶಾಸ್ತ್ರ' ಶಬ್ದವನ್ನೂ ಸಹ ಸೇರಿಸಿ ಎಂದು ನಾನು ಮಂಡನೆಕಾರರಲ್ಲಿ ಮನವಿ ಮಾಡುತ್ತೇನೆ. ನಾವು ಜನರ ಲಾಭಕ್ಕಾಗಿ ಒಂದಿಷ್ಟು ನಿಜವಾಗಿಯೂ ಹೊಸತನ್ನು, ಒಂದಿಷ್ಟು ನಿಜವಾಗಿಯೂ ದೊಡ್ಡದನ್ನು ಮಾಡಲು ಬಯಸುತ್ತಿದ್ದೇವೆ ಮತ್ತು ಆ ಉದ್ದೇಶದ ಈಡೇರಿಕೆಗಾಗಿ ನಾವು ಆರ್ಥಿಕ ಆಯೋಗವನ್ನು ಹೊಂದಿರುವುದು ಅತ್ಯಂತ ಆವಶ್ಯಕವಾಗಿದೆ. ಆದ್ದರಿಂದ ಈ ತಿದ್ದುಪಡಿಯನ್ನು ಬೆಂಬಲಿಸುವ ಸಂದರ್ಭದಲ್ಲಿ ನಾನು 'ಆರ್ಥಿಕ' ಶಬ್ದವನ್ನೂ ಸಹ ಸೇರಿಸಿ ಎಂದು ಮನವಿ ಮಾಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಇತರ ಯಾರಾದರೂ ಮಾತನಾಡಲು ಬಯಸುತ್ತೀರಾ?

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೇ, ನಾನು ಈ ಠರಾವಿನ ಬಗ್ಗೆ ಹೆಚ್ಚಿಗೆ ಹೇಳಲು ಉದ್ದೇಶಿಸಿಲ್ಲ. ಇದರ ಮೂಲತತ್ತ್ವವು ದೃಢವಾಗಿದೆ. ಇದರ ಮಂಡನೆಕಾರರು ಈ ಸದನಕ್ಕೆ ಈಗಾಗಲೇ ಸವಿಸ್ತಾರವಾಗಿ ವಿವರಿಸಿದ ಉದ್ದೇಶಗಳಿಗಾಗಿ ಅಂತರರಾಜ್ಯ ಆಯೋಗವನ್ನು ರಚಿಸುವುದಕ್ಕೆ ಸಂವಿಧಾನದಲ್ಲಿ ಅವಕಾಶ ಕಲ್ಪಿಸಬೇಕು ಎಂದು ಇದು ಹೇಳುತ್ತದೆ. ನಾನು ಇಷ್ಟನ್ನು ಮಾತ್ರ ಹೇಳಬಯಸುತ್ತೇನೆ, ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವಾಗ, ಇದರಲ್ಲಿನ ವಾಸ್ತವ ಶಬ್ದಗಳಿಗೆ ಅಂಟಿಕೊಳ್ಳುವುದಿಲ್ಲ; ಆದರೆ, ಕೇಂದ್ರ ಸಂವಿಧಾನದಲ್ಲಿನ ಪ್ರಕರಣ ಅಥವಾ ಪ್ರಕರಣಗಳಿಗೆ ಇದನ್ನು ಅನುವಾದ ಮಾಡುವುದಕ್ಕೆ ಮುನ್ನ, ಇದರ ಭಾಷೆಯಷ್ಟೇ ಅಲ್ಲ, ಈ ತಿದ್ದುಪಡಿಯ ಭಾವವನ್ನೂ ಕೂಡ ಬದಲಾಯಿಸುವ ಸ್ವಾತಂತ್ರ್ಯವನ್ನು ನಾನು ಕಾಯ್ದಿರಿಸಬಯಸುತ್ತೇನೆ. ಮಾನ್ಯರೆ, ನಾನು ಇದನ್ನು ಅಂಗೀಕರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ನಾನು ಈಗ ಶ್ರೀ ಟಿ.ಟಿ. ಕೃಷ್ಣಮಾಚಾರಿಯವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಭಾಗ ೮ ನೇರವಾಗಿ ಆಡಳಿತಕ್ಕೊಳಪಡುವ ಪ್ರದೇಶವನ್ನು ಸೂಚಿಸುತ್ತದೆ. ನಾನು ಮಂಡಿಸಲು ಬಯಸುವ ಖಂಡಗಳು ಈ ಕೆಳಗಿನಂತೆ ಮುಂದುವರಿಯುತ್ತವೆ:

"೧. ಮುಖ್ಯ ಆಯುಕ್ತರ ಪ್ರಾಂತ್ಯಗಳು ಭಾರತ ಸರ್ಕಾರ ಅಧಿನಿಯಮ, ೧೯೩೫ರ ಅಡಿಯಲ್ಲಿ, ಹಂಗಾಮಿ ಮಾದರಿಯಲ್ಲಿ ಕೇಂದ್ರದ ಆಳ್ವಿಕೆಗೊಳಪಟ್ಟಿರುವುದು ಮುಂದುವರಿಯಬೇಕು; ಪದ್ಧತಿಯಲ್ಲಿನ ಯಾವುದೇ ಬದಲಾವಣೆಯ ಪ್ರಶ್ನೆಯು ಅನಂತರದಲ್ಲಿ ಪರಿಗಣಿಸಲ್ಪಡಬೇಕು ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಒಳಗೊಂಡಂತೆ ಕೇಂದ್ರದ ಆಡಳಿತಕ್ಕೊಳಪಟ್ಟಿರುವ ಎಲ್ಲ ಪ್ರದೇಶಗಳು ಸಂವಿಧಾನದಲ್ಲಿ ನಿಖರವಾಗಿ ಉಲ್ಲೇಖವಾಗಬೇಕು.

೨. ಬುಡಕಟ್ಟು ಪ್ರದೇಶಗಳ ಆಡಳಿತಕ್ಕೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಸೂಕ್ತ ಅವಕಾಶವನ್ನು ಮಾಡಬೇಕು."

ಅನಂತರದ ಖಂಡವು ಸಲಹಾಸಮಿತಿಯಿಂದ ನಾವು ಪಡೆಯುವ ವರದಿಯ ಮೇಲೆ ನಿಜಕ್ಕೂ ಆಧಾರಿತವಾಗಿದೆ. ಆ ಸಮಿತಿಯಿಂದ ಏನೇನು ಶಿಫಾರಸನ್ನು ಮಾಡಲಾಗುತ್ತದೆಯೋ ಮತ್ತು ಈ ಸದನದಿಂದ ಏನೇನು ಅಂಗೀಕಾರವಾಗುತ್ತವೆಯೋ ಅವು ಹೊಸ ಸಂವಿಧಾನದಲ್ಲಿ ಸೇರ್ಪಡೆಯಾಗುತ್ತವೆ.

ನೇರವಾಗಿ ಆಡಳಿತಕ್ಕೊಳಪಡುವ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಸಮಿತಿಯು ಶಿಫಾರಸು ಮಾಡಿರುವುದು ಏನೆಂದರೆ, ವಿಷಯಗಳ ಹಾಲಿ ಸ್ಥಿತಿಯು ಮುಂದುವರಿಯಬಹುದು, ಸಂವಿಧಾನದಲ್ಲಿ ಯಾವುದೇ ಬದಲಾವಣೆ ಮಾಡುವ ವಿಷಯ (ಪ್ರಶ್ನೆ) ಮತ್ತು ಈ ಮುಖ್ಯ ಆಯುಕ್ತರುಗಳ ಪ್ರಾಂತ್ಯಗಳ ಆಡಳಿತವನ್ನು ಒಕ್ಕೂಟದ ಸಂಸತ್ತು, ಅದು ಕಾರ್ಯರೂಪಕ್ಕೆ ಬಂದ ಅನಂತರ ನೋಡಿಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷರು** : ಈ ಖಂಡಕ್ಕೆ ಕೆಲವು ತಿದ್ದುಪಡಿಗಳಿವೆ.

(ಶ್ರೀ ಎಚ್. ಜೆ. ಖಾಂಡೇಕರ್ ಅವರು ತಮ್ಮ ತಿದ್ದುಪಡಿ ಸಂಖ್ಯೆ ೩೮೦ನ್ನು ಮಂಡಿಸಲಿಲ್ಲ.)

**ಶ್ರೀ ಗೋಕುಲ್‌ಭಾಯ್ ಡಿ. ಭಟ್** : (ರಾಜ್‌ಪುತಾನ ಪೂರ್ವ ರಾಜ್ಯಗಳು) : *[ಮಾನ್ಯ ಸಭಾಧ್ಯಕ್ಷರೆ, ಇನ್ನೊಂದು ತಿದ್ದುಪಡಿಯ ಸುಧಾರಿತ ರೂಪವು, ನಾನು ಮಂಡಿಸಬೇಕಿರುವ ತಿದ್ದುಪಡಿಯ ಭಾವವನ್ನೇ ಹೆಚ್ಚು ಕಡಿಮೆ ತಿಳಿಯಪಡಿಸುವುದರಿಂದ, ನಾನು ನನ್ನ ತಿದ್ದುಪಡಿಯನ್ನು ಮಂಡಿಸುವುದಿಲ್ಲ.]*

**ಶ್ರೀ ದೇಶಬಂಧು ಗುಪ್ತ** : (ದೆಹಲಿ) : *[ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸಲಿರುವ ತಿದ್ದುಪಡಿಯು ಈ ಕೆಳಗಿನಂತೆ ಮುಂದುವರಿಯುತ್ತದೆ :

"ಖಂಡ ೧ರ ಪರಿಗಣಿಸುವಿಕೆಯು ಮುಂದೂಡಲ್ಪಡಬೇಕು ಮತ್ತು ದೇಶದಲ್ಲಿ ಬದಲಾದ ಪರಿಸ್ಥಿತಿಗಳಿಗೆ ಅನುಗುಣವಾಗಿ ಹಾಗೂ ಸ್ವತಂತ್ರ ಭಾರತದ ಪ್ರಜಾಪ್ರಭುತ್ವ ಸಂವಿಧಾನದಲ್ಲಿ ಅವುಗಳಿಗೆ ಸೂಕ್ತ ಸ್ಥಾನ ನೀಡುವುದಕ್ಕಾಗಿ, ಮುಖ್ಯ

ಆಯುಕ್ತರ ಪ್ರಾಂತ್ಯಗಳ ಆಡಳಿತ ಪದ್ಧತಿಯಲ್ಲಿ ತರಬೇಕಾದ ಸೂಕ್ತ ಸಾಂವಿಧಾನಿಕ ಬದಲಾವಣೆಗಳನ್ನು ಕುರಿತು ಸಲಹೆ ನೀಡುವುದಕ್ಕಾಗಿ ರಾಷ್ಟ್ರಪತಿಯವರಿಂದ ನೇಮಕಗೊಳ್ಳುವ ಏಳು ಸದಸ್ಯರನ್ನು ಒಳಗೊಂಡಿರುವ ಉಪಸಮಿತಿಯು ಸಂವಿಧಾನ ರಚನಾಸಭೆಯ ಮುಂದಿನ ಅಧಿವೇಶನದೊಳಗೆ ಸೂಚಿಸಲ್ಪಡಬೇಕು."

ಇದಕ್ಕೆ ಸಂಬಂಧಪಟ್ಟಂತೆ, ನಾನು ಪ್ರಸ್ತುತಪಡಿಸಬಯಸುವುದು ಏನೆಂದರೆ, ಕೇಂದ್ರ ಸಂವಿಧಾನ ಸಮಿತಿ, ಪ್ರಸ್ತುತದಲ್ಲಿ ಸಂವಿಧಾನ ರಚನಾಸಭೆಯ ಶಿಫಾರಸಿನ ಪ್ರಕಾರ, ಮುಖ್ಯ ಆಯುಕ್ತರುಗಳ ಪ್ರಾಂತ್ಯಗಳಿಗೆ ಮಾಡಲು ಉದ್ದೇಶಿಸಿರುವುದು ಏನೂ ಇಲ್ಲ. ನಾನು ಕೇಂದ್ರ ಸಂವಿಧಾನ ಸಮಿತಿ, ಪ್ರಾಂತೀಯ ಸಂವಿಧಾನ ಸಮಿತಿ ಮತ್ತು ಇತರ ಕೆಲವು ಸಮಿತಿಗಳ ಸದಸ್ಯರುಗಳನ್ನು ಸಂಪರ್ಕಿಸಿದ್ದೇನೆ ಮತ್ತು ಈ ಅಂತಿಮ ನಿರ್ಧಾರವನ್ನು ತಲಪಿದ್ದೇನೆ. ಪ್ರಮುಖ ಪ್ರಾಂತ್ಯಗಳಾದ ದೆಹಲಿ, ಅಜ್ಮೀರ್ – ಮೆರ್‍ವಾರಾ ಹಾಗೂ ಕೂರ್ಗ್ ಒಳಗೊಂಡಂತೆ ಮುಖ್ಯ ಆಯುಕ್ತರುಗಳ ಪ್ರಾಂತ್ಯಗಳಲ್ಲಿ ಈಗ ಇರುವ ರೀತಿಯ ಆಡಳಿತವು ಇನ್ನಷ್ಟು ಕಾಲ ಮುಂದುವರಿಯಬೇಕು ಎಂಬ ಉದ್ದೇಶವನ್ನು ಅವರು ಹೊಂದಿಲ್ಲ. ಆದರೆ, ಅನುಕೂಲತೆಯ ರಕ್ಷಣೆಗಾಗಿ ಮಾತ್ರ ಅವರು ಇದನ್ನು ಶಿಫಾರಸು ಮಾಡಿದ್ದಾರೆ. ಸಹಜವಾಗಿ, ಈ ಜಿಲ್ಲೆಗಳ ಜನಸಂಖ್ಯೆ ಸುಮಾರು ೩೦ ಲಕ್ಷಕ್ಕೆ ಬಂದಾಗ, ಇಡೀ ದೇಶಕ್ಕೆ ಸಂವಿಧಾನವನ್ನು ರಚಿಸುವ ಈ ಸುಸಂದರ್ಭದಲ್ಲಿ, ಈ ಜಿಲ್ಲೆಗಳೂ ಸಹ ಈ ಸಂವಿಧಾನದಲ್ಲಿ ಉಲ್ಲೇಖವಾಗಬೇಕು ಮತ್ತು ಭವಿಷ್ಯದಲ್ಲಿ ಅವುಗಳ ಆಡಳಿತದ ಬಗ್ಗೆ ನಿರ್ದಿಷ್ಟ ಶಿಫಾರಸುಗಳು ಇರಬೇಕೆಂದು ಅವು ಬಯಸಿದವು. ಈ ದೃಷ್ಟಿಯಿಂದ ನಾನು ಈ ತಿದ್ದುಪಡಿಯನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ.

ನಾನು ಯಾವ ಅಭಿಪ್ರಾಯವನ್ನು ಹೊಂದಿದ್ದೇನೆಂದರೆ, ಕೇಂದ್ರ ಹಾಗೂ ಪ್ರಾಂತ್ಯಗಳಿಗಾಗಿ ಸಂವಿಧಾನವನ್ನು ರಚಿಸುವ ಸಲುವಾಗಿ ನಾವು ಕೇಂದ್ರ ಸಂವಿಧಾನ ರಚನಾಸಮಿತಿಯನ್ನು ನೇಮಕಮಾಡಿರುವುದರಿಂದ, ಸಂಖ್ಯೆಯಲ್ಲಿ ಕಡಿಮೆಯಿದ್ದರೂ, ನಗಣ್ಯವಲ್ಲದಿದ್ದರೂ, ಕಡಿಮೆ ಜನಸಂಖ್ಯೆಯನ್ನು ಹೊಂದಿದ್ದರೂ ಕೂಡ ಮುಖ್ಯ ಆಯುಕ್ತರುಗಳ ಪ್ರಾಂತ್ಯಗಳಿಗಾಗಿ ಸಮಿತಿಯನ್ನು ನೇಮಕಮಾಡುವುದು ಆವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಇದು ಅಂಗೀಕೃತ ತಿದ್ದುಪಡಿಯಾಗಿರುವುದಕ್ಕೆ ನನಗೆ ಸಂತೋಷವಾಗಿದೆ ಮತ್ತು ಸಮಿತಿಯು ನೇಮಕಗೊಂಡಾಗ ಈ ವಿಷಯದ ಎಲ್ಲ ಮಗ್ಗಲುಗಳನ್ನು ಇದು ಪರಿಗಣಿಸುತ್ತದೆಂದು ನಾನು ಭಾವಿಸುತ್ತೇನೆ. ನಿಮ್ಮಲ್ಲಿ ಬಹುಮಂದಿ ದೆಹಲಿ ನಿವಾಸಿಗಳಾಗಿರುವುದರಿಂದ, ವರ್ಷದ ಹೆಚ್ಚಿನ ಭಾಗವನ್ನು ನೀವು ಇಲ್ಲಿ ಕಳೆಯುತ್ತೀರಿ. ನಿಮ್ಮಲ್ಲಿ ಬಹುತೇಕರು ನಮ್ಮ ಅತಿಥಿಗಳು ಮತ್ತು ಆದ್ದರಿಂದ, ದೆಹಲಿ ನಿವಾಸಿಗಳ ತೊಂದರೆಗಳು ನಿಮ್ಮ ಮುಂದೆ ಬಂದಾಗ, ಈ ಸಂವಿಧಾನವು ತತ್‌ಕ್ಷಣ ಅದನ್ನು ಪರಿಗಣಿಸುತ್ತದೆಂದು ನಾನು ಭಾವಿಸುತ್ತೇನೆ.

ಈ ಸಂದರ್ಭದಲ್ಲಿ ನಾನು ಹೆಚ್ಚಿಗೆ ಏನನ್ನೂ ಹೇಳಲು ಬಯಸುವುದಿಲ್ಲ. ಮುಖ್ಯ ಆಯುಕ್ತರುಗಳ ಪ್ರಾಂತ್ಯಗಳಲ್ಲಿನ ಜನರು ಎದುರಿಸಬಹುದಾದ ಸಮಸ್ಯೆಗಳನ್ನು ಪರಿಗಣಿಸುವಾಗ, ಅವುಗಳಿಂದ ಯಾವುದೇ ಪ್ರಕಾರದ ಸ್ವಯಂ ಸರ್ಕಾರಗಳನ್ನು ಈಗ ಕಿತ್ತುಕೊಳ್ಳಬಾರದು. ಇದರ ಜೊತೆಯಲ್ಲಿ, ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಇವು ವಹಿಸಿದ ಪಾತ್ರಗಳು ಸಮಿತಿಯ ಮುಂದೆ ಬರಬೇಕು ಮತ್ತು ಇಡೀ ಸದನಕ್ಕೆ ಸ್ವೀಕಾರಾರ್ಹವಾದ ಸಂವಿಧಾನವನ್ನು ಇದು ಶಿಫಾರಸು ಮಾಡುತ್ತದೆಂದು ನಾನು ನಿರೀಕ್ಷಿಸುತ್ತೇನೆ.

ನಾನು ಈ ಸದನದ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಲು ಬಯಸುವುದಿಲ್ಲ. ಈ ತಿದ್ದುಪಡಿಯು ಅಂಗೀಕಾರಗೊಳ್ಳುತ್ತದೆ ಎಂದು ನಾನು ಭಾವಿಸುತ್ತೇನೆ. ಒಂದು ವೇಳೆ ಈ ತಿದ್ದುಪಡಿಯು ಸ್ವೀಕಾರಗೊಂಡರೆ, ನಮ್ಮಿಂದ ಸೂಚನೆ ನೀಡಲಾದ ಇತರ ತಿದ್ದುಪಡಿಗಳು ಮಂಡನೆಯಾಗುವ ಆವಶ್ಯಕತೆಯಿಲ್ಲ.]*

**ಮಾನ್ಯ ಸಭಾಧ್ಯಕ್ಷರು** : ಈ ಖಂಡಕ್ಕೆ ಇತರ ಯಾವುದೇ ತಿದ್ದುಪಡಿಗಳಿಲ್ಲ; ಆದರೆ, ಒಂದು ವೇಳೆ ಶ್ರೀ ದೇಶಬಂಧು ಗುಪ್ತ ಅವರಿಂದ ಸಲಹೆ ಮಾಡಲ್ಪಟ್ಟ ತಿದ್ದುಪಡಿಯು ಅಂಗೀಕಾರಗೊಂಡರೆ, ಇತರ ತಿದ್ದುಪಡಿಗಳನ್ನು ಪರಿಗಣಿಸಬೇಕಾದ ಆವಶ್ಯಕತೆಯಿಲ್ಲ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನಾನು 'ಉಪಸಮಿತಿ'ಗೆ ಬದಲು 'ಸಮಿತಿ'

ಎಂಬ ಶಬ್ದವನ್ನು ಸೇರಿಸಿರುವುದನ್ನು ಹೊರತುಪಡಿಸಿ ಅವರ ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಇದು ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರಿಂದ ಅಂಗೀಕಾರಗೊಂಡಿದೆ.

**ಶ್ರೀ ಬಿ.ಕೆ. ಸಿಧ್ವಾ :** ಮಾನ್ಯರೆ, ನಾನು ಈ ಪ್ರಸ್ತಾವವನ್ನು ಬೆಂಬಲಿಸಲು ಎದ್ದು ನಿಂತಿದ್ದೇನೆ; ಇದನ್ನು ಬೆಂಬಲಿಸುತ್ತಾ ಭಾಷಣಮಾಡಲು ಬಯಸುತ್ತೇನೆ ಎಂಬ ಕಾರಣಕ್ಕಲ್ಲ; ಆದರೆ, ಈ ಪ್ರಶ್ನೆಯ ಮಹತ್ತ್ವವನ್ನು ಅರ್ಥಮಾಡಿಸುವ ಉದ್ದೇಶದಿಂದ ನಾನು ಈ ಸಮಿತಿಯನ್ನು ರಚಿಸುವ ಸದಸ್ಯರ ಮೇಲೆ ಪ್ರಭಾವ ಬೀರಲು ಬಯಸುತ್ತೇನೆ ಮತ್ತು ಆದ್ದರಿಂದ ಈ ಹಂತದಲ್ಲಿ, ಅಂದರೆ ಈ ಪ್ರಸ್ತಾವವನ್ನು ಅನುಮೋದಿಸುವ ಸಂದರ್ಭದಲ್ಲಿ ಕೆಲವು ಟೀಕೆಗಳು ಸೂಕ್ತವೆಂದು ನಾನು ಭಾವಿಸುತ್ತೇನೆ. ದೆಹಲಿ ನಗರಕ್ಕೆ ಸಂಬಂಧಪಟ್ಟಂತೆ ಬಹಳ ಕಾಲದಿಂದ ನಿರ್ಲಕ್ಷ್ಯಕ್ಕೊಳಗಾದ ಅನೇಕ ವಿಷಯಗಳಿವೆ. ದೆಹಲಿಯು ಚಕ್ರಾಧಿಪತ್ಯ ಸರ್ಕಾರದ ಖರ್ಚಿ ಎಂದು ಹೇಳಲಾಗುತ್ತದೆ. ಇಲ್ಲಿನ ಸರ್ಕಾರವು ಅಖಿಲ ಭಾರತವನ್ನು ನೋಡಬೇಕಾಗಿತ್ತು ಮತ್ತು ಈ ಕಾರಣದಿಂದಾಗಿ ಅದು ದೆಹಲಿ ನಗರ ಹಾಗೂ ಪ್ರಾಂತ್ಯವನ್ನು ನಿರ್ಲಕ್ಷಿಸಿತು. ಉದಾಹರಣೆಗೆ ಹೇಳುವುದಾದರೆ, ದೆಹಲಿಯಲ್ಲಿ ಜಿ.ಎನ್.ಐ.ಟಿ. ಎಂಬ ಸಾರಿಗೆ ಸಂಸ್ಥೆಯಿದೆ ಮತ್ತು ಜನರು ಈ ಸಾರಿಗೆ ಸಂಸ್ಥೆಯನ್ನು ಶಪಿಸುತ್ತಿದ್ದಾರೆ. ಏಕೆಂದರೆ, ಇದು ಜನಸಂಚಾರದೊಂದಿಗೆ ಸಹಕರಿಸುತ್ತಿಲ್ಲ ಮತ್ತು ಇದೇ ಸಮಯದಲ್ಲಿ ಅಧಿಕಾರಗಳು ಅಸಂಬದ್ಧ ದರಗಳನ್ನು ವಿಧಿಸುತ್ತಿದ್ದಾರೆ. ಈಗ, ಒಂದು ವೇಳೆ ದೆಹಲಿಯು ತನ್ನದೇ ಪ್ರಾಂತೀಯ ಸರ್ಕಾರವನ್ನು ಹೊಂದಿದ್ದರೆ ಮತ್ತು ಒಂದು ವೇಳೆ ಈ ವಿಷಯವು ಇದರ ನ್ಯಾಯಾಂಗ ಪರಿಧಿಯಲ್ಲಿ ಇದ್ದರೆ, ಇದು ಒಂದೇ ಬಾರಿಗೆ ಈ ವಿಷಯವನ್ನು ಖಂಡಿತವಾಗಿ ಗಮನಿಸಬಹುದು. ಸಾರಿಗೆ ಅನುಮತಿಯು ಸ್ಥಳೀಯ ಸರ್ಕಾರದಿಂದ ನೀಡಲ್ಪಡುತ್ತದೆ ಮತ್ತು ಒಂದು ವೇಳೆ ಜವಾಬ್ದಾರಿಯುತ ಪ್ರತ್ಯೇಕ ಸರ್ಕಾರವು ಇದ್ದರೆ, ಅದು ಪಂಜಾಬ್ ಸರ್ಕಾರ ಮಾಡಿದ ರೀತಿಯಲ್ಲಿ ಸೇವೆಯನ್ನು ರಾಷ್ಟ್ರೀಕರಿಸಬಹುದು ಅಥವಾ ಅದು ಸೇವೆಯನ್ನು ಸುಧಾರಿಸಬಹುದು. ಇದು ಸಣ್ಣ ವಿಷಯವಾಗಿ ಕಾಣಬಹುದು; ಆದರೆ, ಹಾಗಿದ್ದರೂ ಅದು ಸಾಮಾನ್ಯ ಜನರ ಮೇಲೆ ಪರಿಣಾಮ ಬೀರುತ್ತದೆ. ಈ ವಿಷಯದಲ್ಲಿ ಸರ್ಕಾರವು ಏನನ್ನೂ ಮಾಡಿಲ್ಲವೆಂದು ಬೀದಿಯಲ್ಲಿರುವ ಮನುಷ್ಯರು ದೂರುತ್ತಿದ್ದಾರೆ. ಅನಂತರ ಇಲ್ಲಿ ನೀರಾವರಿ, ಪಿ.ಡಬ್ಲ್ಯೂ.ಡಿ. (ಸಾರ್ವಜನಿಕ ಕಾಮಗಾರಿ ಇಲಾಖೆ), ಪಾನ ನಿಷೇಧ ಇತ್ಯಾದಿ ಪ್ರಶ್ನೆಗಳಿವೆ. ಒಂದು ವೇಳೆ ಇಲ್ಲಿ ಪ್ರತ್ಯೇಕ ಪ್ರಾಂತೀಯ ಸಂಸ್ಥೆಯಿದ್ದರೆ, ಅದು ಖಂಡಿತವಾಗಿ ಈ ವಿಷಯಗಳತ್ತ ಗಮನ ಹರಿಸುತ್ತದೆ; ಜನಸಂಖ್ಯೆ ಇಲ್ಲಿ ಲೆಕ್ಕಕ್ಕೆ ಬರುವುದಿಲ್ಲ. ಏಕೆಂದರೆ ದೆಹಲಿಯು ರಾಜಧಾನಿ ನಗರ; ಇದು ಕಳೆದ ದಿನಗಳಲ್ಲಿ ನಿರ್ಲಕ್ಷಿಸಲ್ಪಟ್ಟಿದೆ. ದೆಹಲಿಯು ಭಾರತದ ರಾಜಧಾನಿಯಾಗಿರುವುದರಿಂದ ಈ ನಗರ ಮತ್ತು ಇದಕ್ಕೆ ಹೊಂದಿಕೊಂಡಿರುವ ಹಳ್ಳಿಗಳು ಭೂತಕಾಲದಲ್ಲಿ ನಿರ್ಲಕ್ಷ್ಯಕ್ಕೊಳಗಾಗಿವೆ ಎಂದು ನಾನು ದೃಢವಾಗಿ ಭಾವಿಸುತ್ತೇನೆ.

ಮಾನ್ಯರೆ, ಆದ್ದರಿಂದ ನಾನು ಈ ಪ್ರಸ್ತಾವವನ್ನು ಸ್ವಾಗತಿಸುತ್ತೇನೆ ಮತ್ತು ಈ ಎಲ್ಲ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ಸಮಿತಿಯ ಮೇಲೆ ನಾನು ಒತ್ತಡ ಹೇರುತ್ತೇನೆ. ಜವಾಬ್ದಾರಿಯುತ ಸರ್ಕಾರವು ಈ ಶಾಸನಸಭೆಗೆ ಜವಾಬ್ದಾರವಾಗಬೇಕೆಂದು ನಾನು ಬಯಸುತ್ತೇನೆ; ಆ ಮೂಲಕ ಇದು ದೆಹಲಿ ನಗರದ ಸಾರ್ವಜನಿಕರ ಕುಂದುಕೊರತೆಗಳನ್ನು ಕುರಿತು ಚರ್ಚೆ ನಡೆಸುವುದಕ್ಕೆ ವೇದಿಕೆಯಾಗಬಹುದು. ಮಾನ್ಯರೇ, ನಾನು ಈ ದೃಷ್ಟಿಕೋನದಿಂದ ಈ ಪ್ರಸ್ತಾವವನ್ನು ಹೃದಯಪೂರ್ವಕವಾಗಿ ಬೆಂಬಲಿಸುತ್ತೇನೆ. ಇದು ಈಗಾಗಲೇ ಅವಧಿ ಮೀರಿದೆ. ನಾನು ಉಲ್ಲೇಖಿಸಲೇಬೇಕಾಗಿದೆ, ಮಾನ್ಯರೆ, ನಾನು ಸಂವಿಧಾನದಲ್ಲಿ ಗೊತ್ತುಹಚ್ಚಿದಂತೆ ದೆಹಲಿಯು ಬಹುಶಃ ಹೇಗಿದೆಯೋ ಹಾಗೇ ಇರುತ್ತದೆ ಮತ್ತು ಅನಂತರ, ಭವಿಷ್ಯತ್ತಿನ ಸಂವಿಧಾನದಲ್ಲಿ ಆಯೋಗವೊಂದು ರಚನೆಯಾಗಬಹುದು; ಬರಲಿರುವ ನೂತನ ಸಂವಿಧಾನದಲ್ಲಿ ದೆಹಲಿಯು ತನ್ನದೇ ಶಾಸನಸಭೆಯನ್ನು ಹೊಂದಿರಬೇಕು ಹಾಗೂ ಸಾರ್ವಜನಿಕರು ದೆಹಲಿ ನಗರ ಅಥವಾ ಪ್ರಾಂತ್ಯದ

ಜನರ ಕುಂದು ಕೊರತೆಗಳನ್ನು ಕುರಿತು ಚರ್ಚಿಸುವುದಕ್ಕೆ ಸಮರ್ಥರಾಗಬೇಕು ಎಂಬ ಬಗ್ಗೆಯೂ ನಾನು ತಿದ್ದುಪಡಿಯನ್ನು ಮಂಡಿಸಿದ್ದೇನೆ. ಆದ್ದರಿಂದ, ಮಾನ್ಯರೆ, ನಾನು ಈ ಪ್ರಸ್ತಾವವನ್ನು ತುಂಬುಹೃದಯದಿಂದ ಬೆಂಬಲಿಸುತ್ತೇನೆ.

**ಶ್ರೀ ಸಿ.ಎಮ್. ಪೂಣಚ್ಚ** (ಕೂರ್ಗ್) : ಮಾನ್ಯ ಸಭಾಧ್ಯಕ್ಷರೆ, ನಮ್ಮ ತಿದ್ದುಪಡಿಯನ್ನು ಅಂಗೀಕರಿಸಿರುವುದಕ್ಕಾಗಿ ನಾನು ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರಿಗೆ ಧನ್ಯವಾದ ಅರ್ಪಿಸುತ್ತೇನೆ. ಇದೇ ಸಂದರ್ಭದಲ್ಲಿ ನಾನು ಸಲಹೆಗಳ ಮೂಲಕ ಕೆಲವು ಅವಲೋಕನ ಮಾಡಬಯಸುತ್ತೇನೆ. ಮಾನ್ಯರೆ, ಈ ಹಿಂದಿನ ಸಂದರ್ಭದಲ್ಲಿ, ಸದನದ ಸಭಾಂಗಣದಲ್ಲಿ, ಮುಖ್ಯ ಆಯುಕ್ತರ ಪ್ರಾಂತ್ಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರೀಕ್ಷಿಸಲು ಈ ಮಾದರಿಯ ಸಮಿತಿಯನ್ನು ನೇಮಿಸಬೇಕೆಂದು ನಾನು ಸಲಹೆ ಮಾಡಿದ್ದೆ. ಮುಖ್ಯ ಆಯುಕ್ತರ ಪ್ರಾಂತ್ಯಗಳ ಸಮಸ್ಯೆಯು ಅದು ಮೇಲ್ನೋಟಕ್ಕೆ ಕಾಣಿಸುವಷ್ಟು ಸರಳವಾಗಿಲ್ಲ. ಇಂತಹ ಪ್ರತಿ ಪ್ರದೇಶದ ಸಮಸ್ಯೆಯು ಒಂದಕ್ಕಿಂತ ಇನ್ನೊಂದು ವಿಭಿನ್ನವಾಗಿದೆ. ಈ ಅಂಶವು ೧೯೧೯ ಮತ್ತು ೧೯೩೫ರ ಅಧಿನಿಯಮಗಳನ್ನು ಅಂಗೀಕರಿಸುವ ಸಂದರ್ಭದಲ್ಲಿನ ಸಾಂವಿಧಾನಿಕ ವಿಚಾರಣೆಗಳ ವರದಿಯಲ್ಲಿ ಆಶ್ರಯ ಕಂಡಿದೆ. ೧೯೧೯ ಮತ್ತು ೧೯೩೫ರ ಅಧಿನಿಯಮಗಳಲ್ಲಿ ಮುಖ್ಯ ಆಯುಕ್ತರ ಪ್ರಾಂತ್ಯಗಳ ವಿಷಯದಲ್ಲಿ ಸರಿಯಾದ ರೀತಿಯಲ್ಲಿ ವ್ಯವಹರಿಸಲಾಗಿಲ್ಲ ಮತ್ತು ವಿಷಯವು ಇನ್ನೂ ತೂಗುಯ್ಯಾಲೆಯಲ್ಲಿದೆ. ಆದ್ದರಿಂದ, ಮಾನ್ಯರೆ, ೧೯೩೫ರ ಅಧಿನಿಯಮದ ಅಡಿಯಲ್ಲಿ ಇಂತಹ ಪ್ರತಿಯೊಂದು ಪ್ರಾಂತ್ಯದಲ್ಲಿ ಕಂಡುಬಂದ ಸ್ಥಿತಿಯ ಸಂಪೂರ್ಣ ಪರೀಕ್ಷೆಯನ್ನು ಕೈಗೆತ್ತಿಕೊಳ್ಳಬೇಕು ಮತ್ತು ಸೂಕ್ತ ಶಿಫಾರಸುಗಳನ್ನು ಮಾಡಬೇಕು. ಈ ಉದ್ದೇಶಕ್ಕಾಗಿ ಸ್ಥಳೀಯ ವಿಚಾರಣೆ ನಡೆಸುವುದು ಅಥವಾ ಪ್ರಶ್ನಾವಳಿಗಳ ಮೂಲಕ ದೃಷ್ಟಿಕೋನಗಳನ್ನು ಅಭಿಪ್ರಾಯಗಳನ್ನು ಹೊರತೆಗೆಯುವುದು ಆವಶ್ಯಕವಾಗಬಹುದು.

ಕೂರ್ಗ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಈ ಹಿಂದಿನ ಸಂದರ್ಭದಲ್ಲಿ ನಾನು ಹೇಳಿದ್ದೇನೆ, ನಾನು ಈ ಶಾಸನಸಭೆಗೆ ಆಯ್ಕೆಯಾಗುವ ಸಂದರ್ಭದಲ್ಲಿ ಶಾಸನಾಧಿಕಾರದ ಪರಿಷತ್ತಿನಲ್ಲಿ ನಿರ್ದಿಷ್ಟ ಭರವಸೆಯನ್ನು ನೀಡಿದ್ದೇನೆ; ಕೂರ್ಗ್‌ನ ಆಡಳಿತ ವ್ಯವಸ್ಥೆಯಲ್ಲಿ ಯಾವುದೇ ಗಣನೀಯ ಬದಲಾವಣೆಯನ್ನು ತರುವುದಕ್ಕೆ ಮುನ್ನ ಕೂರ್ಗ್‌ನ ಜನರ ಅಭಿಪ್ರಾಯವನ್ನು ಖಚಿತಪಡಿಸಿಕೊಳ್ಳಬೇಕು ಎಂದು. ಕೂರ್ಗ್ ತನ್ನದೇ ಆದ ಸಮಸ್ಯೆಗಳನ್ನು ಹೊಂದಿದೆ ಮತ್ತು ಇದರ ಬಗ್ಗೆ ವಿಸ್ತೃತ ತನಿಖೆಯ ಆವಶ್ಯಕತೆಯಿದೆ. ಇಲ್ಲಿ ಇದು ಸ್ಥಳದಿಂದ ಹೊರಗಿಲ್ಲದಿರಬಹುದು; ಮಾನ್ಯರೆ, ಕೂರ್ಗ್‌ನಲ್ಲಿನ ಶಾಸನಾಧಿಕಾರ ಪರಿಷತ್ತನ್ನು ಕುರಿತಾದ ಮೊದಲ ಪ್ರಾಥಮಿಕ ತನಿಖೆ ನಡೆಸುವ ಸಲುವಾಗಿ ಸಮಿತಿಯು ಕೂರ್ಗ್‌ಗೆ ಭೇಟಿ ನೀಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈ ಪರಿಷತ್ತು ಕಳೆದ ೨೫ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ ಮತ್ತು ಕಳೆದ ಸುಮಾರು ಕಾಲು ಶತಮಾನದ ಕಾಲ ಇದು ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ತನಿಖೆ ನಡೆಸುವುದರಿಂದ ಸಮಿತಿಗೆ ಅಪಾರ ಲಾಭವಿದೆ.

ಅಂತಿಮವಾಗಿ ಹೇಳುವುದಾದರೆ, ನನಗೆ ಹೇಳಲು ಅನುಮತಿ ಸಿಕ್ಕಿದರೆ, ಮಾನ್ಯರೆ, ಇದು ಈ ಪ್ರದೇಶಗಳ ಜನರಿಗೆ ಅತ್ಯಂತ ಮಹತ್ತ್ವದ ವಿಷಯವಾಗಿರುವುದರಿಂದ, ಈ ಸಮಿತಿಯ ಸಮಾಲೋಚನೆಯಲ್ಲಿ, ಈ ಸಭೆಯಲ್ಲಿ ಮುಖ್ಯ ಆಯುಕ್ತರ ಪ್ರಾಂತ್ಯಗಳನ್ನು ಪ್ರತಿನಿಧಿಸುವ ಸದಸ್ಯರುಗಳು ಭಾಗಿಯಾಗಲೇಬೇಕು. ವಿಷಯವು ನಿಜವಾಗಿಯೂ ಜಟಿಲ ಸ್ವರೂಪದ್ದಾಗಿರುವುದರಿಂದ, ಕೇಂದ್ರ ಸಂವಿಧಾನದ ಮೇಲಿನ ವರದಿಯ ತಯಾರಿಯಲ್ಲಿ ತುಂಬ ಕೆಲಸ ನಿರ್ವಹಿಸಿದ ನಮ್ಮ ಸಮರ್ಥ ಸಾಂವಿಧಾನಿಕ ವಕೀಲರುಗಳನ್ನು ಈ ಸಮಿತಿಯಲ್ಲಿ ಸೇರ್ಪಡೆ ಮಾಡಬೇಕೆಂದೂ ಸಹ ನಾನು ಸಲಹೆ ಮಾಡುತ್ತೇನೆ. ಈ ವಿಷಯ ಅಥವಾ ಪ್ರಶ್ನೆಯು ಬಹಳ ಜಾಗರೂಕ ಪರಿಶೀಲನೆಗೆ ಮತ್ತು ಸಮರ್ಥ ಮಾರ್ಗದರ್ಶನಕ್ಕೆ ಯೋಗ್ಯವಾಗಿದೆ.

**ಪಂಡಿತ್ ಮುಕುಟ್ ಬಿಹಾರಿ ಲಾಲ್ ಭಾರ್ಗವ** (ಅಜ್ಮೇರ್ – ಮೇರ್ವಾರ) : ಮಾನ್ಯ ಸಭಾಧ್ಯಕ್ಷರೆ,

ಶ್ರೀ ಗುಪ್ತ ಅವರಿಂದ ಮಂಡಿಸಲ್ಪಟ್ಟ ತಿದ್ದುಪಡಿಯನ್ನು ನಾನು ಮನಃಪೂರ್ವಕವಾಗಿ ಬೆಂಬಲಿಸುತ್ತೇನೆ. ಇದು ಆಶ್ಚರ್ಯಕರವಾಗಿದೆ, ಮಾನ್ಯರೇ, ಮುಖ್ಯ ಆಯುಕ್ತರ ಪ್ರಾಂತ್ಯಗಳ ಪ್ರಶ್ನೆಗೆ, ವಿಷಯಕ್ಕೆ ವಿಶೇಷವಾಗಿ ಸಂಬಂಧಿಸಿದಂತೆ ವ್ಯವಹರಿಸುವ ಅಧಿಕಾರದೊಂದಿಗೆ ನಿಯೋಜಿತವಾಗಿರುವ ಒಕ್ಕೂಟ ರಚನಾಸಮಿತಿಯು ಯಾವುದೇ ಸಲಹೆಯನ್ನು ನೀಡಿಲ್ಲ. ಇದು ಸಂಪೂರ್ಣ ವಿಷಯವನ್ನು ತುಂಬ ಸರಳವಾಗಿ ಮುಂದೂಡಿದೆ ಮತ್ತು ವ್ಯವಸ್ಥೆಯಲ್ಲಿನ ಬದಲಾವಣೆಯ ಪ್ರಶ್ನೆಯನ್ನು ಅನಂತರದ ಹಂತದಲ್ಲಿ ತೆಗೆದುಕೊಳ್ಳಬಹುದು ಎಂದು ಹೇಳಿದೆ. ಇದು ನಿಜಕ್ಕೂ ಅತ್ಯಂತ ಸಂತೋಷದ ವಿಷಯವಾಗಿದೆ, ಮಾನ್ಯರೇ, ಈ ಖಂಡದ ಪ್ರಾಯೋಜಕರು (ಮಂಡಿಸಿದವರು) ತಿದ್ದುಪಡಿಯನ್ನು ಅಂಗೀಕರಿಸಲು ಒಪ್ಪಿದ್ದಾರೆ ಮತ್ತು ಮುಖ್ಯ ಆಯುಕ್ತರ ಪ್ರಾಂತ್ಯಗಳ ವಿಷಯವನ್ನು ಪರಿಶೀಲಿಸುವ ಸಲುವಾಗಿ, ರಾಷ್ಟ್ರಪತಿಯವರಿಂದ ಸಮಿತಿಯೊಂದು ನೇಮಕಗೊಳ್ಳಲಿದೆ.

ಮಾನ್ಯರೆ, ಮುಖ್ಯ ಆಯುಕ್ತರ ಪ್ರಾಂತ್ಯಗಳು ದೇಶದ ವಿವಿಧ ಭಾಗಗಳಲ್ಲಿರುವ ಹಲವು ರೀತಿಯ ಸಂಸ್ಥಾನಗಳಾಗಿವೆ ಮತ್ತು ಅವು ತಮ್ಮದೇ ಆದ ಐತಿಹಾಸಿಕ ಮಹತ್ತ್ವವನ್ನು ಹೊಂದಿವೆ. ನನ್ನ ಪ್ರಾಂತ್ಯವಾದ ಅಜ್ಮೇರ್ – ಮೇರ್ವಾರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ರಜಪುತಾನದ ಹೃದಯಭಾಗದಲ್ಲಿ ನೆಲೆಯಾಗಿದೆ ಮತ್ತು ಇದು ಐತಿಹಾಸಿಕ ಮಹತ್ತ್ವದ ಪ್ರದೇಶವಾಗಿದೆ. ವಾಸ್ತವವಾಗಿ, ಇದು ಅನುಕೂಲಕರವಾದ ಸ್ಥಾನವಾಗಿರುವ ಕಾರಣದಿಂದಾಗಿ ಬ್ರಿಟಿಷರ ಆಡಳಿತ ಕಾಲದುದ್ದಕ್ಕೂ ಇಲ್ಲಿ ನಿರಂಕುಶಾಧಿಕಾರವು ಮುಂದುವರಿದುಕೊಂಡು ಬಂದಿತು. ಪರಿಣಾಮಕಾರಿ ಬದಲಾವಣೆಯ ಎಲ್ಲ ಪ್ರಯತ್ನಗಳು ಮತ್ತು ಆಡಳಿತ ವ್ಯವಸ್ಥೆಯಲ್ಲಿನ ಸುಧಾರಣೆಗಳು ಸಂಪೂರ್ಣ ವಿಫಲವಾದವು. ೧೯೦೯ರ ಮಿಂಟೋ–ಮಾರ್ಲೆ ಸುಧಾರಣೆ, ೧೯೧೯ರ ಮೊಂಟಾಗು–ಚೆಮ್ಸ್‌ಫೋರ್ಡ್ ಸುಧಾರಣೆ ಮತ್ತು ೧೯೩೫ರ ಸಂವಿಧಾನ ಅಧಿನಿಯಮವು ಯಾವುದೇ ಪರಿಣಾಮಕ್ಕೊಳಗಾಗದೇ ಹಾಗೆಯೇ ಉಳಿದುಕೊಂಡವು ಮತ್ತು ಈ ಪ್ರಾಂತ್ಯದಲ್ಲಿನ ಹಾಗೂ ಇತರ ಎಲ್ಲ ಮುಖ್ಯ ಆಯುಕ್ತರ ಪ್ರಾಂತ್ಯಗಳಲ್ಲಿನ ನಿರಂಕುಶಾಧಿಕಾರ ಪದ್ಧತಿಯನ್ನು ಇವು ಸ್ಪರ್ಶಮಾಡಲೇ ಇಲ್ಲ. ವಾಸ್ತವವಾಗಿ, ಮಾನ್ಯರೆ, ಈ ಪ್ರಶ್ನೆ ಅಥವಾ ವಿಷಯವನ್ನು ಅನಂತರದ ಹಂತದಲ್ಲಿ ಗಣನೆಗೆ ತೆಗೆದುಕೊಳ್ಳಬಹುದು ಎಂಬ ಒಕ್ಕೂಟ ರಚನಾಸಮಿತಿಯ ಶಿಫಾರಸು ಭಾರತ ಗಣತಂತ್ರದ ಪ್ರಜಾಪ್ರಭುತ್ವ ಸಂವಿಧಾನದ ಶ್ರುತಿಗೆ ಹೊರತಾಗಿದೆ. ಆದ್ದರಿಂದ, ಮಾನ್ಯರೆ, ಇತರ ಪ್ರಾಂತ್ಯಗಳು ಮತ್ತು ಕೇಂದ್ರದಲ್ಲಿ ಬಹಳ ಮಹತ್ತ್ವದ ಶಾಸನಬದ್ಧ ಬದಲಾವಣೆಗಳು ಆಗುತ್ತಿದ್ದು ಇದರ ಜೊತೆಜೊತೆಯಲ್ಲಿಯೇ, ಸಂಪೂರ್ಣವಾಗಿ ನಿರಂಕುಶಾಧಿಕಾರ ಸ್ವಭಾವದ ಮುಖ್ಯ ಆಯುಕ್ತರ ಪ್ರಾಂತ್ಯಗಳ ಸಂವಿಧಾನವನ್ನೂ ಕ್ರಮಪಡಿಸಬೇಕು ಮತ್ತು ಭಾರತದ ಇತರ ಪ್ರದೇಶಗಳ ಸಾಲಿಗೆ ತರಬೇಕು. ಮಾನ್ಯರೆ, ನಾವು ನೇಮಕಮಾಡಲು ಹೊರಟಿರುವ ವಿಶೇಷ ಸಮಿತಿಯು, ಪ್ರತಿಯೊಂದು ಮುಖ್ಯ ಆಯುಕ್ತರ ಪ್ರಾಂತ್ಯದ ಸಮಸ್ಯೆಯನ್ನೂ ಪರಿಶೀಲಿಸಲಿದೆ ಮತ್ತು ಸಂಪೂರ್ಣವಾಗಿ ಪ್ರಜಾಪ್ರಭುತ್ವ ಸ್ವರೂಪದ ಸಂವಿಧಾನವನ್ನು ಸೂಚಿಸಲಿದೆಯೆಂದು ನಾನು ಆಶಿಸುತ್ತೇನೆ.

ಅಜ್ಮೇರ್‌ಗೆ ಸಂಬಂಧಿಸಿದಂತೆ ಹೇಳುವುದಾದರೆ, ಸಂಪೂರ್ಣ ಸ್ವಾಯತ್ತ ಗವರ್ನರ್‌ರ ಪ್ರಾಂತ್ಯದ ಸ್ಥಾನಮಾನ ಪಡೆಯುವುದಕ್ಕೆ ಅರ್ಹವಾದ ಯೋಗ್ಯತೆಯನ್ನು ಹೊಂದಿರುವ ಪ್ರಾಂತ್ಯ ಇದಾಗಿದೆ. ಕೇವಲ ಇದರ ಚಿಕ್ಕ ಗಾತ್ರ ಮತ್ತು ಇದರ ಅಲ್ಪ ಆರ್ಥಿಕ ಸಂಪನ್ಮೂಲಗಳನ್ನು ಕುರಿತಾದ ಚರ್ಚೆಗಳು, ಇಲ್ಲಿನ ಜನರು ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಹಕ್ಕು ಪಡೆಯುವ ಅಥವಾ ಸ್ವಂತ ಮನೆಯ ಮಾಲೀಕನಾಗುವ ಹಕ್ಕನ್ನು ಹೊಂದುವ ಮಾರ್ಗದಲ್ಲಿ ತಡೆಗೋಡೆಗಳಾಗಬಾರದು. ಆದ್ದರಿಂದ, ನಿಮ್ಮಿಂದ ನೇಮಕಗೊಳ್ಳಲಿರುವ ಉಪಸಮಿತಿಯು ಇದರ ಎಲ್ಲ ರೀತಿಯ ಸಮಸ್ಯೆಗಳನ್ನು ಪರಿಗಣಿಸಬೇಕು ಮತ್ತು ಮುಖ್ಯ ಆಯುಕ್ತರ ಪ್ರಾಂತ್ಯಗಳ ಪ್ರತಿನಿಧಿಗಳ ಅಭಿಪ್ರಾಯಗಳನ್ನು ಆಲಿಸಬೇಕು ಎಂದು ನಾನು ಸಲಹೆ ಮಾಡುತ್ತೇನೆ. ವಾಸ್ತವವಾಗಿ, ಮಾನ್ಯರೆ, ಈ ಉಪಸಮಿತಿಯಲ್ಲಿ ಮುಖ್ಯ ಆಯುಕ್ತರ ಪ್ರಾಂತ್ಯಗಳ ಪ್ರತಿನಿಧಿಗಳಿಗೆ ಸೂಕ್ತ ಪ್ರಾತಿನಿಧ್ಯವನ್ನು ನೀಡಬೇಕು ಎಂದು ಅಭಿಪ್ರಾಯಪಟ್ಟಿರುವ ಶ್ರೀ ಪೂಣಚ್ಚ ಅವರ ಸಲಹೆಯನ್ನು ನಾನು ಹೃದಯಪೂರ್ವಕವಾಗಿ

ಬೆಂಬಲಿಸುತ್ತೇನೆ. ಯಾವುದೇ ಕಾರಣಕ್ಕೂ ಈ ಸಮಿತಿಯು, ಈ ಪ್ರಾಂತ್ಯಗಳ ಪ್ರತಿನಿಧಿಗಳ ಅಭಿಪ್ರಾಯವನ್ನು ಎಲ್ಲಿಯವರೆಗೆ ಆಲಿಸುವುದಿಲ್ಲವೋ ಅಲ್ಲಿಯವರೆಗೆ ಈ ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ಧಾರಗಳಿಗೂ ಬರಬಾರದು. ನಾನು ಆಶಿಸುತ್ತೇನೆ, ಮಾನ್ಯರೆ, ಸೆಪ್ಟೆಂಬರ್ ಅಂತ್ಯದ ಒಳಗೆ, ಸಂಪೂರ್ಣ ಪ್ರಜಾಪ್ರಭುತ್ವ ರೀತಿಯ ಹಾಗೂ ಈ ಪ್ರಾಂತ್ಯದ ಜನರಲ್ಲಿ ಸ್ವಾತಂತ್ರ್ಯ ಬರುತ್ತಿರುವ ಹೊಳವನ್ನು ನೀಡುವಂತಹ ಮತ್ತು ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ರೀತಿಯ ಸಂವಿಧಾನವನ್ನು ಈ ಉಪಸಮಿತಿಯು ಸದನಕ್ಕೆ ಶಿಫಾರಸು ಮಾಡುತ್ತದೆಂದು ನಾನು ಆಶಿಸುತ್ತೇನೆ. ಸಮಿತಿಯು ಇದುವರೆಗೆ ಮುಂದೂಡಿದಂತೆ ಈ ವಿಷಯವನ್ನೂ ಸಹ ಮುಂದೂಡಬಾರದು.

ಈ ಟಿಪ್ಪಣಿಗಳೊಂದಿಗೆ, ನಾನು ಈ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಶ್ರೀ ಬಿ. ದಾಸ್** : ಮಾನ್ಯರೆ, ನನ್ನ ಸ್ನೇಹಿತರಾದ ಶ್ರೀ ಲಾಲಾ ದೇಶಬಂಧು ಗುಪ್ತ ಅವರು ಮಂಡಿಸಿದ ನಿರ್ಣಯವನ್ನು ನಾನು ಹೃದಯಪೂರ್ವಕವಾಗಿ ಬೆಂಬಲಿಸುತ್ತೇನೆ. ಈ ಮುಖ್ಯ ಆಯುಕ್ತರ ಪ್ರಾಂತ್ಯಗಳ ಆಡಳಿತ ಗುಣಮಟ್ಟವನ್ನು ಎತ್ತರಿಸುವುದಕ್ಕೆ ಒಂದು ಸಮಿತಿ ಇರಲೇಬೇಕು ಮತ್ತು ಅಲ್ಲಿ ಇರುವ ಜನರು ನಮ್ಮಂತೆಯೇ ಸೌಕರ್ಯಗಳನ್ನು ಅನುಭವಿಸಬೇಕು.

ಅಲ್ಲಿ ತೊಂದರೆಗಳು ಇರಬಹುದೆಂಬುದನ್ನು ನಾನು ದೃಶ್ಯೀಕರಿಸಬಹುದು. ಈ ಮುಖ್ಯ ಆಯುಕ್ತರ ಪ್ರಾಂತ್ಯಗಳು ಅಸ್ತಿತ್ವಕ್ಕೆ ಬಂದಿದ್ದು ಭಾರತದಲ್ಲಿ ಬ್ರಿಟಿಷ್ ಅಧಿಕಾರ ಮತ್ತು ಬ್ರಿಟಿಷ್ ನಿರಂಕುಶಾಧಿಕಾರವನ್ನು ನಿರ್ವಹಿಸುವ ಉದ್ದೇಶದಿಂದ. ಈ ಹಿಂದಿನ ಭಾಷಣಕಾರರು ಅಜ್ಮೇರ್ – ಮೇರ್ವಾರವನ್ನು ಕುರಿತು ಮಾತನಾಡುತ್ತಿದ್ದರು. ಅಜ್ಮೇರ್ – ಮೇರ್ವಾರ ಬಹಳ ಕಾಲ ರಾಜಕೀಯ ವಿಭಾಗಗಳ ನಂದನವನವಾಗಿತ್ತು. ರಾಜಕೀಯ ವಿಭಾಗಗಳು ಈಗ ರದ್ದಾಗಿದ್ದರೂ ಕೂಡ ಆ ಪ್ರದೇಶ ಈಗಲೂ ಸಹ ರಾಜಕೀಯ ವಿಭಾಗಗಳ ನಂದನವನವಾಗಿಯೇ ಉಳಿದುಕೊಂಡಿದೆ ಮತ್ತು ಸಾರ್ವಜನಿಕ ಪ್ರತಿನಿಧಿಗಳು ಈ ವಿಷಯದಲ್ಲಿ ಹೆಚ್ಚು ಹೇಳಬೇಕಾದ್ದು ಇಲ್ಲ.

ದೆಹಲಿ, ಮಾನ್ಯರೆ, ಬ್ರಿಟಿಷ್ ನಿರಂಕುಶಾಧಿಕಾರವು ತಾನು ಬಯಸಿದ ಏನನ್ನಾದರೂ ಭಾರತ ಸರ್ಕಾರದ ಮೇಲೆ ದೆಹಲಿಯಲ್ಲಿರುವ ಮುಖ್ಯ ಆಯುಕ್ತರ ಮೂಲಕ ಮಾಡುತ್ತದೆ ಎಂಬುದನ್ನು ತೋರಿಸಿಕೊಟ್ಟಿದೆ. ಎಲ್ಲ ಕಾಲಕ್ಕೂ ಅಲ್ಲಿ ಇಂಗ್ಲಿಷ್ ಮುಖ್ಯ ಆಯುಕ್ತರಿದ್ದರು ಮತ್ತು ಅವರು ಇದೇ ಕಟ್ಟಡದ ಒಂದು ಭಾಗದಲ್ಲಿರುವ ಕೇಂದ್ರೀಯ ಸಭೆಯ ಮೇಲೆ ಮತ್ತು ಕೇಂದ್ರೀಯ ಸಭೆಯ ಏಕೈಕ ದೆಹಲಿ ಪ್ರತಿನಿಧಿಯ ಮೇಲೆ ತಾವು ಬಯಸಿದ ಏನನ್ನಾದರೂ ಮಾಡುತ್ತಿದ್ದರು. ದೆಹಲಿ ಪುರಸಭೆಯ ಆಡಳಿತವು ತುಂಬ ಪ್ರಾಚೀನವಾಗಿದೆ. ಇದು 'ಜೋ-ಹುಕುಮ್'ಗಳ ಶರೀರವಾಗಿದೆ ಮತ್ತು ಇದು ಸಲಹಾಸಮಿತಿಯನ್ನು ಆಯ್ಕೆಮಾಡುತ್ತದೆ ಹಾಗೂ ಅದು ತುಂಬ ವಿಚಿತ್ರವಾಗಿದೆ.

ಅನಂತರ, ಮಾನ್ಯರೆ, ನಾನು ಸುಮಾರು ೧೫,೦೦೦ ಜನಸಂಖ್ಯೆಯ, ರಾಜಪುತಾನ್‌ನಲ್ಲಿರುವ ಪಂತ್ ಪಿಪ್ಲೋಡಾ ವಿಷಯಕ್ಕೆ ಬರುತ್ತೇನೆ. ಇಲ್ಲಿನ ಜನರಿಗೆ ಯಾವುದಾದರೂ ಪ್ರಾತಿನಿಧ್ಯವಿದೆಯೇ? ಸಮಿತಿಯು ಈ ಕುರಿತು ವಿಚಾರಣೆ ನಡೆಸಬೇಕು; ಇದು ಅಜ್ಮೇರ್ – ಮೇರ್ವಾರದೊಂದಿಗೆ ಗುರುತಿಸಲ್ಪಡಬೇಕು ಮತ್ತು ಮುಖ್ಯ ಆಯುಕ್ತರ ಪ್ರಾಂತ್ಯ, ಗವರ್ನರ್‌ರ ಪ್ರಾಂತ್ಯ ಇಲ್ಲವೆ ಉಪಗವರ್ನರ್ ಅವರ ಪ್ರಾಂತ್ಯದ ಭಾಗವಾಗಬೇಕು.

ಅಂಡಮಾನ್ ಮತ್ತು ನಿಕೊಬಾರ್ ದ್ವೀಪಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, 'ಭಾರತದಲ್ಲಿನ ಕಪ್ಪುರಂಧ್ರದಂತಹ ಪ್ಲೇಗ್ ಕಲೆ' ಎಂದೇ ಭಾವಿಸಲಾಗಿರುವ ಇದು ಕೆಲವು ಭಾರತೀಯ ಮಾಜಿ ಕೈದಿಗಳ ವಾಸಸ್ಥಾನವಾಗಿದೆ. ನಿಕೊಬಾರ್ ದ್ವೀಪವು ಸುಮಾರು ೨೦,೦೦೦ ಮೂಲನಿವಾಸಿಗಳ ನೆಲೆಬೀಡಾಗಿದೆ. ಅವರು ತುಂಬ ಪ್ರಾಚೀನ ಸಂಪ್ರದಾಯ ಮತ್ತು ಪರಿಸ್ಥಿತಿಗಳಲ್ಲಿ ಜೀವಿಸುತ್ತಿದ್ದಾರೆ.

ಇದುವರೆಗೆ, ಅಂಡಮಾನ್ ಮತ್ತು ನಿಕೊಬಾರ್ ದ್ವೀಪವು ಯಾವಾಗಲೂ ಅಸ್ಸಾಮ್ ನಾಗರಿಕ

ಸೇವೆಯಿಂದ ನೇಮಕಗೊಂಡ ಮುಖ್ಯ ಆಯುಕ್ತರ ಆಳ್ವಿಕೆಗೆ ಒಳಪಟ್ಟಿದೆ. ವ್ಯಾಪಾರ ಉದ್ದೇಶದಿಂದ ಅಲ್ಲಿ ನೆಲೆಗೊಂಡ ಕೆಲವು ಇಂಗ್ಲಿಷ್ ಜನರು ಮತ್ತು ಆಂಗ್ಲೋ-ಇಂಡಿಯನ್ನರನ್ನು ಹೊರತುಪಡಿಸಿ ಅಲ್ಲಿನ ಇತರ ಜನರು ಜ್ಞಾನೋದಯಗೊಂಡಿಲ್ಲ. ಹಾಗಾಗಿ, ಅಸ್ಸಾಮ್‌ನ ಪ್ರಾಂತೀಯ ಶಾಸನಸಭೆಯಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪವು ಪ್ರಾತಿನಿಧ್ಯ ಪಡೆಯಬೇಕು ಮತ್ತು ನಿಕೊಬಾರ್ ದ್ವೀಪದ ಜನರು ಬುಡಕಟ್ಟು ಜನರೆಂದು ಪರಿಗಣಿಸಲ್ಪಡಬೇಕು ಮತ್ತು ಇತರ ಬುಡಕಟ್ಟು ಜನರಿಗೆ ದೊರಕುವ ವಿಶೇಷ ರಕ್ಷಣೆಯನ್ನು ಪಡೆಯುವಂತಾಗಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಬುಡಕಟ್ಟು ಜನರ ಸಲಹಾಸಮಿತಿಯು ನಿಕೊಬಾರ್ ದ್ವೀಪಗಳಿಗೆ ಭೇಟಿ ಕೊಟ್ಟಿದೆ ಮತ್ತು ಅಲ್ಲಿನ ಜನರ ಸಾಮರ್ಥ್ಯ ಮತ್ತು ದೌರ್ಬಲ್ಯ (ಮಿತಿ)ಗಳ ಬಗ್ಗೆ ವಿಚಾರಣೆ ನಡೆಸಿದೆ ಎಂದು ನಾನು ಭಾವಿಸುವುದಿಲ್ಲ.

ಕೂರ್ಗ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಇದನ್ನು ಮುಖ್ಯ ಆಯುಕ್ತರ ಪ್ರಾಂತ್ಯವನ್ನಾಗಿಸಲಾಗಿದೆ ಮತ್ತು ಮುಖ್ಯ ಆಯುಕ್ತರೇ ಅಲ್ಲಿ ಎಲ್ಲವೂ ಆಗಿದ್ದಾರೆ. ಮುಖ್ಯ ಆಯುಕ್ತರು ಎಲ್ಲ ರೀತಿಯ ಸ್ವಾತಂತ್ರ್ಯವನ್ನೂ ಹೊಂದಿದ್ದಾರೆ – ನನ್ನ ಮಾತು ಶ್ರೀ ಪೂಣಚ್ಚ ಅವರಿಂದ ಸರಿಪಡಿಸುವಿಕೆಗೆ ಒಳಪಡಬಹುದಾಗಿದೆ – ಮತ್ತು ಅವರು ನಿರಂಕುಶಾಧಿಕಾರಿ. ಕೂರ್ಗ್‌ನ ತೋಟದ ಮಾಲೀಕರು, ಬಹುತೇಕ ಬ್ರಿಟಿಷರೇ ಆಗಿದ್ದಾರೆ, ಇದನ್ನು ಬ್ರಿಟಿಷ್ ರಾಜ್ಯವೆಂದೇ ಭಾವಿಸಿದ್ದಾರೆ.

ಇವೆಲ್ಲವೂ ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತವೆ ಮತ್ತು ನಾವು ಅಖಿಲ ಭಾರತಕ್ಕೆ ಸಂವಿಧಾನವನ್ನು ರಚಿಸುತ್ತಿರುವುದರಿಂದ, ಇಲ್ಲಿನ ಜನರು ನಾವು ಹೊಂದಿರುವುದಕ್ಕೆ ಸಮಾನವಾದ ಹಕ್ಕುಗಳನ್ನು ಪಡೆಯಬೇಕು; ಆದರೆ ಇದನ್ನು ಹೇಗೆ ಹೊಂದಿಸಬೇಕು ಎಂಬುದನ್ನು ಸಮಿತಿಯೇ ನಿರ್ಧರಿಸಬೇಕು; ಆದರೆ, ಸಮಿತಿಯು ನಿಕೊಬಾರ್ ದ್ವೀಪಗಳಿಗೆ ಭೇಟಿ ಕೊಡಬೇಕು ಹಾಗೂ ಜನರ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬೇಕು. ಅದೇ ರೀತಿಯಲ್ಲಿ, ಸಮಿತಿಯು ಆ ಸ್ಥಳದ ಪ್ರತಿನಿಧಿಗಳನ್ನು ಗುರುತಿಸಬೇಕು ಎಂಬ ಶ್ರೀ ಪೂಣಚ್ಚ ಅವರ ಸಲಹೆಯನ್ನು ನಾನು ಬೆಂಬಲಿಸುತ್ತೇನೆ. ಸಮಿತಿಯು ಕೂರ್ಗ್‌ಗೆ ಭೇಟಿ ನೀಡಬೇಕು. ಹಾಗಿದ್ದಾಗ್ಯೂ, ನನ್ನ ಸ್ನೇಹಿತರಾದ ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ರಜೆಯ ಸಂದರ್ಭದಲ್ಲಿ ಕೂರ್ಗ್‌ಗೆ ಭೇಟಿ ನೀಡಿರಬಹುದು; ಆದರೆ, ನಮ್ಮಲ್ಲಿ ಕೆಲವೇ ಕೆಲವರು ಮಾತ್ರ ಕೂರ್ಗ್ ಅನ್ನು ನೋಡಿದ್ದಾರೆ ಮತ್ತು ಅಲ್ಲಿನ ನಿರಂಕುಶಾಧಿಕಾರದ ಬಗ್ಗೆ ಅರಿತಿದ್ದಾರೆ; ಆದರೆ, ಈ ಹಿಂದಿನ ಮುಖ್ಯ ಆಯುಕ್ತರುಗಳಿಂದ ಕೂರ್ಗ್‌ನ ಜನರು ಅನುಭವಿಸಿರಬಹುದಾದ ದಬ್ಬಾಳಿಕೆ ಮತ್ತು ದೌರ್ಜನ್ಯಗಳನ್ನು ನಮ್ಮಲ್ಲಿ ಯಾರು ಅರಿತಿದ್ದಾರೋ ಅವರು ಕಣ್ಣಿಗೆ ಕಟ್ಟುವಂತೆ ವಿವರಿಸಬಹುದಾಗಿದೆ.

**ಪಂಡಿತ್ ಠಾಕುರ್ ದಾಸ್ ಭಾರ್ಗವ** (ಪೂರ್ವ ಪಂಜಾಬ್ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ನಾನು ನಿರ್ಣಯವನ್ನು ಕುರಿತು ಒಂದು ನಿರ್ದಿಷ್ಟ ದೃಷ್ಟಿಕೋನದೊಂದಿಗೆ ಕೆಲವು ಮಾತುಗಳನ್ನು ಆಡಬಯಸುತ್ತೇನೆ. ನನಗೆ ಅಜ್ಮೀರ್ – ಮೇರ್ವಾರ ಮತ್ತು ಇತರ ಮುಖ್ಯ ಆಯುಕ್ತರ ಪ್ರಾಂತ್ಯಗಳಲ್ಲಿನ ಜನರ ಬಗ್ಗೆ ಬಹಳ ಕನಿಕರವಿದೆ. ಅದರಲ್ಲೂ ದೆಹಲಿಯ ಬಗ್ಗೆ ಇನ್ನಷ್ಟು ಹೆಚ್ಚು ಕನಿಕರವಿದೆ; ಏಕೆಂದರೆ, ದೆಹಲಿ ಮತ್ತು ನನ್ನ ಕ್ಷೇತ್ರದ ನಡುವೆ ಸಾಕಷ್ಟು ಸಾಮ್ಯತೆಯಿದೆ. ವಾಸ್ತವ ವಿಷಯದ ಪ್ರಕಾರ, ೧೯೧೨ಕ್ಕಿಂತ ಮೊದಲು ದೆಹಲಿಯು ಭಾರತದ ರಾಜಧಾನಿಯಾದಾಗ ಅದು ಪಂಜಾಬ್‌ನ ಅಂಬಾಲ ವಿಭಾಗದ ಒಂದು ಭಾಗವಾಗಿತ್ತು. ಈಗಲೂ ಸಹ ಬಲ್ಲಬ್‌ಗರ್, ಸೋನೆಪಟ್ ಮತ್ತು ಪಲ್ವಾಲಗಳು ರೋಹ್‌ಟಕ್ ಜಿಲ್ಲೆಯೊಂದಿಗೆ ಸೇರಿಸಲ್ಪಟ್ಟಿವೆ ಮತ್ತು ಪೂರ್ವಪಂಜಾಬ್‌ನ ಭಾಗಗಳು ದೆಹಲಿಯೊಂದಿಗೆ ಸೇರಿಸಲ್ಪಟ್ಟಿವೆ. ಒಂದು ವಿಭಾಗವನ್ನು ಮತ್ತೊಂದು ವಿಭಾಗದೊಂದಿಗೆ ಸಮ್ಮಿಲನಗೊಳಿಸುವುದಕ್ಕೆ ಅಗತ್ಯವೆಂದು ಪರಿಗಣಿಸಲಾದ ಸಾಮಾಜಿಕ-ಆರ್ಥಿಕ ಸಮರೂಪತೆಗಳು ದೆಹಲಿ ಮತ್ತು ಪೂರ್ವಪಂಜಾಬ್‌ನ ಹಳ್ಳಿಗಳ ನಡುವೆ ಇವೆ. ಈ ಎಲ್ಲ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಮುಖ್ಯ ಆಯುಕ್ತರ ಪ್ರಾಂತ್ಯಗಳಲ್ಲಿ ಸೇರ್ಪಡೆ ಮಾಡಲಾಗಿರುವ

ದೆಹಲಿಯ ಈ ಭಾಗವು, ವಾಸ್ತವವಾಗಿ ಅಂಬಾಲ ವಿಭಾಗದ ಪ್ರಮುಖ ಭಾಗವಾಗಿದೆ ಮತ್ತು ಇದನ್ನು ಗವರ್ನರ್ ಅವರ ಪ್ರಾಂತ್ಯದಲ್ಲಿ ಸಮ್ಮಿಲನಗೊಳಿಸುವ ಯತ್ನ ಬಹಳ ಕಾಲದಿಂದ ನಡೆಯುತ್ತಿದೆ.

ನಿರ್ಣಯವೊಂದು ಸದ್ಯದಲ್ಲಿಯೇ ಸದನದ ಮುಂದೆ ಬರುವುದರಲ್ಲಿದೆ; ಸಾಂಸ್ಕೃತಿಕ ಮತ್ತು ಭಾಷೆಯ ಆಧಾರದ ಮೇಲೆ ಪ್ರಾಂತ್ಯಗಳನ್ನು ಮರುಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದ ಪ್ರಶ್ನೆಯು ಇದರಲ್ಲಿ ಚರ್ಚೆಯಾಗಲಿದೆ ಮತ್ತು ಅದಕ್ಕಿಂತ ಮೊದಲು ಇತರ ಅನೇಕ ಮಹತ್ತ್ವದ ವಿಷಯಗಳು ಚರ್ಚೆಯಾಗಲಿವೆ. ಈಗ ಈ ವಿಷಯವನ್ನು ಬಹಳ ಪ್ರಮುಖವಾದುದೆಂದು ಪರಿಗಣಿಸಬಹುದಾಗಿದೆ. ಅಜ್ಮೇರ್ – ಮೇರ್ವಾರ ಹಾಗೂ ದೆಹಲಿಯ ಚದುರಿ ಹೋಗಿರುವ ಒಂದೇ ಬಗೆಯ ಪ್ರದೇಶಗಳನ್ನು ಒಂದೇ ಪ್ರಾಂತ್ಯವಾಗಿ ಸಮ್ಮಿಲನಗೊಳಿಸಬೇಕು; ಏಕೆಂದರೆ, ಅವು ಒಂದೇ ಭಾಷೆಯನ್ನು ಮಾತನಾಡುತ್ತವೆ ಹಾಗೂ ಅಲ್ಲಿನ ಜೀವನ ಶೈಲಿ ಒಂದೇ ಆಗಿದೆ ಎಂಬ ಬೇಡಿಕೆಯ ಅಸಂಖ್ಯಾತ ಸಂಖ್ಯೆಯ ಸಮ್ಮೇಳನಗಳು ಪಂಜಾಬ್ ಹಾಗೂ ಯು.ಪಿ.ಯಲ್ಲಿ ನಡೆದಿವೆ; ಒಂದು ವೇಳೆ ಸಾವಯವ ರೂಪದಿಂದ ಒಂದಾಗಿರುವ ಪೂರ್ವಪಂಜಾಬನ್ನು ಸದಾ ಕಾಲಕ್ಕೆ ಪ್ರತ್ಯೇಕಿಸುವ ಉದ್ದೇಶವನ್ನು ಇದು ಹೊಂದಿದ್ದರೆ, ನಾನು ಈ ನಿರ್ಣಯವನ್ನು ವಿರೋಧಿಸುತ್ತೇನೆ. ನನ್ನ ಅಪೇಕ್ಷೆಯೇನೆಂದರೆ, ಭಾರತದ ಸ್ವಾತಂತ್ರ್ಯದ ಎಲ್ಲ ಪ್ರಮುಖ ಪ್ರಶ್ನೆಗಳನ್ನು ಇತ್ಯರ್ಥಗೊಳಿಸಿದ ಅನಂತರ ನಾವು ಕೆಲವು ಪ್ರಾಂತ್ಯಗಳನ್ನು ರಚಿಸಲು ಸಮರ್ಥರಾಗಬಹುದು; ಅಲ್ಲಿಯ ತನಕ ಈ ವಿಷಯದ ಮೇಲೆ ಯಾವುದೇ ಅಂತಿಮ ನಿರ್ಧಾರ ತೆಗೆದುಕೊಳ್ಳಬಾರದು.

ಮುಖ್ಯ ಆಯುಕ್ತರ ಪ್ರಾಂತ್ಯಗಳ ಸಂವಿಧಾನದ ವಿಷಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನಾನು ಇದನ್ನು ವಿರೋಧಿಸುವುದಿಲ್ಲ. ನಾನು ಒತ್ತಾಯಿಸುವುದಿಷ್ಟೇ, ಮುಖ್ಯ ಆಯುಕ್ತರ ಪ್ರಾಂತ್ಯಗಳೂ ಸಹ ತಮ್ಮ ಹಕ್ಕುಗಳನ್ನು ಪಡೆಯಬೇಕು. ಭಾರತದ ಇತರ ಪ್ರದೇಶಗಳು ಪ್ರಜಾಪ್ರಭುತ್ವ ಸಂವಿಧಾನವನ್ನು ಪಡೆಯುತ್ತಿರುವಾಗ, ಅವುಗಳಿಗೂ ಸಹ ಇದೇ ರೀತಿಯ ಹಕ್ಕುಗಳನ್ನು ಶಾಸನಬದ್ಧವಾಗಿ ನೀಡಬೇಕು. ನಾನು ಇದನ್ನು ವಿರೋಧಿಸುತ್ತಿಲ್ಲ; ದೆಹಲಿಯ ಈ ಭಾಗಗಳಿಗೆ ಸಂಬಂಧಿಸಿದಂತೆ ಕೇಂದ್ರ ಶಾಸನಸಭೆಯಲ್ಲಿ ನಾನು ಸದಾ ಪ್ರಶ್ನೆಗಳನ್ನು ಹಾಕುತ್ತಿರುತ್ತೇನೆ. ಅವು ನಮ್ಮ ಸ್ವಂತ ಭಾಗ ಮತ್ತು ಪಾಲು. ಅವುಗಳ ಬಗ್ಗೆ ನನಗೆ ಎಲ್ಲ ರೀತಿಯ ಅನುಕಂಪವಿದೆ ಮತ್ತು ಅವನ್ನು ಪ್ರಾಂತ್ಯಗಳ ಪಟ್ಟಿಯಿಂದ ಹೊರತಾಗಿಸಬೇಕೆಂದು ನಾನು ಬಯಸುತ್ತೇನೆ. ಸಾಂಸ್ಕೃತಿಕ ಮತ್ತು ಭಾಷೆಗಳ ಆಧಾರದ ಮೇಲೆ ಪ್ರಾಂತ್ಯಗಳ ಮರುಹಂಚಿಕೆಯನ್ನು ಕುರಿತಾದ ಡಾ. ಪಟ್ಟಾಭಿಯವರ ಯೋಜನೆಯು ಅಖಂಡವಾಗಿ ಉಳಿಯಬೇಕೆಂದು ನಾನು ಬಯಸುತ್ತೇನೆ. ಈ ಪ್ರಶ್ನೆಯು ಈಗ ಅಂತಿಮವಾಗಿ ನಿರ್ಧಾರವಾಗಬೇಕು. ಈ ಪ್ರಶ್ನೆ, ವಿಷಯವು ಸ್ವಂತ ಯೋಗ್ಯತೆಯ ಮೇಲೆ ನಿರ್ಧಾರವಾಗಬೇಕು. ಈ ವಿಷಯವನ್ನು ಸಮಿತಿಗೆ ಸೂಚಿಸಿದರೆ ನನ್ನ ಅಭ್ಯಂತರವೇನೂ ಇಲ್ಲ. ಇದು ಮಾರ್ಪಡಿಸಲಾಗದ ರೀತಿಯಲ್ಲಿ ನಿರ್ಧಾರವಾಗಬೇಕೆಂಬುದು ನನ್ನ ಉದ್ದೇಶವಲ್ಲ. ಈ ಶಬ್ದಗಳೊಂದಿಗೆ ನಾನು ಈ ನಿರ್ಣಯವನ್ನು ಬೆಂಬಲಿಸುತ್ತೇನೆ.]*

**ಗೌರವಾನ್ವಿತ ಶ್ರೀ ಜೈಪಾಲ್ ಸಿಂಗ್** (ಬಿಹಾರ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಮುಖ್ಯ ಆಯುಕ್ತರ ಪ್ರಾಂತ್ಯದ ಮುಂದಿನ ಸ್ಥಾನಮಾನದ ಬಗ್ಗೆ ನೋಡಿಕೊಳ್ಳಲು ಉಪಸಮಿತಿಯನ್ನು ನೇಮಕಮಾಡಬೇಕೆಂಬ ಸಲಹೆಯನ್ನು ನಾನು ಸ್ವಾಗತಿಸುತ್ತೇನೆ. ಈ ಪ್ರಾಂತ್ಯಗಳಲ್ಲಿ ಕೆಲವು ಮಿತಿಮೀರಿದ ಪ್ರಮಾಣದಲ್ಲಿ ಬುಡಕಟ್ಟು ಜನರಿಂದ ಕೂಡಿವೆ–ಅದರಲ್ಲೂ ಮುಖ್ಯವಾಗಿ ಅಂಡಮಾನ್ ಮತ್ತು ನಿಕೊಬಾರ್ ದ್ವೀಪಗಳಲ್ಲಿ–ಎಂಬ ಅಂಶದ ಬಗ್ಗೆ ನನ್ನ ವಿಶೇಷ ಆಸಕ್ತಿಯಿದೆ. ಆದಿವಾಸಿ ಪ್ರದೇಶಗಳ – ಆರು ಸಂಪೂರ್ಣ ಹೊರತಾದ ಮತ್ತು ೧೮ ಭಾಗಶಃ ಹೊರತಾದ ಪ್ರದೇಶಗಳು – ಪ್ರಶ್ನೆಯನ್ನು ಇತ್ಯರ್ಥಪಡಿಸುವುದಕ್ಕಾಗಿ ಸಂವಿಧಾನ ರಚನಾಸಭೆಯಿಂದ ನೇಮಕಗೊಂಡ ಎರಡು ಉಪಸಮಿತಿಗಳನ್ನು ಕುರಿತು ಕೆಲವು ಉಲ್ಲೇಖಗಳಿವೆ. ಇಲ್ಲಿ ವ್ಯಕ್ತಪಡಿಸಲಾದ ಅರ್ಥದಲ್ಲಿ ಮಾತ್ರ ಈ ಎರಡು ಉಪಸಮಿತಿಗಳು ಕಾರ್ಯನಿರ್ವಹಿಸುತ್ತವೆಯೇ ಎಂಬ ಬಗ್ಗೆ ಇಲ್ಲಿ

ಸ್ಪಷ್ಟವಾಗಬೇಕಿದೆ; ಅಂದರೆ, ಅವು ಆದಿವಾಸಿ ಪ್ರದೇಶಗಳು, ಸಂಪೂರ್ಣ ಹೊರತಾದ ಪ್ರದೇಶ ಹಾಗೂ ಭಾಗಶಃ ಹೊರತಾದ ಪ್ರದೇಶಗಳನ್ನು ಬಿಟ್ಟು ಬೇರೆ ಯಾವುದನ್ನೂ ಪರಿಶೀಲಿಸುವುದಿಲ್ಲವೇ? ನನ್ನ ಪ್ರಕಾರ, ಇದು ಸಮಿತಿಯು ಕಾರ್ಯ ಆರಂಭಿಸುವ ವಿಧಾನ; ಆದರೆ, ಈಗ, ಈ ಶಬ್ದಗಳಿಗೆ ಹೆಚ್ಚು ಧಾರಾಳವಾದ ಭಾಷ್ಯವನ್ನು ಹಾಕಲಾಗಿದೆ. ಬುಡಕಟ್ಟು ಪ್ರದೇಶಗಳೆಂದು ಕರೆಯಲಾಗುವ ಸ್ಥಳಗಳ ಹೊರಗಿನ ಬುಡಕಟ್ಟುಗಳಿಗೂ ಸಹ ಅವು ಈಗ ಶಿಫಾರಸುಗಳನ್ನು ಮಾಡಬಹುದಾಗಿದೆ. ಒಂದು ವೇಳೆ ಅದು ಹಾಗಾದರೆ, ಮಾನ್ಯರೇ, ಎರಡೂ ಉಪಸಮಿತಿಗಳು, ನನಗನ್ನಿಸುತ್ತದೆ, ಈ ತಿದ್ದುಪಡಿಯ ಮಂಡನೆಕಾರರು ಸಲಹೆ ಮಾಡಿದ ಉಪಸಮಿತಿಯು ಮಾಡಬಹುದಾದ ಕೆಲಸಗಳಲ್ಲಿ ಸಮಾನ ಆಸಕ್ತಿಯನ್ನು ಹೊಂದಿವೆ. ನನ್ನ ಸಲಹೆ ಏನೆಂದರೆ, ಈಗಿರುವ ಬುಡಕಟ್ಟು ಉಪಸಮಿತಿಗಳ ಕೆಲವು ಸದಸ್ಯರನ್ನು ಮುಖ್ಯ ಆಯುಕ್ತರ ಪ್ರಾಂತ್ಯಗಳಿಗೆ ಹೋಗಿ ತಪಾಸಣೆ ನಡೆಸಲಿರುವ ಉಪಸಮಿತಿಯಲ್ಲಿ ಸೇರ್ಪಡೆ ಮಾಡಬೇಕು; ಏಕೆಂದರೆ, ಬುಡಕಟ್ಟು ವಿಷಯದಲ್ಲಿ ವ್ಯವಹರಿಸುವುದೇ ಮುಖ್ಯ ಸಮಸ್ಯೆಯಾಗಿರುವ ಕೆಲವು ಪ್ರಾಂತ್ಯಗಳೂ ಸಹ ಇವೆ. ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನು ಈಗ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ. ಇದು ಮಂಡನೆಕಾರರಿಂದ ಅಂಗೀಕರಿಸಲ್ಪಟ್ಟಿದೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

## ಭಾಗ ೮ – ಖಂಡ ೨

**ಮಾನ್ಯ ಸಭಾಧ್ಯಕ್ಷರು :** ನಾವು ಈಗ ಖಂಡ ೨ನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ನಾನು ಇದನ್ನು ಈಗಾಗಲೇ ಮಂಡಿಸಿದ್ದೇನೆ.

**ಶ್ರೀ ಕೆ. ಸಂತಾನಮ್ :** ಒಂದು ಕ್ರಿಯಾಲೋಪ, ಮಾನ್ಯರೆ, ಬುಡಕಟ್ಟುಸಮಿತಿಯು ಇದುವರೆಗೂ ವರದಿಯನ್ನು ಸಲ್ಲಿಸಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಆದರೆ ಅದು ನಮ್ಮ ಮುಂದಿರುವ ಯೋಜನೆಯಾಗಿದೆ. ಈ ಖಂಡದ ಮೇಲೆ ಯಾರಾದರೂ ಮಾತನಾಡುವವರಿದ್ದೀರಾ?

**ಗೌರವಾನ್ವಿತ ಶ್ರೀ ಜೈಪಾಲ್ ಸಿಂಗ್ :** ನನಗೆ ಕೆಲವೇ ಕೆಲವು ಮಾತುಗಳನ್ನು ಹೇಳುವುದಿದೆ ಮತ್ತು ಮುಂದೊಂದು ದಿನ ಈ ದೇಶದಲ್ಲಿ ಬಹಳ ಗಂಭೀರ ಮತ್ತು ಅಪಾಯಕಾರಿಯಾಗಬಹುದಾದ ಪರಿಸ್ಥಿತಿಯನ್ನು ನಿವಾರಿಸಬೇಕಾದ ಉದ್ದೇಶದಿಂದ ಇವನ್ನು ಹೇಳಬೇಕಾಗಿದೆ ಎಂದು ನಾನು ಭಾವಿಸುತ್ತೇನೆ. ನಾನು ಅದನ್ನು ಹೇಳುವುದಕ್ಕಿಂತ ಮೊದಲು, ನಾನು ಕೆಲವು ನಿಮಿಷಗಳಿಗೆ ಮೊದಲು ಹೇಳಿದ್ದನ್ನೇ, ಅಂದರೆ, ಬುಡಕಟ್ಟು ಪ್ರದೇಶವೆಂದು ಗುರುತಿಸಲಾಗಿರುವ ಸ್ಥಳಗಳಿಗಿಂತ ಹೊರಗಿರುವ ಬುಡಕಟ್ಟುಗಳ ಸಮಸ್ಯೆಯನ್ನೂ ಬುಡಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಸೇರ್ಪಡೆ ಮಾಡಬೇಕು ಎಂಬುದನ್ನು ಪುನರುಚ್ಚರಿಸಬಯಸುತ್ತೇನೆ.

ಮಾನ್ಯರೆ, ಅಸ್ಸಾಮ್‌ನ ಗವರ್ನರ್ ಆದ ಸರ್ ಅಕ್ಬರ್ ಹೈದರಿಯವರು ನಾಗಾ ಬೆಟ್ಟಗಳಿಗೆ ಜೂನ್ ೨೬ರಿಂದ ಜುಲೈ ೨ರ ನಡುವೆ ಭೇಟಿ ನೀಡಿದ್ದರು. ಆಗ ಕೆಲವು ಅಸಂತೋಷದ ಬೆಳವಣಿಗೆಗಳು ನಾಗಾ ಬೆಟ್ಟಗಳಲ್ಲಿ ನಡೆದುಹೋದವು. ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಗಳನ್ನು ಸದಸ್ಯರು ಓದಿರಬಹುದು ಮತ್ತು ಮಧ್ಯಂತರ ಸರ್ಕಾರದ ಅನೇಕ ಸದಸ್ಯರು ಮತ್ತು ನಾನು, ನೀವೂ ಕೂಡ, ಅರ್ಥಮಾಡಿಕೊಂಡಿದ್ದೇವೆ, ಮಾನ್ಯರೆ, ಕೆಲವು ನಾಗಾಗಳಿಂದ ಅವರು ಏನನ್ನು ಮಾಡಲು ಉದ್ದೇಶಿಸಿದ್ದಾರೆ ಎಂಬುದರ ಬಗ್ಗೆ ತಂತಿ

ಸಂದೇಶವನ್ನು ಸ್ವೀಕರಿಸಿದ್ದೇವೆ. ನನ್ನ ಬಗ್ಗೆಯೇ ಹೇಳುವುದಾದರೆ, ಸರಾಸರಿಯಾಗಿ ದಿನಕ್ಕೊಂದು ತಂತಿ ಸಂದೇಶವನ್ನು ಸ್ವೀಕರಿಸುತ್ತಿದ್ದೇನೆ; ಇತ್ತೀಚಿನ ತಂತಿ ಸಂದೇಶವು ಹಿಂದಿನದಕ್ಕಿಂತ ಹೆಚ್ಚು ಗಾಬರಿಗೊಳಿಸುವಂತಹುದಾಗಿದೆ. ಪ್ರತಿಯೊಂದೂ ಕೂಡ ಕ್ರೂರತೆಯ ಕಡೆಗೆ ಒಂದೊಂದೇ ಹೆಜ್ಜೆಯನ್ನು ಇಡುತ್ತಿರುವಂತಿದೆ. ಪರಿಸ್ಥಿತಿಯು, ವಿವರಿಸುವುದಕ್ಕೆ ಒಂದು ವೇಳೆ ನನಗೆ ನಿಮ್ಮ ಅನುಮತಿ ಇದೆ ಎನ್ನುವುದಾದರೆ, ಮಾನ್ಯರೆ, ಅದು ಹೀಗಿದೆ. ಕೆಲವು ವ್ಯಕ್ತಿಗಳು ನಾಗಾಗಳನ್ನು ವೈಚಾರಿಕವಾಗಿ ದಾರಿ ತಪ್ಪಿಸುತ್ತಿದ್ದಾರೆ. ಬ್ರಿಟಿಷ್ ಆಡಳಿತದ ಹಿಂಪಡೆಯುವಿಕೆಯಿಂದ ದೇಶವು ಅವರನ್ನು ಹಿಂದಕ್ಕೆ ದೂಡುತ್ತಿದೆ ಎಂಬ ವಿಚಾರವನ್ನು ಅವರ ಮನಸ್ಸಿನಲ್ಲಿ ತುಂಬುತ್ತಿದ್ದಾರೆ. ಆ ರಾಜ್ಯಕ್ಕೆ ನೀಡಲಾದ ಶ್ರೇಷ್ಠತೆಯು ಹೊರಟುಹೋಗುತ್ತದೆ; ಆ ಮೂಲಕ ತಾವು ಹಳೆಯ ರಾಜ್ಯದ ಸ್ಥಿತಿಯಲ್ಲಿಯೇ ಉಳಿಯಬೇಕಾಗುತ್ತದೆ; ಆದ್ದರಿಂದ ತಾವು ಏನನ್ನು ಬಯಸುತ್ತೇವೆಯೋ ಅದನ್ನೇ ಮಾಡುವಂತಾಗಬೇಕು ಎಂದು ಅವರು ಭಾವಿಸುತ್ತಿದ್ದಾರೆ. ವಾಸ್ತವವಾಗಿ ನಾಗಾ ಬೆಟ್ಟಗಳು ಯಾವತ್ತೂ ಭಾರತದ ಭಾಗವಾಗಿದೆಯೇ ವಿನಾ ಯಾವತ್ತೂ ಒಂದು ರಾಷ್ಟ್ರದ ರೀತಿಯಲ್ಲಿಲ್ಲ, ಯಾರೂ ಅದನ್ನು ಆ ದೃಷ್ಟಿಯಿಂದ ನೋಡಿಲ್ಲ, ಹಾಗೆ ಗುರುತಿಸಿಲ್ಲ. ಇದಕ್ಕೆ ವಿರೋಧಾತ್ಮಕವಾಗಿ, ದಿನಗಳು ಸರಿಯುತ್ತಿದ್ದಂತೆ ನಾಗಾಗಳಲ್ಲಿ ಹೆಚ್ಚು ಹೆಚ್ಚು ತಪ್ಪುಕಲ್ಪನೆಗಳನ್ನು ಬೆಳೆಸಿ ಅವರನ್ನು ದಾರಿ ತಪ್ಪಿಸಲಾಗುತ್ತಿದೆ ಮತ್ತು ನಾಗಾ ಬೆಟ್ಟಗಳು ಅವರಿಗೇ ಸೇರಿದ್ದು ಹಾಗೂ ಅವು ಎಂದಿಗೂ ಭಾರತದ ಭಾಗವಾಗಿರಲಿಲ್ಲ ಹಾಗೂ ಮುಂದೆಯೂ ಸಹ ಹಾಗಾಗಬಾರದು ಮತ್ತು ಭಾರತ ದೇಶವು ಅಸ್ತಿತ್ವಕ್ಕೆ ಬರುತ್ತಿದ್ದಂತೆಯೇ, ನಾಗಾ ಬೆಟ್ಟಗಳು ನಾಗಾಗಳ ಪ್ರತ್ಯೇಕ ಆಸ್ತಿಯಾಗಬೇಕು ಎಂಬ ಭಾವನೆಯನ್ನು ಅವರಲ್ಲಿ ಬಿತ್ತಲಾಗುತ್ತಿದೆ. ಮಾನ್ಯರೆ, ನಾಗಾ ಬೆಟ್ಟದ ಕೆಲವು ನಾಯಕರುಗಳು ಇತ್ತೀಚೆಗೆ ದೆಹಲಿಗೆ ಆಗಮಿಸಿದ್ದರು ಮತ್ತು ಮಧ್ಯಂತರ ಸರ್ಕಾರದ ಕೆಲವು ಪ್ರಮುಖ ಸದಸ್ಯರನ್ನು ಭೇಟಿ ಮಾಡಿದ್ದಾರೆ. ಅವರೊಂದಿಗೆ ಸಂಪರ್ಕಕ್ಕೆ ಬಂದ ನಮ್ಮವರು ಅವರಿಗೆ ನಿರ್ಭಿಡೆಯ ಸತ್ಯಾಂಶವನ್ನು ತಿಳಿಸಿದ್ದಾರೆ. (ಅಡಚಣೆ). ನನ್ನ ಅಪೇಕ್ಷೆ ಕೇವಲ ಏನೆಂದರೆ, ನಾನು ಹೇಳುವುದು, ದೂರದ ನಾಗಾ ಬೆಟ್ಟಗಳಿಗೆ ಹೋಗಬೇಕು ಮತ್ತು ಅಲ್ಲಿ ಪ್ರತಿಧ್ವನಿಸಬೇಕು. ಆಗಿನ ಸರ್ಕಾರದ ಜೂನ್ ೩ರ ಯೋಜನೆಯಂತೆ ಅದು ಪ್ರತ್ಯೇಕ ರಾಷ್ಟ್ರದ ರೀತಿಯಲ್ಲಿ ತನಗೆ ಹೇಗೆ ಅನ್ನಿಸುತ್ತದೆಯೋ ಹಾಗೆ ಮಾಡಬಹುದಾಗಿದೆ ಎಂದು ಕೆಲವು ಆಸಕ್ತ ವ್ಯಕ್ತಿಗಳು ತಪ್ಪು ಅಭಿಪ್ರಾಯವನ್ನು ಅಲ್ಲಿನ ಜನರಲ್ಲಿ ಬಿತ್ತುತ್ತಿದ್ದಾರೆ. ನಾನು ಹೇಳ ಹೊರಟಿರುವುದು ಇಷ್ಟೇ, ಏಕೆಂದರೆ ನನ್ನ ಭಾವನೆ ಇಷ್ಟೇ, ಈ ಸಭೆಯ ವೇದಿಕೆಯಿಂದ ಈ ಬಗ್ಗೆ ಯಾವುದೋ ಒಂದು ನಿರ್ದಿಷ್ಟ ಹೇಳಿಕೆ ನೀಡುವುದು ಅನಿವಾರ್ಯವಾಗಿದೆ. ಹಂಗಾಮಿ ಸರ್ಕಾರದ ಸದಸ್ಯರೊಬ್ಬರಿಗೆ ಕಳುಹಿಸಲಾದ ತಂತಿ ಸಂದೇಶವೊಂದು ಸಂವಿಧಾನ ರಚನಾಸಭೆಯ ಅಂಗಳಕ್ಕೆ ಬಂದಿದ್ದು ಅದು ಹೀಗೆ ಹೇಳುತ್ತದೆ – "ಒಕ್ಕೂಟವನ್ನು ಸೇರುವಂತೆ ನೀಡಲಾದ ಪ್ರಸ್ತಾವವು ನಾಗಾಗಳಿಂದ ತಿರಸ್ಕರಿಸಲ್ಪಟ್ಟಿದೆ." ವಾಸ್ತವಾಂಶವೆಂದರೆ, ಇಲ್ಲಿ ಪ್ರಸ್ತಾವದ ಪ್ರಶ್ನೆಯೇ ಬರುವುದಿಲ್ಲ. ಜೊತೆಯಲ್ಲಿಯೇ, ಪ್ರಸ್ತಾವವು ಅನಾವಶ್ಯಕ ಮತ್ತು ಅಪ್ರಾಸಂಗಿಕ; ಏಕೆಂದರೆ, ನಾಗಾ ಬೆಟ್ಟಗಳು ಯಾವತ್ತೂ ಭಾರತದ ಭಾಗವೇ ಆಗಿವೆ. ಆದ್ದರಿಂದ, ಇಲ್ಲಿ ವಿಯೋಜನೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅವು ಭಾರತೀಯ ರಾಜ್ಯವಲ್ಲ.

ಅಲ್ಲಿ ಸಂಚುಮಾಡಲಾಗುತ್ತಿರುವ ತೊಂದರೆಗಳು, ಈ ಸಭೆಯ ವೇದಿಕೆಯಿಂದ ನಿರ್ದಿಷ್ಟ ಹೇಳಿಕೆ ನೀಡುವುದರಿಂದ ನಿವಾರಣೆಯಾಗಬಹುದು ಎಂದು ನಾನು ಭಾವಿಸುತ್ತೇನೆ. ನಿಸ್ಸಂದಿಗ್ಧವಾದ ನಿಜಾಂಶವೆಂದರೆ, ನಾಗಾ ಬೆಟ್ಟಗಳು ಭಾರತದ ಭಾಗಗಳು ಮತ್ತು ಅವು ಯಾವತ್ತೂ ಬೇರೆಯಲ್ಲ.

**ಶ್ರೀ ವಿ. ಐ. ಮುನಿಸ್ವಾಮಿ ಪಿಳ್ಳೈ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಮೂಲನಿವಾಸಿಗಳ ರಕ್ಷಣೆಗೆ ಸಂಬಂಧಿಸಿದಂತೆ ತಿದ್ದುಪಡಿಯೊಂದಕ್ಕೆ ನಾನು ಸೂಚನೆ ನೀಡಿದ್ದೆ. ಆದರೆ, ಸಿ.ಎ.ಯ ಮುಂದೆ ಬರಬಹುದಾದ ಯಾವುದೇ ಯೋಜನೆಯು ಸಲಹಾಸಮಿತಿಯ ವರದಿಯ ಮೇಲಿರಬೇಕು ಎಂದು ಸೂಚನೆಯಲ್ಲಿ ತಿಳಿಸಲಾಗಿದೆ. ಬುಡಕಟ್ಟು ಪ್ರದೇಶ ಅಥವಾ ವಿವಿಧ ಪ್ರಾಂತ್ಯಗಳಲ್ಲಿ ಹಂಚಿಹೋಗಿರುವ ಪ್ರದೇಶದಲ್ಲಿ ವಾಸಿಸುತ್ತಿರುವ

ಮೂಲನಿವಾಸಿ ಬುಡಕಟ್ಟು ಜನರಿಗೆ ಸಂಬಂಧಿಸಿದಂತೆ ಸಲಹಾಸಮಿತಿಯು ಇದುವರೆಗೂ ವರದಿಯನ್ನು ಸಲ್ಲಿಸಿಲ್ಲ. ಆ ವರದಿಯು ಬರುವವರೆಗೆ, ನಾನು ಈ ತಿದ್ದುಪಡಿಯನ್ನು ಮಂಡಿಸಲು ಬಯಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಇದರ ನಿಜವಾದ ಅರ್ಥವೇನೆಂದರೆ, ಯಾವುದೇ ಯೋಜನೆಗೆ ಅವಕಾಶ ಕಲ್ಪಿಸುವುದಕ್ಕೆ ಮುನ್ನ ಉಪಸಮಿತಿಯ ವರದಿಯನ್ನು ಪರಿಗಣಿಸಬೇಕಾಗುತ್ತದೆ. ಇಂತಹ ಖಂಡಗಳಲ್ಲಿ ಅಭಿಪ್ರಾಯ ಭೇದ ಇರುತ್ತದೆಂದು ನಾನು ಭಾವಿಸುವುದಿಲ್ಲ. ಆದ್ದರಿಂದ ಇದನ್ನು ನಾನು ಮತಕ್ಕೆ ಹಾಕುತ್ತೇನೆ.

ಖಂಡ ೨ ಅಂಗೀಕಾರವಾಯಿತು.

**ಮಾನ್ಯ ಸಭಾಧ್ಯಕ್ಷರು** : ಇಲ್ಲಿ ನಾನು ಏನು ಹೇಳಬಹುದೆಂದರೆ, ಒಂದು ವೇಳೆ ಯಾವುದಾದರೂ ತಿದ್ದುಪಡಿಗಳಿದ್ದರೆ, ವರದಿಯು ಸದನದ ಮುಂದೆ ಬಂದ ಅನಂತರ ಅವನ್ನು ಪರಿಗಣಿಸಲಾಗುವುದು.

**ಶ್ರೀ ಕೆ. ಸಂತಾನಮ್** : ಮಾನ್ಯರೆ, ನನ್ನ ಬಳಿ ಒಂದು ತಿದ್ದುಪಡಿಯಿದ್ದು ಅದು ಹೀಗೆ ಇದೆ :

"ಭಾಗ ೮ರ ಅನಂತರ ಈ ಕೆಳಗಿನ ಹೊಸ ಭಾಗವನ್ನು ಸೇರಿಸಬೇಕು:

**ಭಾಗ ೮ಎ–ತುರ್ತುಪರಿಸ್ಥಿತಿಯ ಅಧಿಕಾರಗಳು**

'೧. ಒಂದು ವೇಳೆ, ಯಾವುದೇ ಸಂದರ್ಭದಲ್ಲಿ, ಪ್ರಾಂತ್ಯದ ಸರ್ಕಾರವು ಈ ಸಂವಿಧಾನದಲ್ಲಿನ ಉಪಬಂಧಗಳ ಪ್ರಕಾರ ಆಡಳಿತ ನಡೆಸಲಾಗದಂತಹ ಪರಿಸ್ಥಿತಿಯು ನಿರ್ಮಾಣವಾಗಿದೆ ಎಂದು ಪ್ರಾಂತ್ಯದ ಗವರ್ನರ್ ಅವರಿಗೆ ಖಾತರಿಯಾದರೆ ಮತ್ತು ಅವರು ಒಕ್ಕೂಟದ ರಾಷ್ಟ್ರಪತಿಯವರಿಗೆ ಹಾಗೆಯೇ ವರದಿ ಸಲ್ಲಿಸಿದರೆ ಅಥವಾ ಪ್ರಾಂತ್ಯದಲ್ಲಿನ ಸಾಮಾನ್ಯ ಸರ್ಕಾರದ ಆಡಳಿತವು ಕುಸಿದುಬಿದ್ದಿದೆ ಎಂದು ರಾಷ್ಟ್ರಪತಿಯವರಿಗೆ ದೃಢಪಟ್ಟರೆ, ಅವರು ತೆಗೆದುಕೊಳ್ಳಲು ಆವಶ್ಯಕವೆಂದು ಭಾವಿಸುವ ಕ್ರಮಗಳು ಈ ಮುಂದಿನದನ್ನು ಒಳಗೊಂಡಿದೆ... (೧) ಪ್ರಾಂತೀಯ ಸಂವಿಧಾನವನ್ನು ವಜಾಗೊಳಿಸುವುದು (೨) ಪ್ರಾಂತ್ಯಗಳಿಗೆ ಅನ್ವಯವಾಗುವ ವಿಶೇಷ ಆಜ್ಞೆಯನ್ನು ಘೋಷಿಸುವುದು ಮತ್ತು (೩) ಪ್ರಾಂತ್ಯದ ಗವರ್ನರ್ ಮತ್ತು ಅಧಿಕಾರಿಗಳಿಗೆ ಆದೇಶಗಳನ್ನು ಮತ್ತು ಸೂಚನೆಗಳನ್ನು ನೀಡುವುದು.

ಯಾವಾಗ ರಾಷ್ಟ್ರಪತಿಯವರು ಇಂತಹ ಕ್ರಮಗಳನ್ನು ತೆಗೆದುಕೊಳ್ಳುತ್ತಾರೋ ಆವಾಗ ಅವರು ಈ ಕುರಿತು ಒಕ್ಕೂಟದ ಶಾಸನಸಭೆಗೆ ವರದಿ ಮಾಡಬೇಕು ಮತ್ತು ಅವರು ತೆಗೆದುಕೊಂಡ ಕ್ರಮವು ಶಾಸನಸಭೆಯ ಉಭಯಸದನಗಳಿಂದ ಅವರು ಕ್ರಮ ತೆಗೆದುಕೊಂಡ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ಊರ್ಜಿತಗೊಳ್ಳದಿದ್ದರೆ, ಆ ಪ್ರಾಂತ್ಯದಲ್ಲಿನ ಸಾಮಾನ್ಯ ಸಂವಿಧಾನವು ಮರುಸ್ಥಾಪಿಸಲ್ಪಡುತ್ತದೆ. ಪರಿಸ್ಥಿತಿಯು ಒಕ್ಕೂಟದ ಶಾಸನಸಭೆ ಮತ್ತು ಸಂವಿಧಾನದಿಂದ ಪರಿಶೀಲಿಸಲ್ಪಡಬೇಕು, ಆವಶ್ಯಕವೆನಿಸಿದರೆ, ತುರ್ತುಪರಿಸ್ಥಿತಿಯ ಕ್ರಮವು ಪ್ರತಿ ಆರು ತಿಂಗಳುಗಳಿಗೆ ಅಂಗೀಕಾರಗೊಳ್ಳಬಹುದು.

ತುರ್ತುಪರಿಸ್ಥಿತಿಯು ಹತೋಟಿಗೆ ಬಂದಿದೆ ಎಂಬುದು ದೃಢಪಟ್ಟ ತತ್‌ಕ್ಷಣವೇ ರಾಷ್ಟ್ರಪತಿಯವರು ಆ ಪ್ರಾಂತ್ಯದಲ್ಲಿ ಸಾಮಾನ್ಯ ಸಂವಿಧಾನವನ್ನು ಮರುಸ್ಥಾಪಿಸಬೇಕು.' "

ಇದು ಪ್ರಾಂತೀಯ ಸಂವಿಧಾನಕ್ಕೆ ಈಗಾಗಲೇ ಸೇರ್ಪಡೆ ಮಾಡಲಾಗಿರುವ ಉಪಬಂಧದ ಜೊತೆಗೆ ಬೆಂಬಲಪೂರ್ವಕವಾಗಿ ಬಂದಿರುವುದಾಗಿದೆ. ಈಗ ತೆಗೆದುಕೊಳ್ಳಲಾಗಿರುವ ಶ್ರೀ ಗುಪ್ತೆಯವರ ತಿದ್ದುಪಡಿಯ ಪ್ರಕಾರ, ತುರ್ತು ಕ್ರಮ ತೆಗೆದುಕೊಳ್ಳುವುದಕ್ಕೆ ಗವರ್ನರ್ ಅವರಿಗೆ ಎರಡು ವಾರಗಳವರೆಗೆ ಅಧಿಕಾರವಿರುತ್ತದೆ. ಒಂದು ವೇಳೆ ಅತ್ಯಾವಶ್ಯಕತೆ ಕಂಡುಬಂದರೆ, ಅವರು ರಾಷ್ಟ್ರಪತಿಯವರ ಅಂಗೀಕಾರ ಪಡೆಯಬೇಕಾಗುತ್ತದೆ. ಒಂದು ವೇಳೆ ತುರ್ತುಪರಿಸ್ಥಿತಿ ಉದ್ಭವಿಸಿದರೆ ಮತ್ತು ಇದಕ್ಕೆ ಕ್ರಮ ತೆಗೆದುಕೊಳ್ಳಲು ಎರಡು ವಾರಗಳ ಸಮಯ ಸಾಲದೇ ಇದ್ದರೆ, ಆಗ ಮಾತ್ರ ರಾಷ್ಟ್ರಪತಿ ಮತ್ತು ಒಕ್ಕೂಟದ ಸರ್ಕಾಗವು ಕ್ರಮ ತೆಗೆದುಕೊಳ್ಳಬಹುದಾಗಿದೆ. ರಾಷ್ಟ್ರಪತಿಯವರು ಕ್ರಮ ತೆಗೆದುಕೊಳ್ಳಬೇಕಾದ ಎರಡು ಆಕಸ್ಮಿಕ ಸಂಭವಗಳನ್ನು ನಾನು ವರ್ಣಿಸಿದ್ದೇನೆ. ಮೊದಲನೆಯದಾಗಿ, ತಮಗೆ ನೀಡಲಾದ ವಿಶೇಷ ಅಧಿಕಾರವನ್ನು ಬಳಸಿಕೊಂಡು ಪರಿಸ್ಥಿತಿಯನ್ನು ನಿಭಾಯಿಸಲು

ತಮ್ಮಿಂದ ಸಾಧ್ಯವಿಲ್ಲ ಎಂದು ಗವರ್ನರ್ ಅವರು ವರದಿ ನೀಡಿದಾಗ. ಎರಡನೆಯದಾಗಿ, ಒಂದು ವೇಳೆ ಪ್ರಾಂತೀಯ ಸರ್ಕಾರವು ಏನನ್ನೂ ಮಾಡಲು ಅಸಾಧ್ಯವಾದ ಮಟ್ಟಕ್ಕೆ ಕುಸಿದರೆ ಮತ್ತು ಪರಿಸ್ಥಿತಿಯನ್ನು ನಿಭಾಯಿಸಲು ಶಕ್ತವಾದ ಅಧಿಕಾರ ಅಲ್ಲಿ ಇಲ್ಲದಿದ್ದಾಗ, ರಾಷ್ಟ್ರಪತಿಯವರು ಸ್ವಂತ ಉಪಕ್ರಮದಲ್ಲಿ ಕ್ರಮ ತೆಗೆದುಕೊಳ್ಳಬಹುದಾಗಿದೆ. ಹಾಗೆ ಅವರು ಮಾಡಿದಾಗ, ಅವರು ಒಕ್ಕೂಟದ ಶಾಸನಸಭೆಗೆ ವರದಿ ಮಾಡಬೇಕಾಗುತ್ತದೆ ಮತ್ತು ಆರು ತಿಂಗಳಲ್ಲಿ ಒಮ್ಮೆ ಹಾಗೆ ಮಾಡಬಹುದು ಮತ್ತು ತುರ್ತುಪರಿಸ್ಥಿತಿಯು ಮರೆಯಾಗುತ್ತಿದ್ದಂತೆಯೇ ಸಾಮಾನ್ಯ ಸಂವಿಧಾನವು ಮರುಸ್ಥಾಪನೆಯಾಗುತ್ತದೆ.

ನನಗನ್ನಿಸುತ್ತದೆ, ಎಲ್ಲ ವಿಷಯಗಳೂ ತೀರ ತರ್ಕಬದ್ಧವಾಗಿವೆ ಮತ್ತು ಸಂಪೂರ್ಣವಾಗಿ ಆವಶ್ಯಕವಾಗಿವೆ. ಉದಾಹರಣೆಗೆ: ಒಂದು ವೇಳೆ ಪ್ರಾಂತ್ಯದಲ್ಲಿನ ಪೊಲೀಸ್ ವ್ಯವಸ್ಥೆ ಕುಸಿದುಬಿದ್ದರೆ ಮತ್ತು ಆ ವಿಷಯದಲ್ಲಿ ಗವರ್ನರ್ ಅವರು ಏನೂ ಮಾಡುವುದು ಅಸಾಧ್ಯವಾದರೆ, ಅವರು ರಾಷ್ಟ್ರಪತಿಯವರ ಅಧಿಕಾರವನ್ನು ಬೇಡಿಕೊಳ್ಳಬೇಕಾಗುತ್ತದೆ ಮತ್ತು ಈ ಉಪಬಂಧವು ರಾಷ್ಟ್ರಪತಿಯವರಿಗೆ ಈ ಅಧಿಕಾರವನ್ನು ನೀಡುತ್ತದೆ. ಆದ್ದರಿಂದ, ನಾನು ಸಲಹೆ ಮಾಡಿದ ನೂತನ ಉಪಬಂಧವು ಇಡೀ ಸದನದಿಂದ ಅವಿರೋಧವಾಗಿ ಅಂಗೀಕಾರವಾಗುತ್ತದೆಂದು ಭಾವಿಸುತ್ತೇನೆ.

**ಶ್ರೀ ಎಚ್.ವಿ. ಕಾಮತ್** : ಮಾನ್ಯರೆ, ಶ್ರೀ ಸಂತಾನಮ್ ಅವರ ಪ್ರಸ್ತಾವವು ಭಾಗ ೮ರ ಉಪಬಂಧದೊಂದಿಗೆ ಸಂಬಂಧ ಹೊಂದಿಲ್ಲದಿರುವುದನ್ನು ಅಥವಾ ಅದಕ್ಕೆ ಸಮಂಜಸವಲ್ಲದಿರುವುದನ್ನು ಪರಿಗಣಿಸಿದಾಗ, ಇದಕ್ಕೆ ಭಾಗ ೮ಎ ಎಂದು ನಮೂದಿಸುವುದು ಏಕೆಂದು ನನಗೆ ಅರ್ಥವಾಗುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಅವರು ಇನ್ನೊಂದು ವಿಭಾಗ ೮ಎ, ತುರ್ತುಪರಿಸ್ಥಿತಿ ಅಧಿಕಾರದ ಸೇರ್ಪಡೆಗಾಗಿ ಮಂಡಿಸಿದ್ದಾರೆ.

**ಶ್ರೀ ಬಿ.ಎಮ್. ಗುಪ್ತೆ** (ಬಾಂಬೆ : ಸಾಮಾನ್ಯ) : ಮಾನ್ಯರೆ, ನಾನು ಮಂಡಿಸಲು ಕೋರುತ್ತೇನೆ :

"ಭಾಗ ೮ರ ಅನಂತರ ಈ ಕೆಳಗಿನ ಹೊಸ ಭಾಗವನ್ನು ಸೇರಿಸಬೇಕು:

**ಭಾಗ ೮ಎ–ತುರ್ತುಪರಿಸ್ಥಿತಿಯ ಅಧಿಕಾರಗಳು**

'೧. (೧) ಪ್ರಾಂತ್ಯದ ಗವರ್ನರ್ ಅವರಿಂದ ಈ ಸಂವಿಧಾನದ ಪ್ರಕರಣ ... ಭಾಗ...ರ ಅಡಿಯಲ್ಲಿ ವರದಿ ಮಾಡಲ್ಪಟ್ಟಾಗ, ತಮ್ಮ ಸಚಿವಸಂಪುಟದೊಂದಿಗೆ ಸಂಪರ್ಕಿಸಿದ ಅನಂತರ ಒಕ್ಕೂಟದ ರಾಷ್ಟ್ರಪತಿಯವರು, ತಾವು ಊಹಿಸುವ ಎಲ್ಲ ಅಥವಾ ಪ್ರಾಂತೀಯ ಸರ್ಕಾರ ಅಥವಾ ಉಚ್ಚನ್ಯಾಯಾಲಯವನ್ನು ಹೊರತುಪಡಿಸಿದ ಅಧಿಕಾರ, ಗವರ್ನರ್ ಅವರಿಂದ ಹೊರಡಿಸಲಾದ ಘೋಷಣೆಯನ್ನು ದೃಢಪಡಿಸುವ, ಬದಲಾಯಿಸುವ ಅಥವಾ ತೆಗೆದುಹಾಕುವ ಅಧಿಕಾರವನ್ನು ಪ್ರಯೋಗಿಸಬಹುದು.

(೨) ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಘೋಷಣೆಯು, ಅದರ ಮುಂದುವರಿಕೆಯನ್ನು ಕುರಿತು ಒಕ್ಕೂಟದ ಶಾಸನಸಭೆಯಿಂದ ಸಮಯದಿಂದ ಸಮಯಕ್ಕೆ ನಿರ್ಣಯವನ್ನು ಅಂಗೀಕರಿಸದೇ ಇದ್ದರೆ, ಎರಡು ತಿಂಗಳುಗಳ ವಾಯಿದೆಯೊಳಗೆ ಮುಗಿದುಹೋಗುತ್ತದೆ.' "

ಈ ರೀತಿಯ ಖಂಡವು ಏಕೆ ಆವಶ್ಯಕ ಎಂಬುದನ್ನು ಶ್ರೀ ಸಂತಾನಮ್ ಅವರು ಈಗಾಗಲೇ ತೋರಿಸಿಕೊಟ್ಟಿದ್ದಾರೆ. ರಾಷ್ಟ್ರಪತಿಯವರ ಬಳಿಯಲ್ಲಿ ಕೆಲವು ತುರ್ತುಪರಿಸ್ಥಿತಿಯ ಅಧಿಕಾರಗಳು ಇರಬೇಕೆಂದು ಹೇಳುವ ಪ್ರಾಂತೀಯ ಸಂವಿಧಾನದ ಖಂಡ ೧೫ನ್ನು ಅಂಗೀಕರಿಸುವ ಮೂಲಕ ಈಗಾಗಲೇ ನಾವು ಇದರ ಸ್ಥಾನವನ್ನು ಒಪ್ಪಿಕೊಂಡಿದ್ದೇವೆ. ಆದರೆ ವರದಿಯಲ್ಲಿ ಇಂತಹ ಯಾವುದೇ ಉಪಬಂಧವನ್ನು ಮಾಡಲಾಗಿಲ್ಲ; ಹಾಗಾಗಿಯೇ ನನ್ನ ತಿದ್ದುಪಡಿ ಮತ್ತು ಶ್ರೀ ಸಂತಾನಮ್ ಅವರ ತಿದ್ದುಪಡಿ. ಈ ಲೋಪವನ್ನು ಸರಿಪಡಿಸುವುದಕ್ಕಾಗಿಯೇ ಇವೆರಡನ್ನೂ ವಿನ್ಯಾಸಮಾಡಲಾಗಿದೆ. ಗವರ್ನರ್ ಅವರಿಂದ ವರದಿಯು ತಲಪಿದ

ತತ್‌ಕ್ಷಣವೇ ರಾಷ್ಟ್ರಪತಿಯವರು ತಮ್ಮ ಸಚಿವಸಂಪುಟದೊಂದಿಗೆ ಚರ್ಚಿಸಿ, ತಮ್ಮ ಘೋಷಣೆ ಹೊರಡಿಸುವುದಕ್ಕೆ ನನ್ನ ತಿದ್ದುಪಡಿಯು ಅವಕಾಶ ಕಲ್ಪಿಸುತ್ತದೆ. ಗವರ್ನರ್ ಅವರು ತತ್‌ಕ್ಷಣದ ಕ್ರಮವನ್ನು ಕೈಗೊಳ್ಳುವ ಅಧಿಕಾರವನ್ನು ಹೊಂದಿರುವುದರಿಂದ, ತಮ್ಮ ಸಚಿವಸಂಪುಟದ ಸಲಹೆಯನ್ನು ಪಡೆಯದೆಯೇ ಕ್ರಮ ತೆಗೆದುಕೊಳ್ಳಬೇಕಾದ ತುರ್ತು, ಅತ್ಯವಸರ ರಾಷ್ಟ್ರಪತಿಯವರಿಗೆ ಇರುವುದಿಲ್ಲ. ಅವರು (ರಾಷ್ಟ್ರಪತಿಯವರು) ತಮ್ಮ ಸಚಿವಸಂಪುಟವನ್ನು ಸಂಪರ್ಕಿಸಿದ ಅನಂತರವೇ ಇದನ್ನು ಮಾಡುತ್ತಾರೆ; ಈ ಅಂಶವೇ ನನ್ನ ತಿದ್ದುಪಡಿ ಮತ್ತು ಶ್ರೀ ಸಂತಾನಮ್ ಅವರ ತಿದ್ದುಪಡಿಯ ನಡುವಣ ವ್ಯತ್ಯಾಸವಾಗಿದೆ ಎಂಬುದನ್ನು ನಾನು ಒತ್ತಿ ಹೇಳಬಯಸುತ್ತೇನೆ.

**ಶ್ರೀ ಕೆ. ಸಂತಾನಮ್ :** ಮಾನ್ಯರೆ, ಒಕ್ಕೂಟದ ಸಂವಿಧಾನದ ಅಡಿಯಲ್ಲಿ ರಾಷ್ಟ್ರಪತಿಯವರು ಯಾವತ್ತೂ ತಮ್ಮ ಸಚಿವರ ಸಲಹೆಯ ಮೇರೆಗೇ ಕಾರ್ಯನಿರ್ವಹಿಸುತ್ತಾರೆ.

**ಶ್ರೀ ಬಿ.ಎಮ್. ಗುಪ್ತೆ :** ಅದು ಸರಿ. ನಾನು ಅದನ್ನೇ ಒತ್ತಿ ಹೇಳುತ್ತೇನೆ. ಗವರ್ನರ್ ಅವರ ಅಧಿಕಾರವನ್ನು ಕುರಿತಾದ ಚರ್ಚೆಯನ್ನು ನಡೆಸುತ್ತಿದ್ದ ಸಂದರ್ಭದಲ್ಲಿಯೇ, ರಾಷ್ಟ್ರಪತಿಯವರಿಗೆ ಆಜ್ಞೆಯನ್ನು ರದ್ದುಮಾಡುವ ಅಧಿಕಾರವನ್ನು ನೀಡಬೇಕು ಎಂಬುದನ್ನು ಒಪ್ಪಕೊಳ್ಳಲಾಗಿದೆ. ಗವರ್ನರ್ ಅವರಿಗೆ ಅಧಿಕಾರ ನೀಡುವುದಕ್ಕೆ ಸಂಬಂಧಪಟ್ಟಂತೆ ಭಾರೀ ವಿವಾದ ಉಂಟಾಗಿತ್ತು; ಆದರೆ, ರಾಷ್ಟ್ರಪತಿಯವರಿಗೆ ಸಂಬಂಧಪಟ್ಟಂತೆ ಒಮ್ಮತದ ಅಭಿಪ್ರಾಯ ವ್ಯಕ್ತವಾಗಿತ್ತು. ಈಗ ಅಧಿಕಾರವನ್ನು ರಾಷ್ಟ್ರಪತಿಯವರಿಗೆ ನೀಡಲಾಗಿದೆ; ಆದಾಗ್ಯೂ, ಅವರು ತಮ್ಮ ಸಚಿವರ ಸಲಹೆಯನ್ನು ಪಡೆದುಕೊಳ್ಳಬೇಕು ಎಂಬ ನಿಬಂಧನೆಯೊಂದಿಗೆ.

ಶ್ರೀ ಸಂತಾನಮ್ ಅವರ ತಿದ್ದುಪಡಿ ಮತ್ತು ನನ್ನದರ ನಡುವಣ ಇನ್ನೊಂದು ವ್ಯತ್ಯಾಸವೇನೆಂದರೆ, ಅವರು ಆರು ತಿಂಗಳಿನ ಅವಧಿಯನ್ನು ನೀಡಿದ್ದಾರೆ; ಆದರೆ ನಾನು ಕೇವಲ ಎರಡು ತಿಂಗಳುಗಳ ಅವಧಿಯನ್ನು ಉಲ್ಲೇಖಿಸಿದ್ದೇನೆ. ಇದು, ಅಸಾಮಾನ್ಯ ಪರಿಸ್ಥಿತಿಗಳಲ್ಲಿ ವ್ಯವಹರಿಸುವುದಕ್ಕಾಗಿ ನೀಡಿದ ಅಧಿಕಾರವಾಗಿದೆ ಮತ್ತು ನನಗನ್ನಿಸುತ್ತದೆ, ಕೇವಲ ಕನಿಷ್ಠ ಅಧಿಕಾರವನ್ನು ನೀಡಬೇಕು ಮತ್ತು ಎರಡು ತಿಂಗಳುಗಳ ಅವಧಿಯು ಶಾಸನಸಭೆಯನ್ನು ಒಟ್ಟುಗೂಡಿಸುವುದಕ್ಕೆ ಬೇಕಾದಷ್ಟಾಯಿತು. ಅತ್ಯಂತ ಆವಶ್ಯಕವಾದ ಮಟ್ಟದಲ್ಲಿ ಮಾತ್ರ ರಾಷ್ಟ್ರಪತಿಯವರಿಗೆ ಅಧಿಕಾರವನ್ನು ನೀಡಬೇಕು. ಈ ವಿಷಯದಲ್ಲಿ ಒಕ್ಕೂಟದ ಶಾಸನಸಭೆಯು ಅಂತಿಮ ಅಧಿಕಾರವಾಗಿದೆ ಮತ್ತು ಆದ್ದರಿಂದ, ಶಾಸನಸಭೆಯಿಂದ ಪ್ರಮಾಣೀಕರಣವನ್ನು ಪಡೆದುಕೊಳ್ಳಬೇಕು. ರಾಷ್ಟ್ರಪತಿಯವರ ಕ್ರಮವನ್ನು ಎರಡು ತಿಂಗಳುಗಳ ಒಳಗೆ ಪ್ರಮಾಣೀಕರಿಸದಿದ್ದರೆ, ರಾಷ್ಟ್ರಪತಿಯವರು ಮಾಡಿದ ಘೋಷಣೆ (ಆದೇಶ)ಯು ರದ್ದಾಗುವುದಕ್ಕೆ ನಾನು ಅವಕಾಶ ಕಲ್ಪಿಸಿದ್ದೇನೆ. ಶಾಸನಸಭೆಯೇ ಅಂತಿಮವಾಗಿರುವುದರಿಂದ ಅದರ ಅಧಿಕಾರದ ಮೇಲೆ ನಾನು ಸಮಯದ ಮಿತಿಯನ್ನು ವಿಧಿಸಿಲ್ಲ. ಒಂದು ವೇಳೆ ಆವಶ್ಯಕವಾದರೆ, ಶಾಸನಸಭೆಯು ಈ ಘೋಷಣೆಗೆ ಕಾಲ ಕಾಲಕ್ಕೆ ತನ್ನ ಸಮ್ಮತಿಯನ್ನು ನೀಡುತ್ತಿರಬಹುದು. ಒಂದು ವೇಳೆ ಅದು ಗಂಭೀರ ತುರ್ತುಪರಿಸ್ಥಿತಿಯಾದರೆ, ಘೋಷಣೆ (ರಾಷ್ಟ್ರಪತಿ ಆಡಳಿತ) ಕೊನೆಯಾಗುವುದಿಲ್ಲ; ಆದರೆ, ಒಂದು ವೇಳೆ ಅದು ಉಪತೀವ್ರ (ಸಬ್ ಅಕ್ಯೂಟ್) ರೂಪದಲ್ಲಿ ಮುಂದುವರಿಯಬೇಕಿದ್ದರೆ, ಶಾಸನಸಭೆಯು ಈ ಘೋಷಣೆಯನ್ನು ಕಾಲ ಕಾಲಕ್ಕೆ ಮುಂದುವರಿಸಬಹುದು.

ಆದ್ದರಿಂದ, ಮಾನ್ಯರೆ, ನನ್ನ ತಿದ್ದುಪಡಿಯು ಉತ್ತಮವಾದ ಉಪಬಂಧಗಳನ್ನು ಒಳಗೊಂಡಿದೆ ಎಂದು ಹೇಳಬಯಸುತ್ತೇನೆ. ವಾಸ್ತವವಾಗಿ ನನ್ನ ತಿದ್ದುಪಡಿಯು, ಘೋಷಣೆಯನ್ನು ಹೊರಡಿಸುವ ಅಧಿಕಾರವನ್ನು ಸರ್ಕಾರಕ್ಕೆ ನೀಡುವ ಅವಕಾಶವನ್ನು ಸದನವು ಒಪ್ಪಿಕೊಳ್ಳುವುದರಿಂದ ಉಂಟಾಗುವ ಪರಿಸ್ಥಿತಿಯನ್ನು ಆಧರಿಸಿದೆ. ಆದರೆ, ಶ್ರೀ ಸಂತಾನಮ್ ಅವರ ತಿದ್ದುಪಡಿಯು ಆ ಪರಿಸ್ಥಿತಿಗೆ ಹೊಂದುವುದಿಲ್ಲ. ಇದು ರಾಷ್ಟ್ರಪತಿಯವರ ಘೋಷಣೆಗೆ ಸೂಚಿಸುವುದೇ ಇಲ್ಲ. ಕೇವಲ ವರದಿ ನೀಡುವ ಅಧಿಕಾರವು ಗವರ್ನರ್ ಅವರ ಬಳಿಯಲ್ಲಿರುತ್ತದೆ ಎಂಬ ಊಹನೆಯನ್ನು ಆಧರಿಸಿದೆ. ಆದ್ದರಿಂದ, ನನ್ನ ತಿದ್ದುಪಡಿಯು ಹೆಚ್ಚು ಉತ್ತಮ ಉಪಬಂಧವನ್ನು

ಕಲ್ಪಿಸುತ್ತದೆ ಮತ್ತು ಸಹಜವಾಗಿ ಇದು ಸದನದಿಂದ ಅಂಗೀಕಾರವಾಗಬೇಕು ಎಂದು ನಾನು ವಿನಂತಿಸುತ್ತೇನೆ.

**ಶ್ರೀ ಆರ್.ಕೆ. ಸಿಧ್ವಾ :** ಈ ತಿದ್ದುಪಡಿಗಳಲ್ಲಿ ಯಾವುದನ್ನು ಒಪಿಕೊಳ್ಳಲು ಸರ್ ಗೋಪಾಲಸ್ವಾಮಿಯವರು ಸಿದ್ಧರಿದ್ದಾರೆ ಎಂದು ತಿಳಿಸಿದರೆ, ಅದು ಸಹಜವಾಗಿ ಚರ್ಚೆಯನ್ನು ಸರಾಗಗೊಳಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು :** ಸರ್ ಎನ್. ಗೋಪಾಲಸ್ವಾಮಿಯವರೇ, ನೀವು ಈಗ ಏನನ್ನಾದರೂ ಹೇಳಲು ಬಯಸುತ್ತೀರಾ?

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ಮಾನ್ಯ ಸಭಾಧ್ಯಕ್ಷರೆ,

**ಮಾನ್ಯ ಸಭಾಧ್ಯಕ್ಷರು :** ಶ್ರೀ ಅಯ್ಯಂಗಾರ್...

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ಮಾನ್ಯರೇ, ಯಾವ ಅಯ್ಯಂಗಾರ್?

**ಮಾನ್ಯ ಸಭಾಧ್ಯಕ್ಷರು :** ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ಶ್ರೀ ಸಿಧ್ವಾ ಅವರು ಕೇಳಿದ ಪ್ರಶ್ನೆಗೆ ಕರಾರುವಾಕ್ಕಾಗಿ, ಸ್ಪಷ್ಟವಾಗಿ ನಾನು ಉತ್ತರಿಸಲಾರೆ; ಆದರೆ, ನನ್ನ ಅಭಿಪ್ರಾಯವನ್ನು ಖಂಡಿತವಾಗಿ ವ್ಯಕ್ತಪಡಿಸುತ್ತೇನೆ. ಮಂಡಿಸಲಾಗಿರುವ ಎರಡೂ ತಿದ್ದುಪಡಿಗಳು ಯಾವ ಉಪಬಂಧವನ್ನು ಮಾಡಲು ಹೊರಟಿವೆಯೋ ಅದನ್ನು ಪ್ರಾಂತೀಯ ಸಂವಿಧಾನದ ವಿಷಯದಲ್ಲಿ ಸದನವು ಈಗಾಗಲೇ ಅಂಗೀಕರಿಸಿದೆ. ಸದನವು ನೆನಪಿಸಿಕೊಳ್ಳಬಹುದು, ನಾವು ಪ್ರಾಂತೀಯ ಸಂವಿಧಾನವನ್ನು ಕುರಿತು ಚರ್ಚಿಸುತ್ತಿದ್ದ ಸಂದರ್ಭದಲ್ಲಿ, ಒಂದು ಖಂಡವನ್ನು ಆ ಸಂವಿಧಾನಕ್ಕೆ ಹಾಕಲಾಗಿತ್ತು; ಅದು ಹೆಚ್ಚು ಕಡಿಮೆ, ಭಾರತ ಸರ್ಕಾರ ಅಧಿನಿಯಮ ೧೯೩೫ರ ಪ್ರಕರಣ ೯೩ರಂತೆಯೇ ಇದೆ; ಆದರೆ, ವಿವರಣೆಯಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಎಲ್ಲವನ್ನೂ ಅಥವಾ ಸರ್ಕಾರದ ಯಾವುದೇ ಕಾರ್ಯವಿಧಾನದ ಬಗ್ಗೆ ಅಥವಾ ಪ್ರಾಂತೀಯ ಸರ್ಕಾರಕ್ಕಿರುವ ಯಾವುದೇ ಅಧಿಕಾರ ಅಥವಾ ಜಾರಿಗೊಳಿಸುವ ಅಧಿಕಾರವನ್ನು ಮತ್ತು ಮುಂತಾದುವನ್ನು ತಾವೇ ಅಂದಾಜು ಮಾಡುವ ಅಧಿಕಾರವನ್ನು ಗವರ್ನರ್ ಅವರಿಗೆ ನೀಡಲಾಗಿದೆ. ಅನಂತರ ಅಲ್ಲಿ ಒಂದು ಉಪಖಂಡವಿದೆ; ಅದು ಹೇಳುತ್ತದೆ :

> "ಗವರ್ನರ್ ಅವರ ಘೋಷಣೆಯ ಬಗ್ಗೆ ಒಕ್ಕೂಟದ ಅಧ್ಯಕ್ಷರಿಗೆ ಗವರ್ನರ್ ತಿಳಿಸಬೇಕು ಮತ್ತು ಅದನ್ನು ಆಧರಿಸಿ ಅದು ತಮ್ಮ ತುರ್ತುಪರಿಸ್ಥಿತಿಯ ಅಧಿಕಾರದ ಅಡಿಯಲ್ಲಿ ಬರುತ್ತದೆಯೇ ಎಂಬುದನ್ನು ಪರಿಗಣಿಸಿ ಅವರು ಸೂಕ್ತ ಕ್ರಮ ಕೈಗೊಳ್ಳಬಹುದು."

ಇದು ಆವಶ್ಯಕವಾಗುತ್ತದೆ; ಆದ್ದರಿಂದ, ಪ್ರಾಂತ್ಯಗಳಲ್ಲಿ ಉದ್ಭವಿಸಬಹುದಾದ ನಿರ್ದಿಷ್ಟ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ರಾಷ್ಟ್ರಪತಿಯವರ ಅಧಿಕಾರವು ಏನಾಗಿರಬೇಕು ಎಂಬುದನ್ನು ಸೂಚಿಸುವ ಉಪಬಂಧವನ್ನು ನಾವು ಸಂವಿಧಾನದಲ್ಲಿ ಎಲ್ಲಿಯಾದರೂ ಮಾಡಲೇಬೇಕು ಮತ್ತು ಆ ದೃಷ್ಟಿಕೋನದಿಂದ, ಈ ಎರಡೂ ತಿದ್ದುಪಡಿಗಳು ಸಂವಿಧಾನದ ಚೌಕಟ್ಟಿನಲ್ಲಿ ಇರುವ ಅಂಶವನ್ನೇ ಹೊರಹಾಕಲು ಪ್ರಯತ್ನಿಸುತ್ತವೆ ಎಂದು ನಾನು ಭಾವಿಸುತ್ತೇನೆ. ನಾವು ಪರಿಗಣಿಸಬೇಕಾದ ಅಂಶವೇನೆಂದರೆ, ಯಾವ ಪ್ರಕಾರದ ಉಪಬಂಧವನ್ನು ಮಾಡಬೇಕು ಎಂಬುದು. ಬಹುಮಟ್ಟಿಗೆ ಎಲ್ಲವನ್ನೂ ಅಥವಾ ಪ್ರಾಂತೀಯ ಸಂವಿಧಾನದ ಯಾವುದೇ ಭಾಗವನ್ನು ಅಮಾನತ್ತಿನಲ್ಲಿಡುವ ಮತ್ತು ಪ್ರಾಂತೀಯ ಸಂವಿಧಾನದಲ್ಲಿ ಉಲ್ಲೇಖಿಸಲಾಗಿರುವ ವಿವಿಧ ಅಧಿಕಾರವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ಗವರ್ನರ್ ಅವರಿಗೆ ನೀಡಲಾಗಿದೆ. ಅದನ್ನು ಮಾಡಿದ ಅನಂತರ, ಅವರು ರಾಷ್ಟ್ರಪತಿಯವರಿಗೆ ವರದಿಯನ್ನು ಸಿದ್ಧಪಡಿಸಬೇಕು ಮತ್ತು ಒಂದು ವೇಳೆ ಏನೂ ಸಂಭವಿಸದಿದ್ದರೆ, ಘೋಷಣೆಯು ಎರಡು ವಾರಗಳ ಅವಧಿಯಲ್ಲಿ ಸ್ಥಗಿತಗೊಳ್ಳುತ್ತದೆ. ತುರ್ತು ಪರಿಸ್ಥಿತಿಯು ಎರಡು ವಾರಗಳಿಗಿಂತ ಹೆಚ್ಚು ಅವಧಿಗೆ ಮುಂದುವರಿಯಬಹುದಾದ ಸ್ವಭಾವದ್ದಾಗಿರಬಹುದು ಅಥವಾ ನಿರ್ದಿಷ್ಟ ಪರಿಸ್ಥಿತಿಯನ್ನು ನಿಭಾಯಿಸಲು ಗವರ್ನರ್ ಅವರು ತೆಗೆದುಕೊಳ್ಳಲು ಬಯಸುವ ಎಲ್ಲ ಅಸಾಧಾರಣ ಮಾನದಂಡಗಳನ್ನು ಜಾರಿ ಮಾಡುವ ಆವಶ್ಯಕತೆ ಇಲ್ಲವೆಂದು ಒಕ್ಕೂಟದ ಅಧ್ಯಕ್ಷರು (ರಾಷ್ಟ್ರಪತಿಗಳು)

ಪರಿಗಣಿಸಬಹುದು. ಆದ್ದರಿಂದ, ಪ್ರಾಂತ್ಯದ ಗವರ್ನರ್ ಅವರಿಂದ ಬಂದ ವರದಿಯ ಮೇಲೆ ಕ್ರಮ ತೆಗೆದುಕೊಳ್ಳುವ ರೀತಿಯಲ್ಲಿ ಒಕ್ಕೂಟದ ಅಧ್ಯಕ್ಷರಿಗೆ (ರಾಷ್ಟ್ರಪತಿಯವರಿಗೆ) ನಾವು ಒಂದಿಷ್ಟು ಅಧಿಕಾರ ನೀಡುವುದು ಆವಶ್ಯಕವಾಗಿದೆ.

ಗವರ್ನರ್ ಅವರಿಂದ ವರದಿಯನ್ನು ಸ್ವೀಕರಿಸಿದ ಅನಂತರ ರಾಷ್ಟ್ರಪತಿಯವರು ತೆಗೆದುಕೊಳ್ಳಬಹುದಾದ ಅನೇಕ ವಿಸ್ತೃತ ಮಾನದಂಡಗಳನ್ನು, ಉಪಾಯಗಳನ್ನು ಶ್ರೀ ಸಂತಾನಮ್ ಅವರು ತಮ್ಮ ತಿದ್ದುಪಡಿಯಲ್ಲಿ ಸೂಚಿಸಿದ್ದಾರೆ. ಅವರು ತಮ್ಮ ತಿದ್ದುಪಡಿಯಲ್ಲಿ ಸಲಹೆ ಮಾಡಿದ ಎಲ್ಲ ಉಪಾಯಗಳ, ಮಾನದಂಡಗಳ ವಿವರವನ್ನು ಒಪ್ಪಿಕೊಳ್ಳುವುದು ಈಗ ನನಗೆ ಕಷ್ಟವಾಗಿದೆ. ಉದಾಹರಣೆಗೆ: ಈ ಅಧಿಕಾರವು, ರಾಷ್ಟ್ರಪತಿಯವರಿಂದ ಪ್ರಾಂತೀಯ ಸಂವಿಧಾನವನ್ನು ಅಮಾನತ್ತುಗೊಳಿಸುವುದು, ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಸುಗ್ರೀವಾಜ್ಞೆಯನ್ನು ಘೋಷಣೆ ಮಾಡುವುದು ಮತ್ತು ಪ್ರಾಂತ್ಯದ ಗವರ್ನರ್ ಹಾಗೂ ಇತರ ಅಧಿಕಾರಿಗಳಿಗೆ ಆದೇಶ ಹಾಗೂ ಸೂಚನೆಗಳನ್ನು ನೀಡುವುದು ಮುಂತಾದವುಗಳನ್ನು ಒಳಗೊಂಡಿರಬೇಕು ಎಂದು ಅವರು ಸಲಹೆ ಮಾಡಿದ್ದಾರೆ. ಗವರ್ನರ್ ಅವರು ಕೆಲವು ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಅದು ಸರಿಯಾಗಿರಬಹುದು ಅಥವಾ ತಪ್ಪಾಗಿರಬಹುದು. ಒಂದು ವೇಳೆ ಅದು ಸರಿಯಾಗಿದ್ದರೆ, ಆ ಕ್ರಮವು ಸಾಮಾನ್ಯವಾಗಿ ಜಾರಿಯಲ್ಲಿರುವ ಎರಡು ವಾರಕ್ಕಿಂತಲೂ ಹೆಚ್ಚು ಕಾಲ ಮುಂದುವರಿಸುವ ಅರ್ಹತೆ ಹೊಂದಿರಬಹುದು. ಒಂದು ವೇಳೆ ಅದು ತಪ್ಪಾಗಿದ್ದರೆ, ಗವರ್ನರ್ ಅವರ ಘೋಷಣೆ (ಆದೇಶ)ಯನ್ನು ರದ್ದುಮಾಡುವ ಅಧಿಕಾರವು, ಪ್ರಾಂತೀಯ ಸಂವಿಧಾನಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಅಂಗೀಕರಿಸಲಾಗಿರುವ ಖಂಡದ ಅಡಿಯಲ್ಲಿ ರಾಷ್ಟ್ರಪತಿಯವರಿಗೆ ಇರುತ್ತದೆ. ತದನಂತರ, ನಿರ್ದಿಷ್ಟ ತುರ್ತುಪರಿಸ್ಥಿತಿಯನ್ನು ನಿಭಾಯಿಸಲು ತಾವು ಸೂಕ್ತವೆಂದು ಪರಿಗಣಿಸುವ ಕ್ರಮಗಳನ್ನು ರಾಷ್ಟ್ರಪತಿಯವರು ತೆಗೆದುಕೊಳ್ಳಬೇಕಾಗುತ್ತದೆ. ನಾವು ರಾಷ್ಟ್ರಪತಿಯವರಿಗೆ ನೀಡಲು ಹೊರಟಿರುವ ಅಧಿಕಾರವು ಶ್ರೀ ಸಂತಾನಮ್ ಅವರು ಸಲಹೆ ಮಾಡಿದ ರೀತಿಯಲ್ಲಿ ಅಷ್ಟೊಂದು ವಿಸ್ತಾರವಾಗಿರಬೇಕೇ ಎಂಬುದನ್ನು, ತುಂಬ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ ಎಂದು ನನಗನ್ನಿಸುತ್ತದೆ. ಇದು ಪ್ರಾಂತೀಯ ಸ್ವಾಯತ್ತತೆಯನ್ನು ಛಿದ್ರಮಾಡಬಹುದು; ನಮ್ಮಲ್ಲಿ ಅನೇಕ ಜನರು ಇದನ್ನು ಒಪ್ಪುವುದಕ್ಕೆ ಇಷ್ಟಪಡಲಾರರು; ಆದರೆ, ನಿರ್ದಿಷ್ಟ ಪರಿಸ್ಥಿತಿಯನ್ನು ನಿಭಾಯಿಸುವ, ನಿಯಂತ್ರಿಸುವ ಉದ್ದೇಶಕ್ಕಾಗಿ, ರಾಷ್ಟ್ರಪತಿಯವರು ಇಂತಹ ಅಧಿಕಾರವನ್ನು ಹೊಂದಿರುವುದು ಆವಶ್ಯಕವಾಗಿದೆ. ಉಪಬಂಧವನ್ನು ಇದರ ವಸ್ತುಸಾರ ಹಾಗೂ ಭಾಷೆ ಎರಡರಲ್ಲೂ ಹೆಚ್ಚು ಪರೀಕ್ಷಿಸುವುದಕ್ಕಾಗಿ ಮತ್ತು ಸಂವಿಧಾನ ರಚನಾಸಭೆಗೆ ಏನಾದರೂ ಸೂಚಿಸುವುದಕ್ಕಾಗಿ, ಯಾರು ಸಂವಿಧಾನದ ಮೂಲಪಾಠವನ್ನು ರಚಿಸುತ್ತಿದ್ದಾರೋ ಅವರಿಗೆ ವಹಿಸಲು ಶ್ರೀ ಸಂತಾನಮ್ ಅವರು ಒಂದು ವೇಳೆ ಅನುಮತಿ ನೀಡಿದರೆ, ಅದು, ಪ್ರಾಂತ್ಯದಲ್ಲಿ ಗವರ್ನರ್ ಅವರ ಕ್ರಮ ಮತ್ತು ಗವರ್ನರ್ ಅವರ ವರದಿಯ ಮೇಲೆ ರಾಷ್ಟ್ರಪತಿಯವರು ತೆಗೆದುಕೊಳ್ಳಬಹುದಾದ ಕ್ರಮಗಳ ನಡುವೆ ಸಮನ್ವಯ ಉಂಟುಮಾಡಬಹುದು. ಇದಕ್ಕೆ ಸಂಬಂಧಿಸಿದಂತೆ, ರಾಷ್ಟ್ರಪತಿಯವರಿಗೆ ನಿರ್ದಿಷ್ಟ ತುರ್ತುಪರಿಸ್ಥಿತಿಯ ಅಧಿಕಾರವನ್ನು ನೀಡಬೇಕೆಂಬ ಮೂಲತತ್ತ್ವವನ್ನು ಅಂಗೀಕರಿಸಲು ನಾನು ಸಿದ್ಧನಿದ್ದೇನೆ.

ಶ್ರೀ ಗುಪ್ತೆಯವರ ತಿದ್ದುಪಡಿಯ ವಿಷಯದಲ್ಲಿಯೂ ಸಹ ನಾನು ಇದೇ ವಿಷಯವನ್ನು ಹೇಳಲು ಬಯಸುತ್ತೇನೆ. ನಾನು ಸೂಚಿಸುತ್ತಿರುವುದರ ಒಟ್ಟಾರೆ ಫಲಿತಾಂಶವೇನೆಂದರೆ, ತುರ್ತುಪರಿಸ್ಥಿತಿಯ ಸಂದರ್ಭದಲ್ಲಿಯೂ ಕೂಡ ಪ್ರಾಂತ್ಯದ ಸಂಪೂರ್ಣ ಆಡಳಿತವನ್ನು ರಾಷ್ಟ್ರಪತಿಯವರಿಗೆ ಒಪ್ಪಿಸಲು ನಾನು ತಯಾರಿಲ್ಲ; ಆದರೆ, ನಿರ್ದಿಷ್ಟ ತುರ್ತುಪರಿಸ್ಥಿತಿಯನ್ನು ನಿಭಾಯಿಸುವ ಸಲುವಾಗಿ ಯಾವ ಕ್ರಮವು ಸೂಕ್ತವಾದುದು ಎಂಬುದನ್ನು ನಿರ್ಧರಿಸುವ ಸಲುವಾಗಿ ರಾಷ್ಟ್ರಪತಿಯವರಿಗೆ ನಿರ್ದಿಷ್ಟ ತುರ್ತುಪರಿಸ್ಥಿತಿಯ ಅಧಿಕಾರವನ್ನು ಒಪ್ಪಿಸಲು ನಾನು ತಯಾರಿದ್ದೇನೆ. ನಾನು ಆ ಮೂಲತತ್ತ್ವವನ್ನು ಸ್ವೀಕರಿಸುತ್ತೇನೆ. ಆದ್ದರಿಂದ, ನಾವು ಈ ಮೂಲತತ್ತ್ವವನ್ನು ಜಾರಿಗೊಳಿಸುವಂತಹ ಕೆಲವು ಅವಕಾಶಗಳನ್ನು ಕರಡಾಗಿ ಅನುವಾದಿಸಲು ಪ್ರಯತ್ನಿಸೋಣ ಎಂಬ ನನ್ನ ಭರವಸೆಯನ್ನು ಈ ಎರಡು ತಿದ್ದುಪಡಿಗಳ ಮಂಡನೆಕಾರರು ಒಪ್ಪುವುದಾದರೆ, ಇದು ಸದನದ

ಮುಂದೆ ಮತ್ತೊಮ್ಮೆ ಬಂದಾಗ ಕರಡನ್ನು ಪರಾಂಬರಿಸುವುದಕ್ಕೆ ಹಾಗೂ ಅವರು ಒತ್ತಿಹೇಳಲು ಬಯಸುವ ವಿವರಣೆಯ ತಿದ್ದುಪಡಿಗಳನ್ನು ಸೂಚಿಸುವುದಕ್ಕೆ ಶ್ರೀ ಸಂತಾನಮ್ ಮತ್ತು ಶ್ರೀ ಗುಪ್ತೆಯವರಿಗೆ ಸಮಯ ಸಿಗುತ್ತದೆ. ಅದು ಹಾಗಿದ್ದರೆ, ಈ ಭರವಸೆಯ ಆಧಾರದ ಮೇಲೆ ಅವರು ತಾವು ಸೂಚನೆ ನೀಡಿರುವ ತಿದ್ದುಪಡಿಗಳನ್ನು ಹಿಂದಕ್ಕೆ ಪಡೆಯುವಂತೆ ಕೇಳುತ್ತೇನೆ.

**ಶ್ರೀ ಕೆ. ಸಂತಾನಮ್ :** ಭರವಸೆಯು ಸಿಕ್ಕಿರುವ ಹಿನ್ನೆಲೆಯಲ್ಲಿ ನಾನು ನನ್ನ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲು ಕೋರುತ್ತೇನೆ.

**ಶ್ರೀ ಬಿ. ಎಮ್. ಗುಪ್ತೆ :** ಮಾನ್ಯರೇ, ನಾನು ನನ್ನ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯುತ್ತೇನೆ.

ಸದನದ ಅನುಮತಿಯ ಮೇರೆಗೆ ಈ ತಿದ್ದುಪಡಿಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು.

## ಭಾಗ ೯

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ನಾನು ಈ ಕೆಳಗಿನಂತೆ ಹೇಳಿರುವ ಭಾಗ ೯ಅನ್ನು ಮಂಡಿಸುತ್ತೇನೆ :

"ಸಲಹಾ ಸಮಿತಿಯ ವರದಿಯ ಮೇಲೆ ಸಂವಿಧಾನ ರಚನಾಸಭೆಯು ಅಂಗೀಕರಿಸಿದ ಅಲ್ಪಸಂಖ್ಯಾತರುಗಳ ರಕ್ಷಣೆಗೆ ಸಂಬಂಧಿಸಿದ ಉಪಬಂಧವನ್ನು ಸಂವಿಧಾನದಲ್ಲಿ ಅಳವಡಿಸಬೇಕು."

ಇದು ತುಂಬ ಸರಳವಾದ ಖಂಡವಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಮುಂದಿಟ್ಟಿರುವ ವಿಷಯ :

"ಭಾಗ ೯ ಈ ಸದನದಿಂದ ಅಂಗೀಕಾರವಾಗಬೇಕು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಅನಂತರ, ಜುಲೈ ೩೧, ೧೯೪೭ರಂದು ಗುರುವಾರ ಬೆಳಗಿನ ಹತ್ತು ಗಂಟೆಯವರೆಗೆ ಸಭೆಯನ್ನು ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ]*